‘ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ’ವನ್ನು ಕಟ್ಟಿ ಬೆಳೆಸಿದವರಲ್ಲಿ ಪ್ರೊ. ಎಂ.ವಿ. ಸೀತಾರಾಮಯ್ಯನವರು ಮುಖ್ಯರು. ಅವರು ಅದನ್ನು ೦೬ ಮೇ, ೧೯೭೯ರಲ್ಲಿ ಸ್ಥಾಪಿಸಿದರು. ಈ ಪ್ರತಿಷ್ಠಾನವನ್ನು ರಾಷ್ಟ್ರಕವಿ ಕುವೆಂಪು ಅವರು ೧೦ ಮಾರ್ಚ್, ೧೯೮೦ರಂದು ಉದ್ಘಾಟಿಸಿದರು. ಕರ್ನಾಟಕ ಸರ್ಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸಾರ್ವಜನಿಕರ ಸಹಕಾರ, ಸಹಾಯಗಳಿಂದ ಬೆಂಗಳೂರಿನ ನರಸಿಂಹರಾಜ ಕಾಲೋನಿಯಲ್ಲಿ ‘ಬಿ.ಎಂ.ಶ್ರೀ. ಕಲಾ ಭವನ’ ನಿರ್ಮಾಣವಾಗಿದೆ. ಪ್ರತಿಷ್ಠಾನದ ‘ಪ್ರೊ. ಎಂ.ವಿ. ಸೀತಾರಾಮಯ್ಯ ಸಂಶೋಧನಾ ಕೇಂದ್ರ’ದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಪಡೆದ ಪಿಎಚ್.ಡಿ., ಹಾಗೂ ಎಂ.ಫಿಲ್ ತರಗತಿಗಳು ನಡೆಯುತ್ತಿವೆ. ಪ್ರತಿಷ್ಠಾನ ಅಪರೂಪದ ಹಸ್ತಪ್ರತಿ ಭಂಡಾರವನ್ನು ಹಾಗೂ ಉತ್ತಮ ಗ್ರಂಥಭಂಡಾರವನ್ನು ಹೊಂದಿದೆ. ಹಸ್ತಪ್ರತಿ ವಿಜ್ಞಾನ ಮತ್ತು ಹಳಗನ್ನಡ ಅಧ್ಯಯನ ತರಗತಿಗಳನ್ನು ಪ್ರತಿಷ್ಠಾನ ನಡೆಸುತ್ತಿದೆ; ತ್ರೈಮಾಸಿಕ ‘ವಾರ್ತಾಪತ್ರ’ವನ್ನು ಮತ್ತು ದ್ವೈವಾರ್ಷಿಕ ವಿದ್ವತ್ ಪತ್ರಿಕೆ ‘ಕರ್ನಾಟಕ ಲೋಚನ’ವನ್ನು ಹಾಗೂ ಕಾಲಕಾಲಕ್ಕೆ ಉತ್ತಮ ಗ್ರಂಥಗಳನ್ನು ಪ್ರಕಟಿಸುತ್ತಿದೆ. ನಿರಂತರವಾಗಿ ಸಂಶೋಧನಾತ್ಮಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರತಿಷ್ಠಾನ ನಡೆಸಿಕೊಂಡು ಬರುತ್ತಿದೆ. ೨೦೦೪ರಲ್ಲಿ ಪ್ರತಿಷ್ಠಾನ ರಜತ ಮಹೋತ್ಸವವನ್ನು ಆಚರಿಸಿತು.

# ಶ್ರೀ ಕೈವಾರ ರಾಜಾರಾವ್

## ಜಗನ್ನಾಥ ಹೇಮಾದ್ರಿ

**ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ**
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
3ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು–560019.
ದೂರವಾಣಿ : 26615877, 26676773
ಇಮೇಲ್ : bmsritrust@gmail.com



**SRI KAIVARA RAJARAO** - by **Jagannatha Hemadri**
Published by : **B.M.SRI Smaraka Prathisthana,** 3rd main Road, Narasimharaja Colony, Bangalore-560019. 080-26615877

Size 1/8 Demmy
First Impression : 2014
Pages : x + 44
Copies : 500
© Reserved
Price : **Rs. 50/-**

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**
ಪ್ರೊ. ಎಂ.ಎಚ್. ಕೃಷ್ಣಯ್ಯ (ಗೌರವಾಧ್ಯಕ್ಷರು)
ಡಾ. ಪಿ.ವಿ. ನಾರಾಯಣ (ಅಧ್ಯಕ್ಷರು)
ಪ್ರೊ. ಜಿ. ಅಬ್ದುಲ್ ಬಷೀರ್ (ಗೌರವ ಕಾರ್ಯದರ್ಶಿ)
ಶ್ರೀ ಬಿ.ಆರ್. ರವೀಂದ್ರನಾಥ್ (ಗೌರವ ಕಾರ್ಯದರ್ಶಿ)
ಶ್ರೀ ಎಂ.ಎಸ್. ರಾಮಪ್ರಸಾದ್ (ಕೋಶಾಧಿಕಾರಿ)
ಡಾ. ಕೆ.ಆರ್. ಗಣೇಶ (ಸದಸ್ಯರು)
ಡಾ. ಆರ್. ಲಕ್ಷ್ಮೀನಾರಾಯಣ (ಸದಸ್ಯರು)
ಡಾ. ಎನ್.ಆರ್. ಲಲಿತಾಂಬ (ಸದಸ್ಯರು)

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ಚಾಮರಾಜಪೇಟೆ, ಬೆಂಗಳೂರು-೧೮
✆ ೨೬೬೧ ೩೧೨೩, ೨೬೬೧ ೮೭೫೨

# ಮುಂಮಾತು

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಮೂರು ದಶಕಗಳಿಗೂ ಮೀರಿದ ಅವಧಿಯಿಂದ ಕಾರ್ಯ ನಿರ್ವಹಿಸುತ್ತ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತ ಬಂದ ಸಂಸ್ಥೆ. ಇದರ ಬಗ್ಗೆ ನಾಡಿನ ಎಲ್ಲ ವಿದ್ವಾಂಸರೂ ಆದರಾಭಿಮಾನಗಳನ್ನು ಹೊಂದಿ ಸಂಸ್ಥೆಯೊಂದಿಗೆ ಸಹಕರಿಸುತ್ತಿದ್ದಾರೆ. ಹಾಗಾಗಿಯೇ ಅದರ ಪ್ರಕಟಣಕಾರ್ಯವೂ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ; ತಮ್ಮ ಹೊಚ್ಚ ಹೊಸ ಕೃತಿಗಳನ್ನು ಪ್ರಕಟಿಸಲು ನಮಗೆ ಅನುವುಮಾಡಿಕೊಡುತ್ತಿದ್ದಾರೆ.

ಪ್ರತಿಷ್ಠಾನದ ಮೂಲ ನೆಲೆ ಸಂಶೋಧನೆ. ಸಂಶೋಧನೆಯೆಂಬುದು ಹಿಂದಿನದನ್ನು ಕೆದಕುವುದಕ್ಕೆ ಮಾತ್ರ ಸೀಮಿತವಾದದ್ದೇನಲ್ಲ. ಎಲ್ಲ ಕಾಲದ ಸಂದರ್ಭ, ಸನ್ನಿವೇಶ, ಕೃತಿ, ಕಾರ್ಯ ಇವುಗಳಲ್ಲಿ ಅಂತರ್ಗತವಾದ ಸತ್ಯವನ್ನು ಗುರುತಿಸುವ ಕೆಲಸವೇ ಸಂಶೋಧನೆಯೆನ್ನಬಹುದೆಂದು ನನ್ನ ತಿಳಿವಳಿಕೆ. ಹಾಗಾಗಿ ಸಮಕಾಲೀನವಾದದ್ದರ ಬಗ್ಗೆಯೂ ಶಾಶ್ವತದ ಜೊತೆಗೆ ಸದ್ಯದ ಬಗ್ಗೆಯೂ ಸಂಶೋಧನೆ ನಡೆಯಬೇಕಾದುದು, ಆವಶ್ಯಕ. ಸಂಶೋಧನೆಯ ಅರ್ಥ ಹುಡುಕಾಟ ಎಂದಲ್ಲವೇ? ಆಗಲೇ ಹೇಳಿದಂತೆ 'ಸತ್ಯ'ವನ್ನು ಶೋಧಿಸುವುದು. ಆದರೆ ಸತ್ಯ ಎಂದರೇನೆಂಬುದನ್ನೇ ಯಾರೂ ಖಚಿತವಾಗಿ ನಿರ್ವಚಿಸಲಾಗುವುದಿಲ್ಲ! ಒಂದು ಕಾಲಕ್ಕೆ ಸತ್ಯ ಎನ್ನಿಸಿಕೊಳ್ಳುವಂಥದು ಮತ್ತೊಂದು ಕಾಲಕ್ಕೆ ಹಾಗೆ ಕಾಣದೇ ಹೋಗಬಹುದು; ಅಥವಾ ಒಬ್ಬ ವ್ಯಕ್ತಿಗೆ ಸತ್ಯವೆನಿಸಿದ್ದು ಮತ್ತೊಬ್ಬನಿಗೆ ಹಾಗನ್ನಿಸದೇ ಇರಬಹುದು; ಅಷ್ಟೇಕೆ, ಒಬ್ಬನೇ ವ್ಯಕ್ತಿಗೆ ಒಮ್ಮೆ ಸತ್ಯವೆನ್ನಿಸಿದುದು ಕಾಲ ಸರಿದಂತೆ ತನ್ನ ಅನಿಸಿಕೆಯ ಬಗ್ಗೆ ಅವನಿಗೆ ಅನುಮಾನವುಂಟಾಗ ಬಹುದು. ಅಂದರೆ ಸತ್ಯ ಎಂಬುದು ಅನಂತಮುಖಿ; ಅದಕ್ಕನುಗುಣವಾಗಿ ಸಂಶೋಧನೆಯೂ. ಹಳೆಯದನ್ನು ಹಾಗೂ ಹೊಸದನ್ನು ಹೊಸದೃಷ್ಟಿಯಿಂದ ನೋಡುವ, ವಿಶ್ಲೇಷಿಸುವ, ಪರಿಭಾವಿಸುವ, ವ್ಯಾಖ್ಯಾನಿಸುವ, ಅದರ ಪ್ರಸ್ತುತತೆಯನ್ನು ವಿವೇಚಿಸುವ ಎಲ್ಲ ಬೌದ್ಧಿಕ ಸಾಹಸಗಳೂ ಸಂಶೋಧನೆಗಳೇ.

ಇಂತಹ ಸಂಶೋಧನೆ ಹೆಚ್ಚಾಗಬೇಕು, ಅರಿಯುವ, ಬಗೆಯುವ ಪ್ರಕ್ರಿಯೆ ಮೊನಚಾಗಬೇಕು, ಆಳವಾಗಬೇಕು. ಅದಕ್ಕಾಗಿ ಹಿರಿಯರ ಮಾರ್ಗದರ್ಶನ ಬೇಕು, ಕಿರಿಯರ ಉತ್ಸಾಹ ಬೇಕು. ಪ್ರತಿಷ್ಠಾನವು ತಾನು ಆರಂಭಗೊಂಡ ಕಾಲದಿಂದ ಮೊದಲುಗೊಂಡು ಇಂತಹ ಕಾರ್ಯಗಳಿಗೆ ವೇದಿಕೆಯಾಗಿದೆ; ಉಪನ್ಯಾಸಗಳು, ವಿಚಾರ ಸಂಕಿರಣಗಳು, ಸಂವಾದಗಳು ಇವುಗಳ ಜೊತೆಗೆ ಎಂ.ಫಿಲ್ ಮತ್ತು ಪಿಎಚ್.ಡಿ ಅಭ್ಯರ್ಥಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನಗಳು, ಪುಸ್ತಕ ಪ್ರಕಟಣೆ ಇವುಗಳ



ಮೂಲಕ ಇಂಥ ಸಂಶೋಧನೆಗೆ ಪ್ರತಿಷ್ಠಾನವು ವೇದಿಕೆಯಾಗಿದೆ. ಈ ಕಾರ್ಯದಲ್ಲಿ ಎಲ್ಲರ ನೆರವು ಮತ್ತು ಪ್ರೋತ್ಸಾಹಗಳು ಆವಶ್ಯಕ.

ಪ್ರಸ್ತುತ 'ಶ್ರೀ ಕೈವಾರ ರಾಜಾರಾವ್' ಎಂಬ ಶ್ರೀ ಜಗನ್ನಾಥ ಹೇಮಾದ್ರಿಯವರ ಕೃತಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದಲ್ಲಿ ಅವರು ನೀಡಿದ ಉಪನ್ಯಾಸದ ಬರೆಹ ರೂಪ. ಸಾಹಿತಿಗಳ ಜನ್ಮಶತಮಾನೋತ್ಸವದ ಆಚರಣೆಯ ಅಂಗವಾಗಿ ಈ ಕೃತಿಯನ್ನು ಪ್ರತಿಷ್ಠಾನ ಪ್ರೀತಿಯಿಂದ ಹೊರತರುತ್ತಿದೆ. ಓದುಗರು ಇದನ್ನು ಬರಮಾಡಿಕೊಳ್ಳುವರೆಂಬ ನಂಬಿಕೆ ನಮ್ಮದು. ಈ ಕೃತಿಯನ್ನು ರಚಿಸಿಕೊಟ್ಟಿರುವ ಶ್ರೀ ಹೇಮಾದ್ರಿಯವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಲೇಖಕರನ್ನು ಸಂಪರ್ಕಿಸಿ, ಶ್ರಮವಹಿಸಿ ಹಸ್ತಪ್ರತಿಯನ್ನು ತರಿಸಿಕೊಂಡು ಅಚ್ಚುಕಟ್ಟಾಗಿ ಜೋಡಿಸಿ, ಹಸ್ತಪ್ರತಿಯನ್ನು ಮುದ್ರಣಕ್ಕೆ ಕಳುಹಿಸಿ, ಕರಡಚ್ಚನ್ನು ತಿದ್ದಿ, ಪುಸ್ತಕ ಸುಂದರವಾಗಿ ಹಾಗೂ ಶೀಘ್ರವಾಗಿ ಹೊರಬರಲು ಕಾರಣರಾದ ಶ್ರೀ ಜಗನ್ನಾಥ ಹೇಮಾದ್ರಿಯವರ ಸ್ನೇಹಿತರೂ ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳೂ ಆದ ಪ್ರೊ. ಜಿ. ಅಬ್ದುಲ್ ಬಷೀರ್ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ಗ್ರಂಥವನ್ನು ಸುಂದರವಾಗಿ, ಶೀಘ್ರವಾಗಿ ಮುದ್ರಿಸಿಕೊಟ್ಟ ಲಕ್ಷ್ಮೀ ಮುದ್ರಣಾಲಯದ ಮಾಲೀಕರಿಗೆ ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ದಿನಾಂಕ : ೨೪–೦೪–೨೦೧೪** **ಡಾ॥ ಪಿ.ವಿ. ನಾರಾಯಣ**

ಅಧ್ಯಕ್ಷರು
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

# ಲೇಖಕರ ನುಡಿ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನವು ಸಾಹಿತಿಗಳ ಜನ್ಮಶತಮಾನೋತ್ಸವದ ಆಚರಣೆಯ ಅಂಗವಾಗಿ ಉಪನ್ಯಾಸ ಕಾರ್ಯಕ್ರಮ ಹಾಗೂ ಅವರ ಬಗೆಗೆ ಕಿರುಹೊತ್ತಗೆಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿರುವುದು ಸ್ತುತ್ಯರ್ಹ ವಿಚಾರ. ಎಲೆಮರೆಯ ಕಾಯಿಯಂತಿದ್ದ ಅನೇಕ ಬರಹಗಾರರನ್ನು ಈ ಯೋಜನೆಯಡಿ ಗುರುತಿಸಿರುವುದು ಇನ್ನೂ ಪ್ರಶಂಸನೀಯ ಅಂಶ. ಅದಕ್ಕಾಗಿ ಪ್ರತಿಷ್ಠಾನಕ್ಕೆ ಅಭಿನಂದನೆಗಳು.

ಶ್ರೀ ಕೈವಾರ ರಾಜಾರಾಯರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವ್ಯವಸ್ಥಾಪಕರಾಗಿ ಇದ್ದಾಗ ನಾನು ಪರಿಷತ್ತಿನ ಉದ್ಯೋಗಕ್ಕೆ ಸೇರಿದ್ದೆ (೧೯೭೬). ಅವರ ಮಾರ್ಗದರ್ಶನದಲ್ಲಿ ನಾಲ್ಕು ವರ್ಷ ಕೆಲಸ ಮಾಡುವ ಭಾಗ್ಯ ನನಗೆ ದೊರಕಿತ್ತು. ಅನಂತರ ಅವರು ಕಾರಣಾಂತರಗಳಿಂದ ರಾಜೀನಾಮೆ ಕೊಟ್ಟು ಹೊರನಡೆದರು (೧೯೮೦). ಅವರು ಪರಿಷತ್ತಿನಲ್ಲಿದ್ದಾಗ ಅವರ ಸಾಹಿತ್ಯ ಸಾಧನೆಯ ಬಗೆಗೆ ನನಗೆ ಏನೇನೂ ಗೊತ್ತಿರಲಿಲ್ಲ; ಹಾಗೆ ಹೇಳಿಕೊಳ್ಳುವ ಗುಣವೂ ಅವರದಾಗಿರಲಿಲ್ಲ. ಈಗ ಪ್ರತಿಷ್ಠಾನವು ಅವರ ಬಗೆಗೆ ತಿಳಿದುಕೊಳ್ಳುವ ಅವಕಾಶ ಮಾಡಿಕೊಟ್ಟ ಮೇಲೆ ರಾಜಾರಾಯರ ಅಗಾಧ ಸಾಹಿತ್ಯ ಸಾಧನೆ, ಪ್ರತಿಭೆಗಳನ್ನು ಕಂಡು ಮೂಕವಿಸ್ಮಿತನಾಗಿದ್ದೇನೆ. ದಿನಾಲೂ ಅವರೊಡನೆ ಎಷ್ಟೋ ದಿನಗಳ ಕಾಲ ಇದ್ದರೂ ಆ ಬಗೆಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಲಿಲ್ಲವಲ್ಲ ಎಂದು ಈಗ ಪಶ್ಚಾತ್ತಾಪ ಪಡುತ್ತಿದ್ದೇನೆ.

ಕೈವಾರ ರಾಜಾರಾಯರ ಬಗೆಗೆ ಅನೇಕ ಮಹತ್ವದ ವಿಷಯಗಳನ್ನು ಬಲ್ಲವರಾಗಿದ್ದ ಅವರ ಎರಡನೆಯ ಮಗ ಶ್ರೀ ಕೈವಾರ ಗೋಪಿನಾಥ್ ಅವರು ಕಳೆದ ವರ್ಷ (೨೦೧೨) ನಿಧನರಾಗಿರುವುದರಿಂದ ಈ ಗ್ರಂಥದ ಮಾಹಿತಿ ಸಂಗ್ರಹ ಕಾರ್ಯವನ್ನು ತೃಪ್ತಿಕರವಾಗಿ ಪೂರೈಸಲು ಕಷ್ಟವಾಯಿತು. ಎಷ್ಟೋ ವಿಷಯಗಳನ್ನು ಸೇರಿಸಲು ಸಾಧ್ಯವಾಗಲಿಲ್ಲವಲ್ಲ ಎಂಬ ಕೊರಗು ಹಾಗೆಯೇ ಉಳಿದಿದೆ.

ರಾಜಾರಾಯರ ಹಿರಿಯ ಪುತ್ರರಾಗಿರುವ ಶ್ರೀ ಕೆ. ಅಂಬಾಜಿರಾವ್ ಅವರು ಬಹುಕಾಲ ಮಧ್ಯಪ್ರದೇಶ ರಾಜ್ಯ ಸರ್ಕಾರದ ಉನ್ನತ ಹುದ್ದೆಯಲ್ಲಿದ್ದು ಇದೀಗ ವಿಶ್ರಾಂತ ಜೀವನವನ್ನು ಬೆಂಗಳೂರಿನಲ್ಲಿ ನಡೆಸುತ್ತಿದ್ದಾರೆ. ಅವರು ರಾಜಾರಾಯರ ಬಗೆಗೆ ಅನೇಕ ಮಾಹಿತಿಗಳನ್ನು ನೀಡಿ, ಲಭ್ಯವಿದ್ದ ಪುಸ್ತಕಗಳನ್ನು ಕಷ್ಟಪಟ್ಟು ಸಂಗ್ರಹಿಸಿ ನೀಡಿ ಉಪಕರಿಸಿದ್ದಾರೆ. ಅವರಿಗೆ ಹಾಗೂ ಅವರ ಕುಟುಂಬ ವರ್ಗಕ್ಕೆ ನಾನು ಚಿರಋಣಿಯಾಗಿದ್ದೇನೆ.



ಸಂದರ್ಶನಕ್ಕೆ ಅವಕಾಶ ನೀಡಿ ಉಪಯುಕ್ತ ವಿಚಾರಗಳನ್ನು ತಿಳಿಸಿಕೊಟ್ಟಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಪದಾಧಿಕಾರಿಗಳಾದ ಪ್ರೊ. ಜಿ. ಅಶ್ವತ್ಥನಾರಾಯಣ ಮತ್ತು ಶ್ರೀ ಜಿ.ಕೆ. ಗುಂಡೂರಾವ್ ಅವರಿಗೆ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಮಾಜಿ ಗೌರವ ಕಾರ್ಯದರ್ಶಿಗಳಾದ ಶ್ರೀ ಎಸ್.ವಿ. ಶ್ರೀನಿವಾಸರಾವ್ ಅವರಿಗೆ, ಈಗಿನ ಕಾರ್ಯದರ್ಶಿಗಳಾದ ಪ್ರೊ. ಜಿ. ಅಬ್ದುಲ್ ಬಷೀರ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಕೋರಿದ ಮಾಹಿತಿಯನ್ನು ಪತ್ರ ಮುಖೇನ ತಿಳಿಸಿ ಕೃಪೆ ತೋರಿದ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಶತಾಯುಷಿ ನಾಡೋಜ ಪ್ರೊ. ಜಿ. ವೆಂಕಟಸುಬ್ಬಯ್ಯನವರಿಗೆ ಅನಂತ ಧನ್ಯವಾದಗಳು.

ಬರವಣಿಗೆಯಲ್ಲಿ ನುರಿತವನಲ್ಲದ ನನ್ನನ್ನು ಆಯ್ಕೆ ಮಾಡಿ ಈ ಪುಸ್ತಕ ರಚನೆಗೆ ಅವಕಾಶ ನೀಡಿದ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಪ್ರೊ. ಎಂ.ಎಚ್. ಕೃಷ್ಣಯ್ಯನವರಿಗೂ ಅಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಅವರಿಗೂ ಹಾಗೂ ಎಲ್ಲ ಪದಾಧಿಕಾರಿಗಳಿಗೂ ಹೃದಯಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

**–ಜಗನ್ನಾಥ ಹೇಮಾದ್ರಿ**

# ಪರಿವಿಡಿ


೧. ವಿಷಯ ಪ್ರವೇಶ ೧

೨. ಸಾಹಿತ್ಯ ಜೀವನ ೫

೩. ಕೈವಾರ ರಾಜಾರಾಯರ ಕೃತಿಗಳು ೮

೪. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ೩೫

೫. ಸಂಕೀರ್ಣ ೩೭

೬. ಗಣ್ಯರ ಅನಿಸಿಕೆಗಳು ೪೦

# ೧. ವಿಷಯ ಪ್ರವೇಶ

೧೯೪೦–೫೦ರ ದಶಕ, ನಾಟಕಗಳೆಂದರೆ ಸಾಮಾನ್ಯವಾಗಿ ಪೌರಾಣಿಕ ನಾಟಕಗಳೇ ಎನ್ನುವ ಕಾಲ, ಔದ್ಯೋಗಿಕ ಕ್ರಾಂತಿ ಸಾಮಾಜಿಕ ಜೀವನದಲ್ಲಿ ಬದಲಾವಣೆ ತಂದಿತು. ಮನರಂಜನೆಗೆ ಕಾಲಮಿತಿಯನ್ನು ಒಡ್ಡಿತು. ಅನೇಕ ಗಂಟೆಗಳ ಕಾಲ ಕುಳಿತು ಪೌರಾಣಿಕ ನಾಟಕಗಳನ್ನು ನೋಡುವ ವ್ಯವಧಾನ ನಾಟಕ ಪ್ರಿಯರಲ್ಲಿ ಉಳಿಯಲಿಲ್ಲ. ಸಾಯಂಕಾಲದ ಬಿಡುವಿನ ವೇಳೆಯನ್ನು, ಒಂದು, ಒಂದೂವರೆ ಗಂಟೆಯ ಅವಧಿಯನ್ನು ಮನರಂಜನೆಗೆ ಮೀಸಲಾಗಿಡುವ ಅನಿವಾರ್ಯ ಪರಿಸ್ಥಿತಿಗೆ ಶರಣಾದರು ಜನ. ಅಂತಹ ಕಾಲಘಟ್ಟದಲ್ಲಿ ಕಡಿಮೆ ಅವಧಿಯ ಏಕಾಂಕ ನಾಟಕಗಳ ಅವಶ್ಯಕತೆ ಮೂಡಿಬಂದಿತು. ಆ ಸುಸಂದರ್ಭದಲ್ಲಿ ಅಂತಹ ಅಗತ್ಯತೆಗಳನ್ನು ಪೂರೈಸುವ ಏಕಾಂಕ ನಾಟಕಗಳ ಕರ್ತೃವಾಗಿ ಶ್ರೀ ಕೈವಾರ ರಾಜಾರಾಯರು ಉದಯಿಸಿರು.

ಸಾಹಿತ್ಯವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದವರಲ್ಲ; ಶೈಕ್ಷಣಿಕ ಸಂಸ್ಥೆಗಳಲ್ಲಿ ಅಧ್ಯಾಪನ ಕಾರ್ಯನಿರ್ವಹಿಸಿದವರಲ್ಲ; ಉಪ ಜೀವನಕ್ಕಾಗಿ ಆಯ್ದುಕೊಂಡ– ಶುಷ್ಕವೆನ್ನಲಾಗುವ ಲೆಕ್ಕಪತ್ರ; ಸುದೀರ್ಘ–ವೃತ್ತಿ ಜೀವನದಲ್ಲಿ ಬರಹಗಾರರ ಉದ್ಯೋಗದ ಒಡನಾಟವೇ ದೊರೆತಿದ್ದಿಲ್ಲ. ಆದರೂ ಲೇಖಕರಾದರು ತಮ್ಮ 'ಏಕಲವ್ಯತನ'ದ ಛಲದಿಂದ.

ನಾಟಕಕಾರರೆಂದು ಪ್ರಧಾನವಾಗಿ ಗುರುತಿಸಿಕೊಂಡರೂ ಜೀವನಚರಿತ್ರೆ, ವಿಮರ್ಶೆ, ಅನುವಾದ, ಹಾಸ್ಯ ಇತ್ಯಾದಿ ಪ್ರಕಾರಗಳಲ್ಲಿಯೂ ಶ್ರೀಯುತರ ಸಾಹಿತ್ಯ ಕೃಷಿಯ ಹರಹು ಹಬ್ಬಿದೆ.

ಕೈವಾರವೆಂಬುದು ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಒಂದು ಹಳ್ಳಿ. ರಾಜಾರಾಯರ ಪೂರ್ವಜರು ಈ ಊರಿನಲ್ಲಿ ವಾಸವಾಗಿದ್ದರು. ಈಗ ಅಲ್ಲಿ ಇವರ ವಂಶಜರು ಯಾರೂ ಇಲ್ಲ. ಯಾವ ಆಸ್ತಿಯೂ ಇಲ್ಲ. ಪೂರ್ವಜರ ಸ್ಥಳವೆಂಬುದರ ಕುರುಹಾಗಿ ಇವರ ಹೆಸರಿನ ಹಿಂದೆ 'ಕೈವಾರ' ಉಳಿದುಕೊಂಡಿದೆ ಅಷ್ಟೆ.

ಫೆಬ್ರವರಿ ತಿಂಗಳ ೨೯ನೆಯ ತಾರೀಖು. ನಾಲ್ಕು ವರ್ಷಗಳಿಗೆ ಒಮ್ಮೆ ಮಾತ್ರ ಬರುವ ವಿಶೇಷ ದಿನ. ಇಂತಹ ವೈಶಿಷ್ಟ್ಯಪೂರ್ಣ ದಿವಸವೇ ರಾಜಾರಾಯರು ಜನಿಸಿದುದು. ಜನನ–೧೯೧೨ನೆಯ ಇಸವಿ ಫೆಬ್ರವರಿ ೨೯ನೆಯ ದಿನಾಂಕ. ಕೈವಾರ ರಾಮಚಂದ್ರರಾವ್ ಮತ್ತು ಶ್ರೀಮತಿ ಸುಂದರಾಬಾಯಿ ದಂಪತಿಗಳ ಹಿರಿಯ ಪುತ್ರ. ಕೈವಾರ ರಾಮಚಂದ್ರರಾಯರು ಸರ್ಕಾರದ ಸರ್ವೇ ಇಲಾಖೆಯಲ್ಲಿ (ಭೂಮಾಪನ ಇಲಾಖೆ)



ಮೋಜಿಣಿದಾರರು, (ಸರ್ವೇಯರ್), "ಮೋಜಿಣಿರಾಯ"ರೆಂದೇ ಜನಪ್ರಿಯರಾಗಿದ್ದರು. ಊರಿಂದೂರಿಗೆ ವರ್ಗಾವಣೆಯು ಅವರಿಗೆ ಅಭ್ಯಾಸವಾಗಿ ಹೋಗಿತ್ತು. ರಾಮಚಂದ್ರರಾಯರ ಆರು ಮಂದಿ ಮಕ್ಕಳಲ್ಲಿ ರಾಜಾರಾಯರೇ ಹಿರಿಯರು. ರಾಜಾರಾಯರಿಗೆ ಒಬ್ಬ ಅಕ್ಕ, ಮೂವರು ತಮ್ಮಂದಿರು ಹಾಗೂ ಒಬ್ಬಳು ತಂಗಿ, ಒಡಹುಟ್ಟಿದವರು.

ಒಳ್ಳೆಯ ಸಂಪ್ರದಾಯಸ್ಥ ಮನೆತನ. ಆಚಾರ, ವಿಚಾರ, ಬಟ್ಟೆಬರ, ಆಹಾರ ವಿಹಾರ ಎಲ್ಲದರಲ್ಲೂ ಹಿರಿಯರು ಹಾಕಿಕೊಟ್ಟ ದಾರಿಯಲ್ಲೇ ಸಾಗಿಬಂದ ಕುಟುಂಬ, ನಿತ್ಯ ಪೂಜೆ, ಹಬ್ಬಹರಿದಿನಗಳ ಶಾಸ್ತ್ರೋಕ್ತ ಆಚರಣೆ ಅನೂಚಾನವಾಗಿ ನಡೆದುಕೊಂಡು ಬರುತ್ತಿದ್ದವು. ರಾಜಾರಾಯರು ಬಾಲ್ಯದಿಂದಲೇ ವಿದ್ಯಾಭ್ಯಾಸದಲ್ಲಿ ಪ್ರತಿಭಾವಂತ. ಅನೇಕ ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆಗಳಲ್ಲಿ ತಪ್ಪದೇ ಭಾಗವಹಿಸುತ್ತಿದ್ದರು. ೧೯೩೭ನೆಯ ಇಸವಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ 'ಭಾಸ್ಕರರಾಯರ ದತ್ತಿ ಚರ್ಚಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದು, ಕುಸುರಿ ಕೆಲಸವುಳ್ಳ ಅಂದದ ಬೆಳ್ಳಿ 'ಗುಂಡಿಬಟ್ಟಲ'ನ್ನು ಬಹುಮಾನವಾಗಿ ಪಡೆದುಕೊಂಡಿದ್ದಾರೆ. ಇಂದಿಗೂ ಅವರ ಪುತ್ರ ಶ್ರೀ ಅಂಬಾಜಿರಾವ್ ಅವರು ಅದನ್ನು ಜೋಪಾನವಾಗಿ ಇರಿಸಿಕೊಂಡಿದ್ದಾರೆ.

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ವಿದ್ಯಾಭ್ಯಾಸ ಪೂರೈಸಿ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್. ಬೆಂಗಳೂರಿನ ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಬಿ.ಎ. ಪಾಸು ಮಾಡಿ ಪದವೀಧರರಾಗಿದ್ದು, ದಿನಾಂಕ: ೦೧–೦೬–೧೯೩೪ರಂದು. ಕಾಲೇಜಿನ ವ್ಯಾಸಂಗದ ನಡುವೆಯೇ ಕನ್ನಡ ಶೀಘ್ರಲಿಪಿಯನ್ನು ಸ್ವಂತವಾಗಿ ಕಲಿತ ಶ್ರಮಜೀವಿ. ಕನ್ನಡ ಶೀಘ್ರಲಿಪಿ ಎಂಬುದು ಆಗ ಶೈಶವಾವಸ್ಥೆಯಲ್ಲಿತ್ತು. ಇಡೀ ಮೈಸೂರು ರಾಜ್ಯದಲ್ಲಿ ಕನ್ನಡ ಶೀಘ್ರಲಿಪಿ ಬಲ್ಲವರಲ್ಲಿ ರಾಜಾರಾಯರೇ ಎರಡನೆಯವರಂತೆ. ಮೊದಲನೆಯವರು ಖ್ಯಾತ ಕಾದಂಬರಿಕಾರರಾಗಿದ್ದ ಶ್ರೀ ಮ.ನಾ. ಮೂರ್ತಿಯವರಂತೆ.

ಆಟೋಟಗಳಲ್ಲಿ ವಿದ್ಯಾರ್ಥಿ ದೆಸೆಯಿಂದಲೇ ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಸ್ವತಃ ಕುಸ್ತಿಪಟುವಾಗಿದ್ದ ಇವರು, ಕುಸ್ತಿ ಪಂದ್ಯಾವಳಿಗಳನ್ನು ತಪ್ಪದೇ ವೀಕ್ಷಿಸುತ್ತಿದ್ದರು.

ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಡಿ.ವಿ.ಜಿ. (ಡಿ.ವಿ. ಗುಂಡಪ್ಪ) ಅವರನ್ನು ಪರಿಚಯ ಮಾಡಿಕೊಂಡಿದ್ದರು. ೧೯೩೩ನೆಯ ಇಸ್ವಿಯಿಂದ ಡಾ. ಡಿ.ವಿ. ಗುಂಡಪ್ಪನವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು. (ಅಂದಿನ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನವು ಆಲಂಕಾರಿಕವಾಗಿ ಮೈಸೂರು ರಾಜಮನೆತನದವರ ಬಳಿ ಇತ್ತು. ಉಪಾಧ್ಯಕ್ಷರೇ ಪರಿಷತ್ತಿನ ಸಂಪೂರ್ಣ ಆಡಳಿತದ ಹೊಣೆಯನ್ನು ವಹಿಸಿಕೊಂಡಿದ್ದರು.) ಪದವೀಧರರಾಗಿದ್ದ ಶ್ರೀ ರಾಜಾರಾಯರನ್ನು ಡಿ.ವಿ.ಜಿ. ಅವರು ಪ್ರೀತಿಯಿಂದ ಕರೆದು ಪರಿಷತ್ತಿನಲ್ಲಿ ಕನ್ನಡ ಶೀಘ್ರಲಿಪಿಕಾರರನ್ನಾಗಿ ನೇಮಿಸಿಕೊಂಡರು. ಪದವಿ ಪಡೆದ ದಿನವೇ ತಾರೀಖು : ೧–೬–೧೯೩೪ – ಈ

ನೇಮಕವಾಯಿತು (ಇಂದಿನ Campus selection ತರಹ) ! ಆ ದಿನಕ್ಕಾಗಿಯೇ ಗುಂಡಪ್ಪನವರು ಕಾಯುತ್ತಿದ್ದರೇನೋ ! ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಉದ್ಯೋಗದಲ್ಲಿದ್ದ ನಾಲ್ಕು ವರ್ಷಗಳ ಕಾಲ (೧೯೩೪ರಿಂದ ೧೯೩೮). ಡಾ. ಎ.ಆರ್. ಕೃಷ್ಣಶಾಸ್ತ್ರೀ, ಎಸ್.ವಿ. ರಂಗಣ್ಣ, ಎಂ.ವೀ. ಸೀತಾರಾಮಯ್ಯ ಮೊದಲಾದ ಸಾಹಿತ್ಯ ದಿಗ್ಗಜರ ನಿಕಟ ಪರಿಚಯ ಇವರಿಗೆ ಒದಗಿತು. ಎಲ್ಲಕ್ಕಿಂತ ಮಿಗಿಲಾಗಿ ಆಗ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿದ್ದ ಶ್ರೀ ಸಿ.ಕೆ. ವೆಂಕಟರಾಮಯ್ಯ ಹಾಗೂ ಗೌರವ ಕೋಶಾಧಿಕಾರಿಗಳಾಗಿದ್ದ ಪ್ರೊ. ವಿ. ಸೀತಾರಾಮಯ್ಯ ಅವರ ಆತ್ಮೀಯ ಮಾರ್ಗದರ್ಶನ ದೊರೆಯಿತು. ರಾಜಾರಾಯರ ಭವಿಷ್ಯದ ಸಾಹಿತ್ಯ ಕೃಷಿಗೆ ಪೂರಕವಾದ ವಾತಾವರಣ ನಿರ್ಮಾಣವಾಯಿತು. ಪರಿಷತ್ತಿನ ಉದ್ಯೋಗದ ಸಂಬಳ ಹೊಟ್ಟೆಪಾಡಿಗೂ ಸಾಕಾಗುತ್ತಿರಲಿಲ್ಲ. ಸೇವಾ ಭದ್ರೆ ಎಂಬುದು ಕನಸಿನ ಮಾತಾಗಿತ್ತು. ಅನಿವಾರ್ಯವಾಗಿ ರಾಜಾರಾಯರು ಬೇರೆ ಉದ್ಯೋಗ ಅರಸತೊಡಗಿದರು. ಮೈಸೂರು ರಾಜ್ಯ ವಿದ್ಯುತ್ ಇಲಾಖೆಯಲ್ಲಿ (ಎಂ.ಎಸ್.ಇ.ಬಿ.) (ಈಗಿನ ಕೆ.ಪಿ.ಟಿ.ಸಿ.ಎಲ್.) ಗುಮಾಸ್ತರ ಕೆಲಸ ದೊರೆಯಿತು. ಅಲ್ಲಿ ನಿಸ್ಪೃಹರಾಗಿ ದುಡಿದರು. ಇಲಾಖೆಯ ಎಲ್ಲ ಪರೀಕ್ಷೆಗಳನ್ನು ಪ್ರಥಮ ಪ್ರಯತ್ನದಲ್ಲಿಯೇ ಪಾಸು ಮಾಡಿದರು. ಅಂದಿನ ದೊಡ್ಡ ಹುದ್ದೆಯಾಗಿದ್ದ 'ಅಕೌಂಟ್ಸ್ ಆಫೀಸರ್' ಸ್ಥಾನಕ್ಕೆ ಏರಿದರು. ವಿದ್ಯುತ್ ಇಲಾಖೆಯಲ್ಲಿ ಲೆಕ್ಕಪತ್ರವನ್ನಿಡಲು ಆಗ ಸೂಕ್ತ ನಿಯಮಾವಳಿಗಳಿರಲಿಲ್ಲ. ಆಗಿನ ಮದ್ರಾಸ್, ಬೊಂಬಾಯಿ ಪ್ರಾಂತ್ಯಗಳಲ್ಲಿದ್ದ ನಿಯಮಗಳನ್ನು ಶ್ರೀ ರಾಜಾರಾಯರು ತರಿಸಿಕೊಂಡು ಕೂಲಂಕಷ ಅಧ್ಯಯನ ಮಾಡಿದರು. ಕಾರ್ಯನಿರ್ವಹಣೆಯಲ್ಲಿ ಆಗಬೇಕಾದ ಬದಲಾವಣೆಗಳನ್ನು ಸೂಚಿಸಿ 'ಅಕೌಂಟ್ಸ್ ಕೋಡ್' ಅನ್ನು ಸಿದ್ಧಪಡಿಸಿಕೊಟ್ಟರು. ಇಲಾಖೆಗೆ ಲಕ್ಷಾಂತರ ರೂಪಾಯಿಗಳ ಹೆಚ್ಚಿನ ಆದಾಯ ಬರುವಂತಾಯಿತು. ರಾಜಾರಾಯರು ಸರ್ಕಾರದ ಮೆಚ್ಚುಗೆಗೆ ಪಾತ್ರರಾದರು. ಶುಭ್ರಹಸ್ತದ ದಕ್ಷ ಅಧಿಕಾರಿ ಎಂದು ಹೆಸರು ಗಳಿಸಿದರು. ಅಂದಿನ ನಿಯಮದಂತೆ ಇಸವಿ ೧೯೬೭ರಲ್ಲಿ ತಮ್ಮ ೫೫ನೆಯ ವಯಸ್ಸಿನಲ್ಲಿ ನಿವೃತ್ತರಾದರು.

ಯೋಗಾಯೋಗವೆಂಬಂತೆ ಕನ್ನಡ ಸಾಹಿತ್ಯ ಪರಿಷತ್ತು ರಾಜರಾಯರನ್ನು ಮತ್ತೆ ಕೈಬೀಸಿ ಕರೆಯಿತು. ಪ್ರೊ. ಜಿ. ವೆಂಕಟಸುಬ್ಬಯ್ಯನವರು ಪರಿಷತ್ತಿನ ಅಧ್ಯಕ್ಷರಾಗಿದ್ದ ದಿನಗಳವು. ರಾಜಾರಾಯರು ಬಹಳ ಹಿಂದೆ ಪರಿಷತ್ತಿನ ಕೆಲಸದಲ್ಲಿದ್ದುದನ್ನು ಬಲ್ಲವರಾಗಿದ್ದರು. ಸಮರ್ಥ ವ್ಯವಸ್ಥಾಪಕರ ಅಗತ್ಯವನ್ನು ಮನಗಂಡ ಅವರು ರಾಜಾರಾಯರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ವ್ಯವಸ್ಥಾಪಕ ಹುದ್ದೆಗೆ ನೇಮಿಸಿಕೊಂಡರು. ಒಂದು ಜವಾಬ್ದಾರಿಯಿಂದ ನಿವೃತ್ತರಾದ ಕೂಡಲೇ ಇನ್ನೊಂದು ಹೊಣೆಗಾರಿಕೆಯನ್ನು ನಿಭಾಯಿಸಲು ಪ್ರವೃತ್ತರಾದರು. ಹದಿಮೂರು ವರ್ಷಗಳ ಕಾಲ ಆ ಹುದ್ದೆಯಲ್ಲಿದ್ದು ತಮ್ಮ ದಕ್ಷ ಕಾರ್ಯಶೈಲಿಯಿಂದ ಎಲ್ಲರ ಮೆಚ್ಚುಗೆ ಗಳಿಸಿದರು. ತದನಂತರ ಬಸವನಗುಡಿಯ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ನಿವೃತ್ತ ನ್ಯಾಯಮೂರ್ತಿ ಶ್ರೀ ನಿಟ್ಟೂರು ಶ್ರೀನಿವಾಸರಾಯರ ನೇತೃತ್ವದಲ್ಲಿ ಗೌರವ ಸಹಾಯಕರಾಗಿ ೧೩ ವರ್ಷ ಸೇವೆ ಸಲ್ಲಿಸಿ ಸೇವೆಯಲ್ಲಿರುವಾಗಲೇ ೧೯೯೩, ಜನವರಿ ೩ರಂದು ಇಹಲೋಕ



ತ್ಯಜಿಸಿದರು. ಜೀವನ ಪರ್ಯಂತ ಯಾವ ರೋಗ ರುಜಿನಗಳಿಗೂ ಬಲಿಯಾಗದೇ ದೃಢಕಾಯರಾಗಿದ್ದು ಎಂಬತ್ತೊಂದು ವರ್ಷಗಳ ತುಂಬು ಜೀವನ ನಡೆಸಿ, ಯಾರಿಗೂ ಕಷ್ಟಕೊಡದೇ ಅನಾಯಾಸ ಮರಣವನ್ನೈದಿದರು.

# ೨. ಸಾಹಿತ್ಯ ಜೀವನ

**ಕ**ನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶೀಘ್ರಲಿಪಿಕಾರರಾಗಿ ೧೯೩೪ರಲ್ಲಿ ಕೆಲಸಕ್ಕೆ ಸೇರಿದಾಗಿನಿಂದ, ಮೊಳಕೆಯೊಡೆಯುತ್ತಿದ್ದ ರಾಜಾರಾಯರ ಸಾಹಿತ್ಯ ಕೃಷಿಯ ಬಯಕೆಯ ಸಸಿ ಚಿಗುರಿ ಹೂ ಬಿಡಲು ಶುರುವಾಗಿದ್ದು ೧೯೩೮ನೆಯ ಇಸವಿಯಲ್ಲಿ, ವಿದ್ಯುತ್ ಇಲಾಖೆಗೆ ಕೆಲಸಕ್ಕೆ ಸೇರಿದ ಮೇಲೆ. ಬರವಣಿಗೆಗೆ ಪ್ರತಿಕೂಲವಾದ ವಾತಾವರಣವಿದ್ದರೂ ಬರೆಯಬೇಕೆಂಬ ಅದಮ್ಯ ತುಡಿತ ಬರವಣಿಗೆಗೆ ಪ್ರೇರೇಪಿಸಿತು. ಅನೇಕ ಬಿಡಿ ಲೇಖನಗಳನ್ನು ಬರೆದು ಪ್ರಕಟಿಸಿದರು. 'ಬುದ್ಧಿವಂತಿಕೆ' ಎಂಬ ಮೊದಲ ನಾಟಕ ೧೯೩೮ರಲ್ಲಿ ಪ್ರಕಟಗೊಂಡಿತು. ಅಲ್ಲಿಂದ ಮುಂದೆ ವೃತ್ತಿ ಬದುಕಿನ ಅಡಚಣೆಗಳ ನಡುವೆಯೇ ಸಾಹಿತ್ಯಾರಾಧನೆ ನಿರಂತರವಾಗಿ ಮುಂದುವರಿಯಿತು. ೮ ದೊಡ್ಡ ನಾಟಕಗಳು, ೫೦ ಏಕಾಂಕ ನಾಟಕಗಳು, ಎರಡು ಜೀವನ ಚರಿತ್ರೆಗಳು, ಒಂದು ಇಂಗ್ಲಿಷ್ ನಾಟಕ, ವಿಮರ್ಶಾ ಲೇಖನಗಳು, ಅನೇಕ ಹಾಸ್ಯ ಲೇಖನಗಳು, ಸಂಭಾಷಣಾರೂಪದ ಚಿತ್ರಗಳು ಶ್ರೀ ರಾಜಾರಾಯರ ಲೇಖನಿಯಿಂದ ಪಡಿಮೂಡಿದುವು.

ಅವರು ಬರೆದ ಅನೇಕ ನಾಟಕಗಳು ಮೂರು–ನಾಲ್ಕು ಆವೃತ್ತಿಗಳಲ್ಲಿ ಪ್ರಕಟವಾಗಿವೆ. ಕೆಲವು ನಾಟಕಗಳು ೨೦೦ಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿವೆ. ಶ್ರೀಯುತರು ಬರೆದ 'The Accused' (ದಿ ಅಕ್ಯೂಸ್ಡ್) ಎಂಬ ಇಂಗ್ಲಿಷ್ ನಾಟಕಕ್ಕೆ ಮುಂಬೈನ 'ಭವನ್ಸ್ ಜರ್ನಲ್' ಏರ್ಪಡಿಸಿದ್ದ ಅಖಿಲ ಭಾರತ ಏಕಾಂಕ ನಾಟಕಗಳ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ದೊರಕಿದೆ. ಅದರ ಕನ್ನಡ ರೂಪಾಂತರ 'ಒಂದು ದುರಂತ' ಪ್ರಜಾಮತ ವಾರಪತ್ರಿಕೆಯಲ್ಲಿ ಪ್ರಕಟವಾಗಿದೆ. ೧೯೫೦, ೬೦, ೭೦ರ ದಶಕಗಳಲ್ಲಿ ಮನರಂಜನೆ ಹಾಗೂ ಬೋಧಪ್ರದ ನಾಟಕಗಳ ಅಭಾವವಿತ್ತು. ಆಗ ಬಂದ ಶ್ರೀ ರಾಜಾರಾಯರ ನಾಟಕಗಳು ನಾಡಿನ ನೂರಾರು ಶಾಲಾ ಕಾಲೇಜುಗಳಲ್ಲಿ, ಶುಭ ಸಮಾರಂಭಗಳಲ್ಲಿ, ರಾಷ್ಟ್ರೀಯ ಹಬ್ಬಗಳ ಸಂದರ್ಭಗಳಲ್ಲಿ ಪ್ರದರ್ಶಿತಗೊಳ್ಳುತ್ತಿದ್ದುವು. ಜನಪ್ರಿಯ ನಾಟಕಕಾರರೆಂದು ಅವರು ಹೆಸರು ಪಡೆದರು. ತೀರ ಇತ್ತೀಚಿನವರೆಗೂ ಅವರ ನಾಟಕಗಳು ಪ್ರದರ್ಶಿತವಾಗುತ್ತಿರುವ ಉದಾಹರಣೆಗಳಿವೆ. ನ್ಯಾಯಮೂರ್ತಿ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಜಿಲ್ಲಾ ಕಾರ್ಯಕ್ರಮಗಳ ಸಮಿತಿಯ ಅಧ್ಯಕ್ಷರಾಗಿದ್ದಾಗ ರಾಜಾರಾಯರು ರಚಿಸಿದ ನಾಟಕಗಳನ್ನು ಅಂದಿನ ಮೈಸೂರು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆ ಮಾಡಿದ್ದರೆಂದು ರಾಜಾರಾಯರ ಎರಡನೆಯ ಮಗ ಶ್ರೀ ಕೈವಾರ ಗೋಪಿನಾಥ್ ಅವರು ಉಲ್ಲೇಖಿಸಿದ್ದಾರೆ.



ಶ್ರೀ ಕೈವಾರ ರಾಜಾರಾಯರ ಆಳವಾದ ಚಿಂತನೆ, ಚಿಕಿತ್ಸಕ ಬುದ್ಧಿಯಿಂದ ಸಮಾಜದ ಆಗುಹೋಗುಗಳನ್ನು ನೋಡಿರುವ ಪರಿ, ಹಾಸ್ಯ ಪ್ರಜ್ಞೆ, ಸಂಶೋಧನ ಪ್ರವೃತ್ತಿ, ಇತಿಹಾಸದ ಅಧ್ಯಯನ, ಸಾಂಸಾರಿಕ ಸುಖ ದುಃಖಗಳನ್ನು, ನಲಿವು, ವಿನೋದಗಳನ್ನು ಅವಲೋಕಿಸಿರುವ ಸೂಕ್ಷ್ಮ ದೃಷ್ಟಿ, ಎಲ್ಲಿಯೂ ತೂಕ ತಪ್ಪದ ಮತ್ತು ಬೇರೆ ಯಾರ ಮನಸ್ಸನ್ನೂ ನೋಯಿಸದ ನವಿರಾದ ಹಾಸ್ಯ ನಿರೂಪಣೆ, ಎಲ್ಲಕ್ಕಿಂತ ಹೆಚ್ಚಾಗಿ ಪ್ರಚಾರ ಬಯಸದ ನಮ್ರಭಾವ–ಈ ಎಲ್ಲ ವಿಶೇಷ ಗುಣಗಳನ್ನು ಅವರು ರಚಿಸಿದ ಸಾಹಿತ್ಯ ಕೃತಿಗಳಲ್ಲಿ ಕಾಣಬಹುದು. ಕೃತಿಗಳಿಗೆ ಕೊಟ್ಟಿರುವ ಶೀರ್ಷಿಕೆಗಳೂ ಕೂಡ ಸಮಕಾಲೀನ ಜನಜೀವನದ ಪ್ರತಿಬಿಂಬ ಗತಿಬಿಂಬದಂತಿವೆ. ಅಂದಿನ ಜನರ ನಡೆನುಡಿ ಆಚಾರವಿಚಾರ, ಸಂಪ್ರದಾಯ, ಬಳಸುತ್ತಿದ್ದ ಭಾಷೆ, ನುಡಿಗಟ್ಟುಗಳು, ಗಾದೆ ಮಾತುಗಳು ಇವರ ಕೃತಿಗಳಲ್ಲಿ ಹೇರಳವಾಗಿ ನಮಗೆ ನೋಡಸಿಗುತ್ತವೆ. ಅವುಗಳ ಹಿನ್ನೆಲೆಯಲ್ಲಿ ಇಂದಿನ ದಿನಗಳನ್ನು ಅವಲೋಕಿಸಿದರೆ ಕೇವಲ ೫೦–೬೦ ವರ್ಷಗಳಲ್ಲಿ ಆಗಿರುವ ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಜೀವನದ ಪರಿವರ್ತನೆ ಅಚ್ಚರಿ ಮೂಡಿಸುತ್ತದೆ !

ಶ್ರೀ ರಾಜಾರಾಯರು ೨೫ನೆಯ ವಯಸ್ಸಿಗಾಗಲೇ ವಿವಿಧ ವಿಷಯಗಳ ಬಗೆಗೆ ಅನೇಕ ಲೇಖನಗಳನ್ನು ಬರೆಯತೊಡಗಿದ್ದರು. ೧೯೩೭ನೆಯ ಇಸವಿಯಲ್ಲಿ 'ರಂಗಭೂಮಿ' ಎಂಬ ಮಾಸಪತ್ರಿಕೆಯಲ್ಲಿ ಪ್ರಕಟವಾದ 'ಹೊಸ ವರುಷದ ಒಸಗೆ' ಎಂಬ ಅವರ ಒಂದು ಲೇಖನದ ಕೆಲವು ಸಾಲುಗಳು ಹೀಗಿವೆ : 'ಮನುಜನಾಬಾಳು ಕಿಂಚಿತ್ತು, ಕರ್ತವ್ಯ ಹಿರಿದು. ಬಳಸಿ ನಿಂದಿರುವುದು ಬಲುಮಂದಿ. ಇಂತು ನಿಂದಿರುವವರಿಗೇ, ನನೀವುದು ಸಾಧ್ಯ ? ಸರ್ವರಾಸೆಯ ಸಲಿಸಿ ನಡೆವುದೆಂತು ? ಆರ ಬಿಡಬಹುದು ? ಹೆತ್ತವರು, ನೆಚ್ಚಿದವರು, ಬೆರೆತವರು, ಮೇಲಾಗಿ ದೇವರು ! ಆರ ಬಿಡಬಹುದು. ಜೀವನದ ಪೂರ್ಣತೆಗೆ ಎಲ್ಲರೂ ಶ್ರಮಿಸಿಹರು'.

ಆ ಕಿರು ವಯಸ್ಸಿನಲ್ಲಿ ಅವರ ಮಾನಸಿಕ ಔನ್ನತ್ಯ ಹಾಗೂ ಭವಿಷ್ಯದ ಸಾಹಿತ್ಯ ಕೃಷಿಯ ಸಮೃದ್ಧ ಫಸಲಿನ ಚಿಗುರುಗಳನ್ನು ಈ ಬರಹದಲ್ಲಿ ಗುರುತಿಸಬಹುದು.

**ಶೀಘ್ರಲಿಪಿ ಮೂಲಕ ಪುಸ್ತಕ ರಚನೆ :** ಶ್ರೀ ರಾಜಾರಾಯರು ಶೀಘ್ರಲಿಪಿಯಲ್ಲಿ, ಇಡೀ ಉಪನ್ಯಾಸವೊಂದನ್ನು ಬರೆದುಕೊಂಡು ಬಂದು ಮುಂದೆ ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದು ಅಂದಿನ ದಿನಗಳ ಒಂದು ಅಪರೂಪದ ಸಾಧನೆ. ಡಿ.ವಿ.ಜಿ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಪರಿಷತ್ತಿನ 'ವಸಂತ ಸಾಹಿತ್ಯೋತ್ಸವ' ಉಪನ್ಯಾಸ ಮಾಲೆಯಲ್ಲಿ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರು ಶ್ರೀ ಕೃಷ್ಣನ ಬಗ್ಗೆ ಒಂದು ಮೌಲಿಕ ಉಪನ್ಯಾಸವನ್ನು ನೀಡಿದ್ದರು. ಅದನ್ನು ಕೇಳಿದ ಡಿ.ವಿ.ಜಿ. ಅವರಿಗೆ ಆ ಉಪನ್ಯಾಸವನ್ನು ಪೂರ್ಣವಾಗಿ ಟಿಪ್ಪಣಿ ಮಾಡಿಕೊಳ್ಳುವ ಮನಸ್ಸಾಗಿತ್ತು. ವೆಂಕಣ್ಣಯ್ಯನವರು ಟಿಪ್ಪಣಿ ಮಾಡಿಕೊಳ್ಳುವುದಿಲ್ಲ, ಬರೆದುಕೊಡುವುದಂತೂ ದೂರದ ಮಾತೇ ಎಂಬುದು ಡಿ.ವಿ.ಜಿ. ಅವರಿಗೆ ಅರಿವಿತ್ತು. ಕೆಲವು ದಿನಗಳ ಬಳಿಕ ಬೆಂಗಳೂರು ಮಲ್ಲೇಶ್ವರಂ ಬಡಾವಣೆಯ ಕರ್ನಾಟಕ ಸಂಘದವರು ಅದೇ ಉಪನ್ಯಾಸವನ್ನು

ಏರ್ಪಡಿಸಿದ್ದರು. ಪರಿಷತ್ತಿನಲ್ಲಿ ಶೀಘ್ರಲಿಪಿಕಾರರಾಗಿದ್ದ ರಾಜಾರಾಯರಿಗೆ ಆ ಉಪನ್ಯಾಸವನ್ನು ಬರೆದುಕೊಂಡು ಬರುವ ಜವಾಬ್ದಾರಿಯನ್ನು ವಹಿಸಿದರು. ಇಡೀ ಉಪನ್ಯಾಸವನ್ನು – ಕ್ಲಿಷ್ಟವಾಗಿದ್ದ, ಸಂಕೀರ್ಣವಾಗಿದ್ದ ಪದ, ವಾಕ್ಯಗಳನ್ನು–ಚಾಚೂ ತಪ್ಪದೇ ಬರೆದುಕೊಂಡು ಬಂದು, ಅದನ್ನು ಕನ್ನಡಲಿಪಿಗೆ ಪರಿವರ್ತಿಸಿ ಡಿ.ವಿ.ಜಿ. ಅವರಿಗೆ ಒಪ್ಪಿಸಿದರು. ಡಿ.ವಿ.ಜಿ. ಅವರು ಪ್ರಶಂಸೆ ವ್ಯಕ್ತಪಡಿಸಿದರು. ೧೯೫೩ನೆಯ ಇಸ್ವಿಯಲ್ಲಿ 'ಜನಪ್ರಗತಿ' ವಾರಪತ್ರಿಕೆಯಲ್ಲಿ ಈ ಉಪನ್ಯಾಸವನ್ನು ಧಾರಾವಾಹಿ ರೂಪದಲ್ಲಿ ರಾಜಾರಾಯರು ಪ್ರಕಟಿಸಿದರು. ಮುಂದೆ ಇದಕ್ಕೆ ಪೂರಕವಾದ ಅನೇಕ ಗ್ರಂಥಗಳನ್ನು ಅವಲೋಕಿಸಿ, ಅಧ್ಯಯನ ಮಾಡಿ ಸೇರಿಸಿ 'ಪ್ರೊ. ಟಿ.ಎಸ್. ವೆಂಕಣ್ಣಯ್ಯನವರ ಉಪನ್ಯಾಸದ ವಿಸ್ತೃತ ರೂಪ 'ಎಂದು ಕಾಣಿಸಿ 'ಭಾರತದ ಶ್ರೀಕೃಷ್ಣ' ಎಂಬ ಒಂದು ಗ್ರಂಥವನ್ನು ರಚಿಸಿದರು. ರಾಜಾರಾಯರ ಈ ಪುಸ್ತಕವನ್ನು ೧೯೮೬ರಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಪ್ರಕಟಿಸಿದೆ. ಈ ಪುಸ್ತಕವನ್ನು ಓದಿದಾಗ ವೆಂಕಣ್ಣಯ್ಯನವರ ಅಗಾಧ ವಿದ್ವತ್ತಿನ ಪರಿಚಯವಾಗುತ್ತದೆ. ಕೃಷ್ಣನ ಬಗೆಗೆ ಸಾಮಾನ್ಯರಿಗೆ ಗೊತ್ತಿಲ್ಲದ ಅನೇಕ ವಾಸ್ತವ ವಿಷಯಗಳ ಪರಿಚಯವಾಗುತ್ತದೆ.

'ವೆಂಕಣ್ಣಯ್ಯನವರ ಉಪನ್ಯಾಸವು ನನ್ನ ಜೀವನದಲ್ಲಿ, ನಡೆನುಡಿಯಲ್ಲಿ ಮಹತ್ತರ ಪರಿಣಾಮ ಬೀರಿತು' ಎಂದು ರಾಜಾರಾಯರು ಈ ಪುಸ್ತಕದ 'ಮೊದಲ ಮಾತಿನಲ್ಲಿ' ನಿವೇದಿಸಿಕೊಂಡಿದ್ದಾರೆ. ಮುನ್ನುಡಿಯಲ್ಲಿ ಶ್ರೀ ಎಂ.ವಿ. ಸೀತಾರಾಮಯ್ಯನವರು ಹೇಳಿದ ಮಾತು ಹೀಗಿದೆ :

'ವೆಂಕಣ್ಣಯ್ಯನವರ ಭಾಷಣದ ಶ್ರೀ ಕೃಷ್ಣ ಬಾಹ್ಯರೇಖೆಗಳಿಂದ ರೂಪುಗೊಂಡ ರೇಖಾಚಿತ್ರ. ರಾಜಾರಾಯರು ಅದಕ್ಕೆ ಹೆಚ್ಚಿನ ಪೂರಕ ವಿವರಗಳನ್ನು ತುಂಬಿ ಬಣ್ಣ ಹಾಕಿ ಸುದರ್ಶನೀಯವಾದ ಒಂದು ವರ್ಣಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ.' ಈ ಕೃತಿಯ ವೈಶಿಷ್ಟ್ಯದ ಬಗ್ಗೆ ಮುಂದೆ ಪ್ರಸ್ತಾಪಿಸಲಾಗುವುದು.

❍



# ೩. ಕೈವಾರ ರಾಜಾರಾಯರ ಕೃತಿಗಳು

I. ದೊಡ್ಡ ನಾಟಕಗಳು : ೮

೧. ಸಂಸಾರ ಸತ್ಯಾಗ್ರಹ

೨. ಬುದ್ಧಿವಂತಿಕೆ

೩. ಬುಡುಬುಡಿಕೆ

೪. ದಿಳ್ಳಿಯಿಂದ ಹಳ್ಳಿಗೆ

೫. ಮದುವೆ ಕರಾರು

೬. ಅಪ್–ಟು–ಡೇಟ್–ಅಮ್ಮಯ್ಯ ಇತ್ಯಾದಿ

II. ಏಕಾಂಕ ನಾಟಕಗಳು : ೫೦

೧. ಗಂಡನ ಜುಲ್ಮಾನೆ ೨. ವಧು ಪರೀಕ್ಷೆ ೩. ಪ್ರೇಮ ಪರೀಕ್ಷೆ ೪. ಬೇಸ್ತು ೫. ನಾಟಕಕಾರನ ವಿಚಾರಣೆ ೬. ನೆಹರೂ ಬಂದ ದಿನ ೭. ಜುಲೇಖ ೮. ಅಚಾತುರ್ಯ ೯. ಬಾಬರನ ಪಾಠ ೧೦. ತ್ಯಾಗ ೧೧. ನಿಮ್ಮ ಸಮಸ್ಯೆಗೆ ನಮ್ಮ ಉತ್ತರ ೧೨. ಅಮರ ಜ್ಯೋತಿ ೧೩. ವಾಸಂತಿಯ ತಂತ್ರ ೧೪. ಅಮ್ಮಯ್ಯನ ಆಟಂಬಾಂಬ್ ೧೫. ಗುಲ್ ಬಾಯಿ ೧೬. ಗಂಡನಿಗಾಗಿ ಗುದ್ದಾಟ ೧೭. ನಲವತ್ತರ ನಲಿವು ೧೮. ಒಂದು ದುರಂತ (The Accused ನಾಟಕದ ಕನ್ನಡ ರೂಪ) ೧೯. ಆಂಟಿಗೊನೆ ೨೦. ಜೀವಸಮಾಧಿ ೨೧. ವೆಚ್ಚವಾದದ್ದೇ ಮೆಚ್ಚು ೨೨. ಸುಭಾಸರ ದಿನ ೨೩. ದಾರಿಯಲ್ಲಿ ೨೪. ಸಾವಿಲ್ಲದ ವರ ೨೫. ಗಳಿಸುವ ಗೃಹಿಣಿ ೨೬. ಪತ್ರ ಪ್ರಮಾದ ೨೭. ಹುಡುಗು ಸಹವಾಸ ೨೮. ಯಾ ಪ್ರೀತಿ ಹೆಚ್ಚು ೨೯. ನಿರಾಶ್ರಿತರ ಹುಡುಗಿ ೩೦. ನವಚದುರಂಗ ೩೧. ಶಯ್ಯಾದಾನ ೩೨. ಅಮ್ಮ ೩೩. ಮನೆ ಮಾರಾಟಕ್ಕೆ ೩೪. ಅಪವಾದ ೩೫. ಮಾಯೆಯ ಮುಸುಕು ೩೬. ದ್ಯೂತ ೩೭. ಸಿಂಧಿಡ್ರೆಸ್ ೩೮. ಪ್ರಮೀಳೆಯ ಪಾರ್ಲಿಮೆಂಟ್ ೩೯. ಅಸ್ಥಿಪಂಜರ ೪೦. ಅಮ್ಮಾವ್ರಾಡಳಿತ ೪೧. ಸಾಧಕನ ಸೇಡು (ಷೇಕ್ಸ್‌ಪಿಯರ್‌ನ ಮರ್ಚೆಂಟ್ ಆಫ್ ವೆನಿಸ್‌ನ ಭಾರತೀಯ ರೂಪ) ೪೨. ಹಗೆಯೋ ಪ್ರೇಮವೋ ? ೪೩. ಸಮಾಜದ ಸರ್ಪ ೪೪. ನವೀನ ದೀಪಾವಳಿ ೪೫. ವಿಲ್ ೪೬. ಭಾವೀ ಭಾರತದ ಕನಸು ೪೭. ವಾಕಿಂಗ್ ೪೮. ತಪ್ಪಾರದು ? ೪೯. ಕಡೇದಿನ – ಇತ್ಯಾದಿ.

III. ಜೀವನ ಚರಿತ್ರೆಗಳು : 'ಭಾರತ ರತ್ನ ಜವಾಹಿರ್' ಹಾಗೂ 'ರಾಜಮಂತ್ರ ಪ್ರವೀಣ : ಶ್ರೀ ಹೆಚ್.ವಿ. ನಂಜುಡಯ್ಯನವರು.'

IV. 'ತೊರವೆ ರಾಮಾಯಣದ ವಿಮರ್ಶೆ'–ವಿಮರ್ಶಾ ಲೇಖನ (ಅಖಿಲ ಕರ್ನಾಟಕ ವಿಮರ್ಶಾ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದೆ)

V. 'The Accused' - ಇಂಗ್ಲಿಷ್ ಏಕಾಂಕ ನಾಟಕ.

VI. ವಿವಿಧ ನಿಯತಕಾಲಿಕೆಗಳಲ್ಲಿ (ಮಾಸ ಪತ್ರಿಕೆಗಳಲ್ಲಿ) ಅನೇಕ ಹಾಸ್ಯ ಲೇಖನಗಳು ಮತ್ತು ಸಂಭಾಷಣಾ ರೂಪದ ಚಿತ್ರಗಳು ಪ್ರಕಟವಾಗಿವೆ.

ಅಪ್ರಕಟಿತವಾಗಿರುವ ಇನ್ನೂ ಹತ್ತು ನಾಟಕಗಳಿವೆ ಎಂದು ತಿಳಿದುಬಂದಿದೆ. ಜೀವನ ಚರಿತ್ರೆಯನ್ನು ವಸ್ತು ನಿಷ್ಠವಾಗಿ ಬರೆಯುವ ಮುನ್ನ ಅದಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿಗಳನ್ನು ಶ್ರಮವಹಿಸಿ ಕಲೆಹಾಕಿ ಸಂಶೋಧಕ ಪ್ರವೃತ್ತಿಯಿಂದ ಬರೆಯುತ್ತಿದ್ದುದು ರಾಜಾರಾಯರ ಹೆಚ್ಚುಗಾರಿಕೆ.

## ಕೆಲವು ಕೃತಿಗಳ ಪರಿಚಯ

### ಭಾರತರತ್ನ ಜವಾಹಿರ್


ಶ್ರೀ ರಾಜಾರಾಯರು ನೆಹರೂ ಅವರ ಬಗೆಗೆ ಇರುವ ಮಾಹಿತಿಯನ್ನು ಸಂಗ್ರಹಿಸಿ ಸುಮಾರು ಎಂಟು ಸಾವಿರ ಪುಟಗಳಷ್ಟು ವಿಷಯವನ್ನು ಅಧ್ಯಯನ ಮಾಡಿದ್ದಾರೆ. ದಿವಂಗತ ಶ್ರೀ ಕೆ. ತಮ್ಮಯ್ಯನವರ ಮಕ್ಕಳು ತಮ್ಮ ತಂದೆಯ ಆಸೆಯ ಪೂರೈಕೆಗಾಗಿ ಈ ಪುಸ್ತಕವನ್ನು ಬರೆಸಿದ್ದು, ಬೆಂಗಳೂರು ಪ್ರೆಸ್ ಇದನ್ನು ಪ್ರಕಟಿಸಿದೆ. ೧೯೫೫ರಲ್ಲಿ ಪ್ರಕಟವಾದ ಈ ಉಪಯುಕ್ತ ಪುಸ್ತಕ ಹನ್ನೊಂದು ಅಧ್ಯಾಯಗಳನ್ನೊಳಗೊಂಡಿದ್ದು ೧೭೮ ಪುಟಗಳಷ್ಟಿದೆ. ೧೨ರಿಂದ ೨೦ ವರ್ಷಗಳೊಳಗಿನ ಮಕ್ಕಳನ್ನು ದೃಷ್ಟಿಯಲ್ಲಿಟ್ಟು ಕೊಂಡು ರಚಿಸಲಾಗಿದ್ದರೂ ಇದು ಎಲ್ಲ ವಯೋಮಾನದವರಿಗೂ ಅಭ್ಯಾಸಯೋಗ್ಯ ವಾಗಿದೆ. ಅನೇಕ ಆಯಾಮಗಳಿಂದ ನೆಹರೂ ಅವರ ಜೀವನ ಚಿತ್ರವನ್ನು ಸ್ವಾರಸ್ಯಕರವಾಗಿ ಬರೆದು ಉಣಬಡಿಸಿದ್ದಾರೆ. ಸ್ವತಃ ನೆಹರೂ ಅವರಿಗೆ ಕೈಯ್ಯಾರೆ ಈ ಪುಸ್ತಕವನ್ನು ನೀಡಿರುವುದನ್ನು ರಾಜಾರಾಯರು ಮುನ್ನುಡಿಯಲ್ಲಿ ಸ್ಮರಿಸಿಕೊಂಡಿದ್ದಾರೆ.

ನೆಹರೂ ಅವರ ಸ್ವಾತಂತ್ರ್ಯ ಸಾಧನೆಯ ಕಾರ್ಯಚಟುವಟಿಕೆಗಳನ್ನು 'ಮಹಾಪ್ರಧಾನಿ ಯಾಗುವವರೆಗೆ' ಎಂಬ ಅಧ್ಯಾಯದಲ್ಲಿ ಕೊಟ್ಟಿದೆ. ಅದರಲ್ಲಿ, ಜೀವನದ ಒಂದೊಂದು ಸಂಗತಿಯೂ ನೆಹರೂ ಅವರ ವ್ಯಕ್ತಿತ್ವವನ್ನು ರೂಪಿಸಲು ಹೇಗೆ ಸಹಾಯ ಮಾಡಿತು ಎಂಬುದನ್ನು ವಿಶದವಾಗಿ ತಿಳಿಸಿದ್ದಾರೆ. ತಂದೆ, ತಾಯಿ, ಹೆಂಡತಿ, ಸಂಸಾರ, ನೆಹರೂ ಅವರಿಗೆ ಅವರ ಬೆಂಬಲ ಎಷ್ಟಿತ್ತೆಂಬುದನ್ನು 'ನೆಹರೂ ಅವರ ಸಂಸಾರ' ಎಂಬ ಅಧ್ಯಾಯ ನಿರೂಪಿಸುತ್ತದೆ. ಅವರು ಜೀವನದಲ್ಲಿ ಗೆದ್ದುಬಂದ ಗಂಡಾಂತರಗಳನ್ನು 'ವಿಷ ನಿಮಿಷಗಳು' ಎಂಬ ಅಧ್ಯಾಯದಲ್ಲಿಯೂ, ವ್ಯಕ್ತಿಯ ಸ್ವಭಾವ ನಡೆವಳಿಕೆ, ಪಾಂಡಿತ್ಯ,



ಸಂಸ್ಕೃತಿ–ಮೊದಲಾದುವನ್ನು ತಿಳಿಸುವ ಪ್ರಕರಣಗಳನ್ನು 'ರಸನಿಮಿಷಗಳು' ಎಂಬ ಅಧ್ಯಾಯದಲ್ಲಿಯೂ ಉದಾಹರಿಸಿದೆ. ಮಹಾತ್ಮಾ ಗಾಂಧಿಯವರು ನೆಹರೂ ಅವರ ಜೀವನವನ್ನು ಹೇಗೆ ರೂಪಿಸಿದರೆಂಬುದನ್ನೂ ಪರಸ್ಪರ ಸಂಬಂಧವನ್ನೂ 'ಗಾಂಧೀಜಿ ಮತ್ತು ನೆಹರು' ಎಂಬ ಭಾಗ ತಿಳಿಸುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿ ನೆಹರೂ ಅವರ ಸ್ಥಾನವನ್ನೂ ಅವರ ಭಾಷಣ ಕಲೆಯನ್ನೂ ಒಂದೊಂದು ಪ್ರಕರಣದಲ್ಲಿ ತಿಳಿಸಲಾಗಿದೆ. ವಿದೇಶಾಂಗ ಮಂತ್ರಿಯಾಗಿ ನೆಹರೂ ಅವರು ಸಾಧಿಸಿದ ವಿಶ್ವಚರಿತ್ರೆಯ ಪ್ರಕರಣಗಳನ್ನು ಒಂದು ಭಾಗದಲ್ಲಿಯೂ ಮಹಾಪ್ರಧಾನಿಯಾಗಿ ನಲವತ್ತು ಕೋಟಿ ಪ್ರಜೆಗಳ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಮತ್ತು ಸಾಧಿಸುತ್ತಿರುವ ಪ್ರಯೋಗ ಸಾಧನೆಗಳನ್ನು ಇನ್ನೊಂದು ಭಾಗದಲ್ಲೂ ವಿವರಿಸಿದೆ. ನೆಹರೂ ಅವರ ಪ್ರಪಂಚ ಪರ್ಯಟನ ಮತ್ತು ಪ್ರವಾಸಗಳಿಂದ ಸಾಧಿತವಾಗಿರುವ ದೇಶೀಯ ವಿದೇಶೀಯ ಸಾಧನೆಗಳನ್ನು ಒಂದು ಅಧ್ಯಾಯ ತಿಳಿಸುತ್ತದೆ. ಜಗತ್ತನ್ನೇ ಆಕರ್ಷಿಸಿರುವ ಪಂಚಶೀಲದ ಬಗ್ಗೆ ಒಂದು ಅಧ್ಯಾಯವಿದೆ. ಹೀಗೆ ನೆಹರೂ ಅವರು ಹುಟ್ಟಿದಾಗಿನಿಂದ ಅವರು ರಷ್ಯಾ ಪ್ರವಾಸವನ್ನು ಮುಗಿಸಿ ಬಂದ ಮೇಲೆ ಅವರ ಎಲ್ಲ ಸಾಧನೆಯ ಮೆಚ್ಚಿಕೆಗಾಗಿ ಭಾರತದ ಅಧ್ಯಕ್ಷರಾಗಿದ್ದ ಡಾ. ರಾಜೇಂದ್ರ ಪ್ರಸಾದ್ ಅವರು 'ಭಾರತ ರತ್ನ'ವೆಂಬ ಬಿರುದನ್ನು ದಯಪಾಲಿಸಿರುವವರೆಗಿನ ಜೀವನ ಚರಿತ್ರೆಯನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ. ನೆಹರೂ ಅವರ ಜೀವನವನ್ನು ಎಲ್ಲ ದೃಷ್ಟಿಕೋನಗಳಿಂದ ಅರ್ಥ ಮಾಡಿಕೊಳ್ಳಬೇಕೆಂದಿರುವವರಿಗೆ ಕನ್ನಡದಲ್ಲಿ ಆಗ ಇದ್ದ ಪುಸ್ತಕ ಇದೊಂದೇ ಎಂಬುದು ಈ ಪುಸ್ತಕದ ಮಹತ್ವವನ್ನು ಸಾರುತ್ತದೆ.

ನೆಹರೂ ಅವರ ಜೀವನದ ಅತ್ಯಂತ ಅಪರೂಪದ ಫೋಟೋಗಳನ್ನು ಶ್ರಮವಹಿಸಿ ವಿವಿಧ ಮೂಲಗಳಿಂದ ಸಂಗ್ರಹಿಸಿ ಮಧ್ಯೆ ಮಧ್ಯೆ ಮುದ್ರಿಸಿರುವುದು ಪುಸ್ತಕದ ಮೌಲ್ಯವನ್ನು ಇನ್ನಷ್ಟು ಹೆಚ್ಚಿಸಿದೆ. ಕೆಲವನ್ನು ಇಲ್ಲಿ ಕಾಣಬಹುದು.



**ಜವಾಹಿರ್‌ಲಾಲ್, ಬಾರ್–ಅಟ್–ಲಾ**



ನೆಹರು ಅವರ ಪರಿವಾರ
ನಿಂತಿರುವವರು : ಎಡದಿಂದ ಬಲಕ್ಕೆ : ಲಾಡಲೀ ಪ್ರಸಾದ್ ಜುತ್ಷಿ
ಶ್ರೀಮತಿ ಮಹಾರಾಜ ಬಹದ್ದೂರ್ ತಕ್ರು, ಪಂಡಿತ ಮೋತೀಲಾಲ ನೆಹರು.
ಕುಳಿತಿರುವವರು : ಶ್ರೀಮತಿ ಸ್ವರೂಪ ರಾಣಿ ನೆಹರು, ಜವಾಹಿರಲಾಲ್, ವಿಜಯಲಕ್ಷ್ಮಿ.
ಕೆಳಗಡೆ : ಶ್ರೀಮತಿ ಲಾಡಲೀ ಪ್ರಸಾದ್ ಜುತ್ಷಿ.



ವಿಶ್ವವಿದ್ಯಾಲಯದ ಉಡುಪಿನಲ್ಲಿ ನೆಹರು





ಪಂಚಶೀಲ ಸೂತ್ರದ ಪ್ರತಿಷ್ಠಾಪಕರಾದ ನೆಹರೂ ಮತ್ತು ಪ್ರಥಮ ಅನುಮೋದಕರಾದ ಚೂ.ಎನ್.ಲೈ



ಅಧ್ಯಕ್ಷ ರಾಜೇಂದ್ರ ಪ್ರಸಾದರು ರಷ್ಯಾ ಪ್ರವಾಸದಿಂದ ಹಿಂದಿರುಗಿ ಬಂದ ಜವಾಹಿರಲಾಲರಿಗೆ
'ಭಾರತರತ್ನ' ವೆಂಬ ಬಿರುದನ್ನು ಪ್ರಕಟಿಸುತ್ತಿರುವುದು.

## ರಾಜಮಂತ್ರ ಪ್ರವೀಣ ಶ್ರೀ ಹೆಚ್.ವಿ. ನಂಜುಂಡಯ್ಯ

ಐ.ಬಿ.ಹೆಚ್. ಪ್ರಕಾಶನವು 'ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ' ಮಾಲೆಯಲ್ಲಿ ಪ್ರಕಟಿಸಿರುವ ಈ ಪುಟ್ಟ ಪುಸ್ತಕವು ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಪ್ರಥಮ ಅಧ್ಯಕ್ಷರಾಗಿದ್ದ ಶ್ರೀ ಹೆಚ್.ವಿ. ನಂಜುಂಡಯ್ಯನವರ ಜೀವನ ಪರಿಚಯವನ್ನು ಸಂಕ್ಷಿಪ್ತವಾಗಿ ನೀಡುತ್ತದೆ.

ಶ್ರೀ ರಾಜಾರಾಯರ ನಾಟಕಗಳು ಅವರ ಬಹುಮುಖ ಪ್ರತಿಭೆಯನ್ನು ಅನಾವರಣಗೊಳಿಸುತ್ತವೆ. ವಸ್ತು ವೈವಿಧ್ಯತೆ, ಭಾವ ಪ್ರಚೋದನೆಗಳಿಂದ ನಮ್ಮನ್ನು ಬೆರಗುಗೊಳಿಸುತ್ತವೆ. ಕೆಲವು ಪ್ರಾತಿನಿಧಿಕ ನಾಟಕಗಳನ್ನು ಈ ದೃಷ್ಟಿಯಿಂದ ಅವಲೋಕಿಸಬಹುದೆಂದು ತೋರುತ್ತದೆ.

### ಕಡೇ ದಿನ

ಮಹಾತ್ಮಾಗಾಂಧಿಯವರ ಕಡೇ ದಿನದ ಘಟನೆಗಳನ್ನೊಳಗೊಂಡ ನಾಟಕ. 'ಸಾಹಿತ್ಯ ಮಂದಿರ'ದ ಶ್ರೀ ಎಚ್.ಎಸ್. ದೊರೆಸ್ವಾಮಿಯವರು ಇದನ್ನು ಪ್ರಕಟಿಸಿದ್ದಾರೆ. ಮೂರು ದೃಶ್ಯಗಳ ಈ ನಾಟಕದ ಮೊದಲೆರಡು ದೃಶ್ಯಗಳು ಸತ್ಯಸಂಗತಿಗಳ ಆಧಾರದ ಮೇಲೆ ರಚಿತವಾಗಿವೆ. ಮೂರನೆಯದು ನಾಟಕಕಾರರ ಕಲ್ಪನೆ.

ಕೈವಾರ ರಾಜಾರಾಯರು ಗಾಂಧೀಜಿಯವರನ್ನು ಕಂಡವರು. ಅವರನ್ನು ಕುರಿತ ಗ್ರಂಥರಾಶಿಯನ್ನು ಪರಿಶೀಲಿಸಿದವರು. ಅದರಲ್ಲೂ ಗಾಂಧೀಜಿಯವರ ಕಡೆಗಾಲದ ಇತಿಹಾಸವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿದವರು. ಬಹುಕಾಲದ ಚಿಂತನೆಯ ಫಲ ಈ ಉತ್ತಮ ನಾಟಕ. ಪ್ರಾರ್ಥನಾ ಶ್ಲೋಕಗಳನ್ನು ಸಾಬರಮತಿ ಆಶ್ರಮದ 'ಭಜನಾವಳಿ'ಗಳಿಂದಲೇ ಆಯ್ದುಕೊಂಡಿರುವುದು ಸನ್ನಿವೇಶಗಳನ್ನು ಹೆಚ್ಚು ಆಪ್ತಗೊಳಿಸುತ್ತದೆ.

ಪುಣೆಯ 'ಹಿಂದೂರಾಷ್ಟ್ರ' ಎಂಬ ಪತ್ರಿಕೆಯ ಸಂಪಾದಕ ನಾಥೂರಾಮ್ ಗೋಡ್ಸೆ, ಅದೇ ಪತ್ರಿಕೆಯ ವ್ಯವಸ್ಥಾಪಕ ನಿರ್ದೇಶಕ ನಾರಾಯಣ ಆಪ್ಟೆ, ಅಹಮದ್ ನಗರದ ಹೋಟೆಲ್ ಮಾಲೀಕ ವಿಷ್ಣು ಕರಕರೆ, ಇವರು ಸೇರಿಕೊಂಡು ರೂಪಿಸಿದ ಗಾಂಧೀಜಿಯವರ ಕೊಲೆಯ ಸಂಚನ್ನು ಎಳೆ ಎಳೆಯಾಗಿ ಚಿತ್ರಿಸಲಾಗಿದೆ.

ಮೊದಲನೆಯ ದೃಶ್ಯ ಸಾಮಾನ್ಯ ಮಾನವನ ಮನೋಧರ್ಮವನ್ನೂ, ಎರಡನೆಯ ದೃಶ್ಯ ಮಾನವನಾಗಿ ಉನ್ನತಿಯನ್ನು ಮುಟ್ಟಿದ ಸ್ಥಿತಪ್ರಜ್ಞನ ಮನೋಧರ್ಮವನ್ನೂ, ಮೂರನೆಯ ದೃಶ್ಯ ದೇವತ್ವವನ್ನು ಪಡೆದ ಮಾನವಾತೀತನ ಮನೋಧರ್ಮವನ್ನೂ ಚಿತ್ರಿಸುತ್ತದೆ. ಈ ಮೂರೂ ದೃಶ್ಯಗಳನ್ನು ಕ್ರಮವಾಗಿ 'ಮಾನವ' 'ಸ್ಥಿತಪ್ರಜ್ಞ' 'ದೇವತೆ' ಎಂದು ಹೆಸರಿಸಿದ್ದಾರೆ. ಇದು ಗಾಂಧೀಜಿಯವರ ವ್ಯಕ್ತಿತ್ವದ ಬೆಳವಣಿಗೆಯನ್ನೂ ಧ್ವನಿಸುತ್ತದೆ. ಮಾನವನಾಗಿ ಹುಟ್ಟಿದರೂ ಅಸಾಧಾರಣ ಸಾಧನೆಗಳಿಂದ ದೈವತ್ವಕ್ಕೆ ಏರಿದ ಯುಗಪುರುಷ ಗಾಂಧೀಜೀಯುವರ ವ್ಯಕ್ತಿಚಿತ್ರವನ್ನು ಮನೋಜ್ಞವಾಗಿ ನಿರೂಪಿಸುತ್ತದೆ ಈ ನಾಟಕ.



ಗಾಂಧೀಜಿಯ ಪಾತ್ರದ ಬಾಯಿಂದ ನುಡಿಸಿದ ಕೆಲವು ಮಾತುಗಳು ಕೈವಾರ ರಾಜಾರಾಯರ ಉನ್ನತ ಚಿಂತನೆಗಳಿಗೆ ನಿದರ್ಶನಗಳಾಗಿವೆ.

"....ಸಾವು ಬಾಳುಗಳೆಲ್ಲಾ ಆ ಪರಮಾತ್ಮನ ಇಚ್ಛೆಯಂತೆ ನಡೆಯುತ್ತವೆ. ದ್ವಾಪರ ಯುಗದಲ್ಲಿ ಯಾದವರು ನೀತಿಗೆಟ್ಟವರಾಗಿ ಕೊಲೆ, ಸುಲಿಗೆ, ವ್ಯಭಿಚಾರ, ಸುರಾಪಾನ, ಜೂಜು ಇತ್ಯಾದಿ ದುರ್ವ್ಯಸನಗಳಲ್ಲಿ ತೊಡಗಿ ಪಾಪಕರ್ಮಿಗಳಾಗಿ ತಮ್ಮೊಳಗೆ ತಾವೇ ಹೊಡೆದಾಡಿ ಸಾಯುತ್ತಿದ್ದಾಗ ಶ್ರೀಕೃಷ್ಣ ತಟಸ್ಥಭಾವದಿಂದ ಇದ್ದ. ಅವರ ಸಾವಿಗೆ ಯಾವ ಅಡ್ಡಿಯನ್ನೂ ತರಲಿಲ್ಲ...."

"....ಧರ್ಮ ನಿಯಮಗಳಿಗೆ ಯುಗಗಳ ಲೆಕ್ಕವಿಲ್ಲ. ಅದು ಅನಾದಿ, ಅನಂತ. ಜನರು ತಪ್ಪು ಮಾರ್ಗದಲ್ಲಿ ನಡೆದು ದೇಶ ಕಂಟಕರಾದರೆ ಅವರನ್ನು ನಾಶ ಮಾಡಲು ದೈವಸಂಕಲ್ಪವಾದರೆ ಅಡ್ಡಿಪಡಿಸಲು ಯಾರಿಗೆ ಸಾಧ್ಯವಿದೆ ?"

"....ಧರ್ಮಯುದ್ಧವನ್ನು ಗೀತೆ ಬೋಧಿಸುವುದಿಲ್ಲ. ಧರ್ಮ ಅಧರ್ಮಕ್ಕೆ, ಹಿಂಸೆ ಅಹಿಂಸೆಗಳಿಗೆ, ಸ್ವಾರ್ಥ ನಿಸ್ವಾರ್ಥಗಳಿಗೆ ಪ್ರತಿ ದಿನ ಈ ಪ್ರಪಂಚದಲ್ಲಿ ಬಾಹ್ಯಯುದ್ಧ, ಅಂತರ್ಯುದ್ಧಗಳು ನಡೆಯುತ್ತಿರುತ್ತವೆ. ಧರ್ಮಸಂಸ್ಥಾಪನೆಗೆ ನಿಸ್ವಾರ್ಥವಾಗಿ ಮಾಡುವ ಯುದ್ಧವನ್ನು ಗೀತೆ ಪ್ರತಿಪಾದಿಸುತ್ತದೆ...."

### ಬುಡುಬುಡಿಕೆ

ರಂಗದ ಮೇಲೆ ಅತ್ಯಂತ ಯಶಸ್ವಿಯಾಗಿ ಹೆಚ್ಚು ಪ್ರದರ್ಶನಗಳನ್ನು ಕಂಡಂತಹ ನಾಟಕ ಇದು. ಅನೇಕ ಸಾರಿ ಮರು ಮುದ್ರಣಗೊಂಡಿದೆ. ಕಥಾ ಸಾರಾಂಶ ಸಂಕ್ಷಿಪ್ತವಾಗಿ ಹೀಗಿದೆ :

ಗಂಡ ಶಂಕರರಾಯರು ತನ್ನ ಮೂಕಿ ಹೆಂಡತಿ ಸುಶೀಲೆಗೆ ಚಿಕಿತ್ಸೆ ಕೊಡಿಸಿ ಮಾತನಾಡಲು ಬರುವಂತೆ ಮಾಡುತ್ತಾರೆ. ಮಾತು ಬರತೊಡಗುತ್ತದೆ. ಕ್ರಮೇಣ ಜಾಸ್ತಿ ಆಗತೊಡಗುತ್ತದೆ. ಅತಿಯಾಗಿ ಮಾತನಾಡಲು ಶುರು ಮಾಡುತ್ತಾಳೆ. ಮನೆಯವರೆಲ್ಲರ ತಲೆ ಚಿಟ್ಟು ಹಿಡಿಯತೊಡಗುತ್ತದೆ. ಡಾಕ್ಟರನ್ನು ಕರೆಸಿ ಅವಳನ್ನು ಮೊದಲಿನಂತೆಯೇ ಮೂಕಿ ಮಾಡಿ ಅಂತಾರೆ, ಡಾಕ್ಟರು ಆಗೋಲ್ಲ ಅಂತಾರೆ. ಬೇಕಿದ್ದರೆ ನಿಮ್ಮ ಕಿವಿಗೆ ಚಿಕಿತ್ಸೆ ಮಾಡಿ ಮಾತು ಕೇಳದ ಹಾಗೆ ಮಾಡ್ತೀನಿ ಅಂತಾರೆ. ಶಂಕರರಾಯರು ನಿರುಪಾಯರಾಗ್ತಾರೆ. ಒಂದು ಆಕಸ್ಮಿಕ ಘಟನೆ ನಡೆದು, ಸುಶೀಲೆ ಮೇಲಿನಿಂದ ಜಾರಿಬಿದ್ದು ಕುರ್ಚಿಯ 'ಕೈ'ಗೆ ಕುತ್ತಿಗೆ ಬಡಿದು ಧ್ವನಿಪೆಟ್ಟಿಗೆಯ ನರತಂತು ಕಡಿದುಹೋಗಿ ಮಾತು ನಿಂತು ಹೋಗುತ್ತದೆ ! ಎಲ್ಲರಿಗೂ ಸಮಾಧಾನವಾಗುತ್ತದೆ !

ನಾಟಕದ ತುಂಬ ಹಾಸ್ಯದ ಹೊನಲು ಹರಿದಾಡುತ್ತದೆ. ನುಡಿಗಟ್ಟನ್ನು, ಗಾದೆಮಾತುಗಳನ್ನು, ನಾಣ್ಣುಡಿಗಳನ್ನು ಸಾಂಪ್ರದಾಯಿಕ ಪದಗಳನ್ನು ಯಥೇಚ್ಛವಾಗಿ ಬಳಸಿದ್ದಾರೆ. 'ಇಕ್ಕೋದಿಕ್ಕತ್ತೆ ನವಣಿಕುಟ್ಟೇನು', 'ರತಿಯಂಥ ರೂಪ, ಕುಬೇರನ ಆಸ್ತಿ' 'ಸುಂಕದವನ ಮುಂದೆ ಸುಖದುಃಖ ಹೇಳಿಕೊಂಡ ಹಾಗೆ', ಇತ್ಯಾದಿ. ತಿಮ್ಮ ಮತ್ತು

ನಂಜ ಎಂಬ ಇಬ್ಬರು ಸೇವಕರ ಸಂಭಾಷಣೆಯಲ್ಲಿ ಕಾಣುವ ಗ್ರಾಮೀಣ ಭಾಷೆಯ ಸೊಗಡು ತುಂಬ ಮುದ ಕೊಡುತ್ತದೆ. 'ತಿಂಡಿಕಿ ಟಿಕಾಣಿ ಲ್ಯಾಕಪೋತೆ ಲಂಜಿಕಿ ಬುಲಾಕಂಟ' ಎಂಬ ತೆಲುಗು ಗಾದೆಯೂ, ಮಾತುಗಳೂ ಅಲ್ಲಲ್ಲಿ ಇಣುಕುತ್ತವೆ. 'ಒಂದೊಂದ್ ಸಲ ಹೆಂಡತಿ ಮೂಕಿ ಆಗಿದ್ರೇ ಸುಖ' ಎಂಬ ಶಂಕರರಾಯರ ಅಭಿಪ್ರಾಯ ಅನೇಕ ಗಂಡಂದಿರ ಅನುಭವಕ್ಕೆ ಬಂದಿರಲಿಕ್ಕೂ ಸಾಕು !

ಶ್ರೀ ಕೈವಾರ ರಾಜಾರಾಯರ ಹಾಸ್ಯ ಪ್ರವೃತ್ತಿ, ಹಳ್ಳಿ ಭಾಷೆಯ ಮೇಲಿನ ಹಿಡಿತ, ಅನೇಕ ಇತರ ಭಾಷೆಗಳ ಜ್ಞಾನ ಇತ್ಯಾದಿ ವಿಶೇಷ ಅಂಶಗಳನ್ನು ಅತ್ಯಂತ ಸಮರ್ಥವಾಗಿ ತೆರೆದಿಡುತ್ತದೆ ಈ ನಾಟಕ.

## ವಧು ಪರೀಕ್ಷೆ

ಬೇರೆ ಊರಿನಲ್ಲಿ ಉದ್ಯೋಗದಲ್ಲಿದ್ದ ರಾಮು ಎಂಬ ವರ ಫೋಟೋ ನೋಡಿ ವಧುವನ್ನು ಒಪ್ಪಿಕೊಂಡಿದ್ದಾನೆ. ಅವನ ತಂದೆ ತಾಯಿ ನೋಡಿ ಒಪ್ಪಿಗೆ ಸೂಚಿಸಿ ಕಾಗದ ಬರೆದಿದ್ದರು. ವರಪೂಜೆಯ ಹಿಂದಿನ ದಿನ ಊರಿಗೆ ಬಂದವನು ವರಪೂಜೆಗೆ ಮುಂಚೆ ವಧುವನ್ನು ಖುದ್ದಾಗಿ ನೋಡಲು ಚಡಪಡಿಸುತ್ತಾನೆ. ಭಾವನ ಸಹಾಯ ಪಡೆಯುತ್ತಾನೆ. ಅನೇಕ ತಂತ್ರಗಳನ್ನು ಬಳಸುತ್ತಾನೆ. ಅಂತೂ ಭೇಟಿ ಆಗುತ್ತದೆ. ಇವರ ವರ್ತನೆ ಹಿಡಿಸದೇ ವಧುವೇ ಇವನನ್ನು ತಿರಸ್ಕರಿಸಿ ಬಿಡುತ್ತಾಳೆ. ಸುಂದರ ವಧು ಕೈತಪ್ಪಿ ಹೋದುದಕ್ಕೆ ವರ ಪೇಚಾಡುತ್ತಾನೆ.

ಈ ಪುಟ್ಟ ನಾಟಕ ಕ್ಷಣ ಕ್ಷಣಕ್ಕೂ ಕುತೂಹಲವನ್ನು ಹೆಚ್ಚಿಸುತ್ತ ಕೊನೆಯವರೆಗೂ ಅದನ್ನು ಉಳಿಸಿಕೊಳ್ಳುತ್ತದೆ ! ಲಘು ಹಾಸ್ಯ ಹಾಸು ಹೊಕ್ಕಾಗಿದೆ. ಸನ್ನಿವೇಶಗಳ ಚಿತ್ರಣ ರಸವತ್ತಾಗಿದೆ. ಶುಭ ಸಮಾರಂಭಗಳಲ್ಲಿ ಬಳಸುವ ಮಾತಿನ ವೈಖರಿ, ಅಂದಿನ ದಿನಗಳ ಸಂಪ್ರದಾಯ, ಸಂಸ್ಕೃತಿ, ಶಾಸ್ತ್ರ, ಭಾಷೆ, ಶೈಲಿ ಇವೆಲ್ಲವುಗಳ ಗಾಢವಾದ ದರ್ಶನವಾಗುತ್ತದೆ. ಈ ಕ್ಷೇತ್ರದಲ್ಲಿ ಶ್ರೀ ರಾಜಾರಾಯರಿಗಿರುವ ಅನುಭವಕ್ಕೆ ತಲೆದೂಗುತ್ತೇವೆ.

## ಬುದ್ಧಿವಂತಿಕೆ

ಚಪಲಚಿತ್ತದ ಸ್ತ್ರೀಮೋಹೀ ವೈದ್ಯಪತಿಯನ್ನು ತನ್ನ ಬುದ್ಧಿವಂತಿಕೆಯಿಂದ ನಿಗ್ರಹಿಸಿ, ತಮ್ಮ ಸುಖ ಸಂಸಾರಕ್ಕೆ ಕಂಟಕವಾಗಿದ್ದ ಆ ಸ್ತ್ರೀಯನ್ನೂ ಉಪಾಯವಾಗಿ ನಿವಾರಿಸಿಕೊಂಡ ಗೃಹಿಣಿಯೊಬ್ಬಳ ಯಶಸ್ವೀ ತಂತ್ರಗಾರಿಕೆಯನ್ನು ಎರಡು ದೃಶ್ಯಗಳ ಈ ನಾಟಕ ತಿಳಿ ಹಾಸ್ಯ ಶೈಲಿಯಲ್ಲಿ ನಿರೂಪಿಸುತ್ತದೆ.

ಸಮಕಾಲೀನ ಕೌಟುಂಬಿಕ ಚಿತ್ರಣ, ಸಾಮಾಜಿಕ ಜೀವನ ವಿಧಾನವನ್ನು ಸ್ಪಷ್ಟವಾಗಿ ಇಲ್ಲಿ ಗುರುತಿಸಬಹುದು. ಕೈವಾರ ರಾಜಾರಾಯರ ವಿನೋದ ಪ್ರವೃತ್ತಿ ಇಲ್ಲಿ ಮತ್ತೊಮ್ಮೆ ಎದ್ದುಕಾಣುತ್ತದೆ.



## ಬೇಸ್ತು

ವೆಚ್ಚದಲ್ಲಿ ಹಿಡಿತ ಸಾಧಿಸುತ್ತಿರುವ ಮಧ್ಯಮ ವರ್ಗದ ಕುಟುಂಬದ ಯಜಮಾನ ಗೋಪಾಲರಾಯರು ಯುಗಾದಿ ಹಬ್ಬಕ್ಕೆ ಈ ಸಾರಿ ಬಟ್ಟೆ ಕೊಳ್ಳೋ ಹಾಗಿಲ್ಲ ಅಂತ ಶ್ರೀಮಂತ ಮನೆತನದಿಂದ ಬಂದ ತನ್ನ ಹೆಂಡತಿಗೆ ತಾಕೀತು ಮಾಡ್ತಾರೆ. ಆದರೂ ಅವಳು ೩೦.೦೦ ರೂ. ಸೀರೆನ್ನ ಚೌಕಾಶಿ ಮಾಡಿ ೨೫.೦೦ ರೂ.ಗೆ ತಂದುಬಿಡ್ತಾಳೆ. ಗಂಡ ಹೆಂಡಿರ ಮಧ್ಯೆ ಜಗಳವಾಗುತ್ತದೆ. ಸೀರೆ ವಾಪಸ್ ಕೊಟ್ಟು ಬಾ ಅಂತ ಗಂಡ ಹೇಳ್ತಾನೆ. ಅವಳು ನಿರಾಕರಿಸುತ್ತಾಳೆ.

ಗೋಪಾಲರಾಯರ ಮನೆಗೆ ಪರಿಚಿತಳಾದ ಪಕ್ಕದ ರಸ್ತೆಯ ಶಾಂತಾಬಾಯಿ ಮನೆಯಲ್ಲಿ ಗೋಪಾಲರಾಯರು ಇಲ್ಲದಾಗ ಒಂದು ಸೂಟಿನ ಬ್ಯಾಗ್‌ನೊಡನೆ ಬರುತ್ತಾಳೆ. 'ಇದು ತನ್ನ ಗಂಡನ ಸೂಟು. ಇದನ್ನು ಗೋಪಾಲರಾಯರಿಗೆ ಕೊಡು. ತನ್ನ ಗಂಡನ ಇಷ್ಟಕ್ಕೆ ವಿರುದ್ಧವಾಗಿ ಸೀರೆ ಕೊಂಡುಕೊಂಡಿದ್ದಕ್ಕೆ ಮನೆ ಬಿಟ್ಟು ಹೋಗಿದ್ದಾನೆ. ನೀನು ಕೂಡ ಸೀರೆನ್ನ ವಾಪಸ್ ಕೊಟ್ಟುಬಿಡು' ಅಂತ ಗೋಪಾಲರಾಯರ ಹೆಂಡತಿ ರಾಧಾಗೆ ಬುದ್ಧಿವಾದ ಹೇಳ್ತಾಳೆ. ಅಷ್ಟರಲ್ಲಿ ಗೋಪಾಲರಾಯರು ಬರ್ತಾರೆ. ಹಳೆ ಬಟ್ಟೆ ತಗೊಂಡು ಹೊಸ ಪಾತ್ರೆ ಮಾರುವವನು ಬೀದಿಲಿ ಬಂದಿದ್ದನ್ನು ಗಮನಿಸಿದ ರಾಧಾ ಹೊರಗೆ ಹೋಗ್ತಾಳೆ.

ಗೋಪಾಲರಾಯರು ಶಾಂತಾಬಾಯಿ ಜೊತೆ ಮಾತನಾಡುತ್ತಾ ತಾನು ಒಂದುನೂರು ಕೊಟ್ಟು ಹೊಲಿಸಿದ ಸೂಟನ್ನು ನಿಮ್ಮ ಮೂಲಕ 'ಕೊಡುಗೆ' ಅಂತ ಪಡೆದುಕೊಂಡಿದ್ದು ರಾಧಾಗೆ ಗೊತ್ತಾಗಿಲ್ಲ ತಾನೆ ? ಅಂತ ಕೇಳ್ತಾರೆ. 'ಇಲ್ಲ' ಅಂತ ಹೇಳ್ತಾರೆ ಶಾಂತಾಬಾಯಿ.

ರಾಧಾ ಹೊಸ ಪಾತ್ರೆ ಹಿಡಿದುಕೊಂಡು ೨೦.೦೦ ರೂ. ನೋಟು ಎಣಿಸುತ್ತಾ ಒಳಗೆ ಬರುತ್ತಾಳೆ. ಯಾವ ಹಳೇ ಬಟ್ಟೆ ಕೊಟ್ಟೆ ಅಂತ ಗಂಡ ಕೇಳ್ತಾನೆ. ಹೆಂಡತಿ ಹೇಳ್ತಾಳೆ : 'ಅದೇ ರೀ, ಶಾಂತಾಬಾಯಿ ತನ್ನ ಗಂಡನ ಹಳೇ ಸೂಟನ್ನು ಕೊಟ್ಟರಲ್ಲಾ ಈಗ, ಯಾರದ್ದೊ ಹಳೇ ಸೂಟನ್ನು ನೀವು ಯಾಕೆ ತೊಟ್ಟುಕೋಬೇಕು ಅಂತ ಅದನ್ನು ಮಾರಿ ಈ ಪಾತ್ರೆ ತಂದೆ. ಮೇಲೆ ಇಪ್ಪತ್ತು ರೂ. ಬೇರೆ ಸಿಕ್ಕಿತು' ಅಂದಳು. ಹೆಂಡತಿಯನ್ನು ಬೇಸ್ತು ಬೀಳಿಸಲು ಹೋಗಿ ತಾನೇ ಬೇಸ್ತು ಬಿದ್ದ ಗೋಪಾಲರಾಯ!

ಅತಿ ಚಾಲಾಕಿತನ ನಮಗೆ ಹೇಗೆ ಮುಳುವಾಗಬಹುದು ಎಂಬ ಒಂದು ಸಂದೇಶ ವ್ಯವಹಾರಗಳ ಪರಿಚಯ ದಟ್ಟವಾಗಿ ಆಗುತ್ತದೆ ಈ ನಾಟಕದಿಂದ. ಉದಾಹರಣೆಗೆ ಒಂದು ಸಂಭಾಷಣೆಯ ಸೊಗಸನ್ನು ಗಮನಿಸಿ :

'ದೇಶದ ಸೀರೆ, ಜರತಾರೀ ಅಂಚು, ಸಮಸೆರಗು,

ಹದಿನೆಂಟು ಮೊಳ, ತೆಳ್ಳಗೆ ವಾಯಿಲ್‌ನ ಹಾಗೆ ಇದೆ.

ಚೌಕಾಶಿ ಮಾಡಿ, ೨೫.೦೦ ರೂ.ಗೆ ಕೊಂಡು ತಂದೆ !

ಇಪ್ಪತ್ತೈದು ರೂಪಾಯಿಗೆ ಜರತಾರೀ ಅಂಚಿನ ಸೀರೆ ಸಿಗುತ್ತಿದ್ದ ಕಾಲ ಅದು !

## ಅಪ್–ಟು–ಡೇಟ್–ಅಮ್ಮಯ್ಯ

ಭೀಮರಾಯರು ತಮ್ಮ ಮಗಳು ರಮಾದೇವಿಗೆ ವರ ಗೊತ್ತು ಮಾಡಿರುತ್ತಾರೆ. ವಧು ನೋಡಲು ವರ ಮಾಧವರಾವ್ ಬಂದಾಗ, ತುರ್ತು ಕಾರ್ಯನಿಮಿತ್ತ ಭೀಮರಾಯರು ಹೊರಗೆ ಹೋಗಿರುತ್ತಾರೆ. ವರನ ಗ್ರಾಮೀಣ ಶೈಲಿಯ ಉಡುಗೆ, ಆಚಾರ, ವಿಚಾರವನ್ನು ಕಂಡು ಅವನನ್ನು ಹೀಯಾಳಿಸಿ ರಮಾ ವರನನ್ನು ತಿರಸ್ಕರಿಸುತ್ತಾಳೆ. ಭೀಮರಾಯರು ಮನೆಗೆ ಬಂದಾಗ ವಿಷಯ ತಿಳಿದು ಬಹಳ ನೊಂದುಕೊಳ್ಳುತ್ತಾರೆ.

ಇನ್ನೊಂದು ದಿನ ಮಂಜುನಾಥ್ ಎಂಬ ವರ ಆಧುನಿಕ ಶೈಲಿಯಲ್ಲಿ ಡ್ರೆಸ್ ಹಾಕಿಕೊಂಡು, ಅರ್ಧಂಬರ್ಧ ಇಂಗ್ಲಿಷಿನಲ್ಲಿ ಮಾತನಾಡುತ್ತಾ ಮೋಡಿ ಮಾಡಿ ರಮಾಳನ್ನು ವರಿಸಲು ಸಿದ್ಧನಾಗುತ್ತಾನೆ. ರಮಾಳೂ ಸಮ್ಮತಿ ಸೂಚಿಸುತ್ತಾಳೆ. ಅಷ್ಟರಲ್ಲಿ ಮೊದಲಿನ ವರ ಮಾಧವರಾವ್ ಪ್ರವೇಶಿಸಿ ಮಂಜುನಾಥ್ ತಮ್ಮ ಮನೆ ಅಡಿಗೆಯವನು ಎನ್ನುವ ನಿಜ ಸಂಗತಿಯನ್ನು ತಿಳಿಸುತ್ತಾನೆ. ರಮಾಳಿಗೆ ಷಾಕ್ ಆಗಿ, ಮುಖ ಮುಚ್ಚಿಕೊಂಡು ಅಳುತ್ತಾಳೆ. ಅಪ್–ಟು–ಡೇಟ್ ಅಮ್ಮಯ್ಯಗಳ ಪಾಡು ಇದೇ ಅಂತ ಮಾಧವರಾವ್ ಹೇಳ್ತಾನೆ.

ಆಧುನಿಕತೆಯ ಥಳುಕಿಗೆ ಮಾರು ಹೋಗುತ್ತಿದ್ದ ಅಂದಿನ ಯುವ ಸಮುದಾಯವನ್ನು ಎಚ್ಚರಿಸುವ ಕಾರ್ಯವನ್ನು ಈ ನಾಟಕ ಸಮರ್ಥವಾಗಿ ಮಾಡಿದೆ.

"ನನಗೆ ಕಾದಂಬರಿ ನಾಯಕನ ತರಹದ ವರ ಬೇಕು. ನೀವು ಹಳ್ಳಿ ಗಮಾರನ ತರಹ ಇದೀರಾ" ಎಂಬ ಒಂದು ಸಂಭಾಷಣೆ ಅಂದಿನ ದಿನಗಳ ಸಾಮಾಜಿಕ ಜೀವನವನ್ನು ಪರಿಚಯಿಸುತ್ತದೆ. ಸಿನಿಮಾ, ಟಿ.ವಿ. ಇಲ್ಲದ ಆ ಕಾಲದಲ್ಲಿ ಕಾದಂಬರಿಯ ಓದು ಮನೆ ಮಾತಾಗಿತ್ತು.

## ಅಮ್ಮ

೮ ವರ್ಷದ ಹುಡುಗ ಗೋಪು ಹಾಗೂ ೧೦ ವರ್ಷದ ಹುಡುಗಿ, ಆತನ ಅಕ್ಕ ಪದ್ದಕ್ಕ. ಇವರ ತಾಯಿ ನಿಧನ ಹೊಂದಿ ಒಂದು ವರ್ಷವಾಗಿರುತ್ತದೆ. ಮೊದಲನೆಯ ವರ್ಷದ ತಿಥಿ ಕಾರ್ಯ ನಡೆಯುತ್ತಿರುತ್ತದೆ. ಆ ದಿನ ತಾಯಿ ಬರುತ್ತಾರೆ ಎಂದು ತಂದೆ ಹೇಳಿದ ಮಾತನ್ನು ನಂಬಿ ಗೋಪು ತನ್ನ ಅಕ್ಕನಿಗೂ ತಿಳಿಸುತ್ತಾನೆ. ಇಬ್ಬರೂ ಅದನ್ನು ನಂಬಿಕೊಂಡು ಕೊಠಡಿಯನ್ನು ಸ್ವಚ್ಛಗೊಳಿಸಿ ಹೊಸ ಬಟ್ಟೆಯನ್ನು ತೊಟ್ಟುಕೊಂಡು ಇಡೀ ರಾತ್ರಿ ತಾಯಿಗಾಗಿ ಕಾಯಬೇಕೆಂದು ನಿರ್ಧರಿಸಿಕೊಳ್ಳುತ್ತಾರೆ. ಇವರಿಗೆ ಅಪ್ಪ ಕೊಟ್ಟ ಹಾಲನ್ನು ಅಮ್ಮನಿಗಾಗಿ ಇರಿಸಿಕೊಂಡು ಕಾಯುತ್ತಾರೆ. ನಿದ್ದೆಯ ಸೆಳೆತ ತಾಳಲಾರದೇ ಇಬ್ಬರೂ ನಿದ್ದೆಗೆ ಜಾರುತ್ತಾರೆ. ಗೋಪುವಿನ ಕನಸಿನಲ್ಲಿ ಅಮ್ಮ ಬರುತ್ತಾಳೆ. ಅಮ್ಮನಿಗೆ



ಹಾಲನ್ನು ಕೊಟ್ಟು "ಅಪ್ಪನಿಗೆ ಹೇಳಮ್ಮ ನಮ್ಮನ್ನು ಹೊಡೀಬೇಡ" ಅಂತ ಕನವರಿಸುತ್ತಿರುತ್ತಾನೆ. ಅಪ್ಪ ಇವನ ಕನವರಿಕೆಯನ್ನು ಕೇಳಿಸಿಕೊಳ್ಳುತ್ತಾನೆ. ಕನಸಿಯನಲ್ಲಿಯೇ 'ಅಮ್ಮಾ' ಅಂತ ಕಿರುಚಿಕೊಳ್ಳುತ್ತಾನೆ ಗೋಪು. ಪದ್ದಕ್ಕ ಎದ್ದು ಅಮ್ಮ ಎಲ್ಲಿ ಅಂತ ಕೇಳುತ್ತಾಳೆ. ಇಲ್ಲೇ ಇದ್ದಳು. ನಾನು ಕೊಟ್ಟ ಹಾಲು ಕುಡಿದಳು ಎಂದು ಹೇಳುತ್ತಾನೆ. ಹಾಲಿನ ಲೋಟ ಖಾಲಿ ಆಗಿರುವುದನ್ನು ಆಶ್ಚರ್ಯದಿಂದ ನೋಡುತ್ತಾರೆ. ರಾತ್ರಿ ಬೆಕ್ಕು ಬಂದು  ಕುಡಿದಿರುವುದು ಇವರಿಗೆ ಗೊತ್ತಾಗಿರುವುದಿಲ್ಲ ! ಮಗನು ಕಿರುಚಿದ ಶಬ್ದ ಕೇಳಿ ಪಕ್ಕದ ಕೊಠಡಿಯಿಂದ ಅಪ್ಪ ಎದ್ದು ಬಂದು ಹೇಳುತ್ತಾನೆ : 'ಅಮ್ಮ ಬಂದಿದ್ದಳು, ಹೊಡಿಬೇಡಿ ಅಂತ ಹೇಳಿ ಹೋದಳು, ಇನ್ನು ಮೇಲೆ ನಿಮ್ಮನ್ನು ಹೊಡಿಯೋದಿಲ್ಲ' ಅಂತ ಮಕ್ಕಳನ್ನು ತಬ್ಬಿಕೊಳ್ಳುತ್ತಾನೆ.

ಎರಡೇ ಪುಟ್ಟ ವಯಸ್ಸಿನ ಪಾತ್ರಗಳಲ್ಲಿ ನಾಟಕದ ಬಹುಭಾಗ ಸಾಗುತ್ತದೆ. ಮುಗ್ಧ ಮನಸ್ಸಿನ ಮಕ್ಕಳ ನಡವಳಿಕೆ ಅಮ್ಮನ ಬಗೆಗೆ ಅವು ತೋರುವ ಅನನ್ಯ ಪ್ರೇಮ ಪ್ರೇಕ್ಷಕರ ಕರುಳು ಹಿಂಡುತ್ತವೆ. ನಾಟಕದ ತುಂಬ ಕರುಣರಸ ಓತಪ್ರೋತವಾಗಿ ಹರಿದಿದೆ. ಹಿರಿಯರು ಹೇಳಿದ ಸಂಗತಿಗಳನ್ನು ಮಕ್ಕಳು ನಂಬುವುದು, ಮಕ್ಕಳ ನಂಬಿಕೆಗೆ ಹೊಂದಿಕೆಯಾಗುವಂತೆ ವಾಸ್ತವತೆಯ ಕ್ರಿಯೆಗಳನ್ನು ಜೋಡಿಸಿರುವ ನಾಟಕಕಾರರ ತಂತ್ರಗಾರಿಕೆ ತಲೆದೂಗುವಂತೆ ಮಾಡುತ್ತದೆ. ಭಾವನಾ ಪ್ರಧಾನವಾದ ನಾಟಕಗಳ ರಚನೆಯಲ್ಲೂ ಶ್ರೀ ರಾಜಾರಾಯರು ಸಿದ್ಧಹಸ್ತರೆಂಬುದನ್ನು ಈ ನಾಟಕವು ಸಾಕ್ಷಿ ನುಡಿಯುತ್ತದೆ.

## ಆಂಟಿಗೊನೆ

ಸಾಫೊಕ್ಲಿಸ್ ಮಹಾಕವಿಯ ಆಂಟಿಗೊನೆ ಎಂಬ ನಾಟಕದ ಕನ್ನಡ ರೂಪಾಂತರ. ಹಳೆಗನ್ನಡದ ಮಿಶ್ರಿತ ಪದ್ಯ ಶೈಲಿಯಲ್ಲಿ ಈ ನಾಟಕ ರಚಿತವಾಗಿದೆ.

**ಕಥಾ ಸಾರಾಂಶ :** ತಂದೆಯ ಮರಣಾನಂತರ ಅವನ ಇಬ್ಬರು ಹೆಣ್ಣು ಮಕ್ಕಳಾದ ಆಂಟಿಗೊನೆ ಹಾಗೂ ಇಸ್ಮೆನೆಯರು ತವರೂರಾದ 'ಥೀಬ್ಸ್' ಪಟ್ಟಣವನ್ನು ಸೇರಿದರು. ಕೆಲ ಕಾಲಾನಂತರ ಅವರ ಅಣ್ಣನು ಪರರಾಜರ ಸಹಾಯ ಹೊಂದಿ, ತನ್ನ ರಾಜ್ಯವನ್ನಾಕ್ರಮಿಸಿದ್ದ ತಮ್ಮನ ಮೇಲೆ ಯುದ್ಧ ಮಾಡಲು ಒಬ್ಬರೊಡನೊಬ್ಬರು ಹೋರಾಡಿ ಇಬ್ಬರೂ ಸತ್ತುಹೋದರು. ಅವರ ಸೋದರಮಾನವಾದ ಕ್ರಿಯಾನನು ರಾಜನಾಗಿ 'ಅಣ್ಣನಾದವನು ಮಾತೃ ಭೂಮಿಯ ಮೇಲೆ ದಂಡೆತ್ತಿ ಬಂದುದರಿಂದ ಅವನಿಗೆ ಉತ್ತರ ಕ್ರಿಯೆಯು ಸಲ್ಲಲಾರದೆಂದು' ಆಜ್ಞೆ ಮಾಡಿದನು. ಅವರ ತಂಗಿಯಾದ ಆಂಟಿಗೊನೆಯು ರಾಜಾಜ್ಞೆಯನ್ನು ಮೀರಿ ಶವಸಂಸ್ಕಾರ ಮಾಡಿದಳು. ಕ್ರಿಯಾನನು ಅವಳಿಗೆ ಮರಣದಂಡನೆಯನ್ನು ವಿಧಿಸುತ್ತಾನೆ. ಅವಳನ್ನು ಪ್ರೀತಿಸುತ್ತಿದ್ದ ಕ್ರಿಯಾನನ ಮಗ ಏಮನ್‌ನೂ ಅವಳೊಡನೆ ಪ್ರಾಣ ಬಿಡುತ್ತಾನೆ. ಇದ್ದೊಬ್ಬ ಮಗನ ಮರಣವನ್ನು ಸಹಿಸಲಾರದೆ, ಕ್ರಿಯಾನನ ಹೆಂಡತಿಯೂ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಕ್ರಿಯಾನನ ದುಃಖ ಪರಿತಾಪಗಳಲ್ಲಿ ಕಥೆಯು ಮುಗಿಯುತ್ತದೆ.

'ತಾಯ್ನಾಡಿನ ನೆಲದಲ್ಲಿ ನಿಂತು ತಮ್ಮನು ಕಾದಾಡಿ ಮಡಿದಿದ್ದರಿಂದ ಅವನ ಶವಕ್ಕೆ ಶಾಸ್ತ್ರೋಕ್ತ ಸಂಸ್ಕಾರ ಮಾಡಬೇಕು. ಬೇರೆ ರಾಜರ ಸಹಾಯ ಪಡೆದು ತಾಯ್ನಾಡಿನ ಮೇಲೆ ದಂಡೆತ್ತಿ ಬಂದುದರಿಂದ ಅಣ್ಣನ ಶವಕ್ಕೆ ಸಂಸ್ಕಾರ ಸಲ್ಲದು, ಅವನ ದೇಹವನ್ನು ನಾಯಿ, ನರಿ, ಕಾಗೆ, ಹದ್ದುಗಳು ತಿನ್ನಬೇಕು' ಎಂಬುದು ಆಗಿನ ಅಲ್ಲಿನ ನಿಯಮ.

ಹಳೆಗನ್ನಡವನ್ನು ಶಾಸ್ತ್ರೋಕ್ತ ಅಧ್ಯಯನ ಮಾಡಿರದಿದ್ದರೂ ಹಳೆಗನ್ನಡದಲ್ಲಿ ಅದರಲ್ಲೂ ಕಾವ್ಯಶೈಲಿಯಲ್ಲಿ ನಾಟಕ ರಚನೆ ಮಾಡಿರುವುದು ಕೈವಾರ ರಾಜಾರಾಯರ ವಿಶೇಷ ಪ್ರತಿಭೆಗೆ ಒಂದು ನಿದರ್ಶನ ಈ ನಾಟಕ.

ಇಂಗ್ಲಿಷ್ ನಾಟಕವನ್ನು ಕನ್ನಡಕ್ಕೆ ಅನುವಾದ ಮಾಡಿದ್ದರೂ, ಕನ್ನಡ ಸಂಸ್ಕೃತಿಗೆ, ಕನ್ನಡ ಜಾಯಮಾನಕ್ಕೆ ಸನ್ನಿವೇಶಗಳನ್ನು, ಸಂಭಾಷಣೆಗಳನ್ನು ಒಗ್ಗಿಸಿಕೊಂಡು ರಚಿಸಿರುವುದರಿಂದ ಅನುವಾದವೆಂಬ ಭಾವನೆಯೇ ಬರುವುದಿಲ್ಲ. ಒಂದೆರಡು ಉದಾಹರಣೆಗಳನ್ನು ನೋಡಬಹುದು.

'ಸುರಕಾರ್ಯದಿ ತೊಡಗೆ ಅಸುರ ಫಲವೆನಗಾಯ್ತು'

'ದುಃಖ ಬೆರೆಯದ ಸುಖವು ಸಿಗಲಾರದೀ ಜನಕೆ'

'ನರಕದಲಿ ವರಪೂಜೆ ಮಾಡೆ ಕಾದಿಹರೆಂದು ಸಹಗಮನ ಮಾಡಿಹನು ಸತ್ತ ಕನ್ಯೆಯ ಜೊತೆಗೆ'

'ಕಾಯದಲಿ ವಾಚದಲಿ ಮನಸಿನಲಿ ನಮ್ರನಾಗಿರಬೇಕು'

ಪಾಶ್ಚಾತ್ಯ ನಾಟಕವೊಂದನ್ನು ವಿಭಿನ್ನ ಶೈಲಿಯಲ್ಲಿ ಕನ್ನಡಕ್ಕೆ ನೀಡಿದ ಶ್ರೀ ರಾಜಾರಾಯರು ಅಭಿನಂದನಾರ್ಹರು.

## ತಪ್ಪಾರದು

ವೈಶಿಷ್ಟ್ಯಪೂರ್ಣವಾದ ಪತ್ತೇದಾರಿ ಸ್ವರೂಪದ ನಾಟಕ–'ತಪ್ಯಾರದು'. ಆತ್ಮಹತ್ಯೆ ಮಾಡಿಕೊಂಡ ಕಾತ್ಯಾಯಿನಿ ಅಲಿಯಾಸ್ ಸೂಸಿ ಎಂಬ ಕಾರ್ಮಿಕ ಯುವತಿಯ ಸಾವಿನ ಸುತ್ತ ಹೆಣೆದ ಸಂಕೀರ್ಣ ಘಟನಾವಳಿಗಳು ಈ ನಾಟಕದ ವಸ್ತು. ನಾಟಕದ ತುಂಬ ಆವರಿಸಿಕೊಂಡಿರುವ ಈ ಪಾತ್ರ ಒಮ್ಮೆಯೂ ರಂಗದ ಮೇಲೆ ಕಾಣಿಸಿಕೊಳ್ಳುವುದೇ ಇಲ್ಲ !

ತಮ್ಮ ಫ್ಯಾಕ್ಟರಿಯ ಕೆಲಸದಿಂದ ಅವಳನ್ನು ತೆಗೆದುಹಾಕಿದ ಶ್ರೀಧರರಾಯ, ಅಂಗಡಿಯ ಕೆಲಸವನ್ನೂ ಬಿಡಿಸಿ ಕಳುಹಿಸಿದ ಶ್ರೀಧರರಾಯರ ಮಗಳು ಪ್ರಮೀಳಾ, ಸೂಸಿಯ ಮೋಹಕ ರೂಪಕ್ಕೆ ಮರುಳಾಗಿ ಅವಳೊಡನೆ ರತಿಸುಖ ಅನುಭವಿಸಿ ಬಿಟ್ಟ ಶ್ರೀಧರರಾಯರ ಭಾವೀ ಅಳಿಯ ಆನಂದ್, ಅಬಲಾಶ್ರಮಕ್ಕೆ ಪ್ರವೇಶವನ್ನೇ ನೀಡದೆ ದೂರ ಕಳಿಸಿದ ಅಬಲಾಶ್ರಮದ ಅಧ್ಯಕ್ಷೆ ಶ್ರೀಧರರಾಯರ ಹೆಂಡತಿ ಶ್ರೀಮತಿ, ಒಂಟಿಯಾಗಿ



ಸಿಕ್ಕ ಸೂಸಿಯನ್ನು ಬಲಾತ್ಕರಿಸಿ ಅವಳು ಗರ್ಭವತಿಯಾಗಲು ಕಾರಣನಾದ ಶ್ರೀಧರರಾಯರ ಮಗ ಪ್ರಮೋದ ಹೀಗೆ ಒಂದೇ ಕುಟುಂಬಕ್ಕೆ ಸೇರಿದ ಎಲ್ಲರೂ ಆಕೆಯ ಸಾವಿಗೆ ಕಾರಣರಾಗಿರುತ್ತಾರೆ."ತಪ್ಪಾರದು" ಎಂಬ ಅರ್ಥಪೂರ್ಣ ಹೆಸರನ್ನು ನಾಟಕಕ್ಕೆ ಇರಿಸಿದ್ದಾರೆ.

ಒಂದೇ ಕುಟುಂಬದ ಸದಸ್ಯರು, ಪರಸ್ಪರರಿಗೆ ತಿಳಿಯದಂತೆ ಮಾಡಿದ ಕಾರ್ಯಗಳು ಒಂದೇ ಮಹಿಳೆಯ ಸಾವಿಗೆ ಕಾರಣವಾಗಿರುವ ಘಟನೆಗಳನ್ನು ಪೋಣಿಸಿ ಹೆಣೆದಿರುವ, ನಾಟಕಕಾರರ ಕಥನ ಕೌಶಲಕ್ಕೆ ಬೆರಗಾಗದಿರಲು ಸಾಧ್ಯವಿಲ್ಲ.

ಪೋಲಿಸ್ ಅಧಿಕಾರಿ ಸತ್ಯೇಂದ್ರ, ಒಬ್ಬೊಬ್ಬರನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ವಿಚಾರಿಸುವ ಪರಿಯಂತೂ ಅಚ್ಚರಿ ಮೂಡಿಸುತ್ತದೆ. ಪಳಗಿದ ಪೋಲಿಸ್ ಅಧಿಕಾರಿಯೊಬ್ಬನ ಗತ್ತು, ಆತ ಹಾಕುವ ಕಾಯ್ದೆಯ ಪಟ್ಟುಗಳು, ಪ್ರಶ್ನಿಸುವ ವೈಖರಿ, ಕಾನೂನನ್ನು ಅರೆದು ಕುಡಿದವರಂತೆ ಆಡುವ ಅವನ ಮಾತುಗಳು ಪಕ್ಕಾ ಪತ್ತೇದಾರಿ ಸಿನೇಮಾವನ್ನು ನೆನಪಿಗೆ ತರುತ್ತದೆ.

ತನಿಖೆಯ ಒಳಸುಗಳಿಗಳನ್ನು, ಕಾನೂನಿನ ಮಟ್ಟುಗಳನ್ನು ರಾಜಾರಾಯರು ಯಾವಾಗ ಅರಿತುಕೊಂಡರು ? ಇಷ್ಟು ಸೊಗಸಾಗಿ ಅವುಗಳನ್ನು ನಾಟಕದಲ್ಲಿ ತರಲು ಹೇಗೆ ಅವರಿಗೆ ಸಾಧ್ಯವಾಯಿತು ಎಂಬುದು ಬಿಡಿಸಲಾರದ ಒಗಟಾಗಿದೆ.

## ಅಪವಾದ

ಯುದ್ಧದಲ್ಲಿ ಕುಂಭಕರ್ಣಾದಿಗಳೆಲ್ಲರನ್ನೂ ಕಳೆದುಕೊಂಡು ಚಿಂತಾಕ್ರಾಂತನಾಗಿ ಕುಳಿತ ರಾವಣನೊಡನೆ ಮಡದಿ ಮಂಡೋದರಿ ಸಂಭಾಷಿಸುವ ಸನ್ನಿವೇಶವೇ ನಾಟಕದ ರೂಪ ತಾಳಿದೆ.

ಹಳೆಗನ್ನಡ ನಡುಗನ್ನಡ ಮಿಶ್ರಿತ ಕಾವ್ಯ ಶೈಲಿಯಲ್ಲಿ ಸಂಭಾಷಣೆ ಸಾಗುತ್ತದೆ. ಪೌರಾಣಿಕ ಪಾತ್ರಗಳಿಗೆ ಈ ತೆರನ ಭಾಷೆ ಸರಿಹೊಂದುತ್ತದೆ. ಭಾಷೆ, ಪದಗಳ ಬಳಕೆ– ರಾವಣ, ಮಂಡೋದರಿಯರ ಪಾತ್ರಗಳ ಘನತೆಗೆ ತಕ್ಕಂತೆ ಬಹು ಉನ್ನತ ಮಟ್ಟದಲ್ಲಿದೆ.

ರಾಮಾಯಣದಲ್ಲಿ ಯಾರೂ ಬಹುಶಃ ಈವರೆಗೆ ಕೇಳಿರದಂತಹ ಅಪರೂಪವಾದ ಸಂಗತಿಗಳನ್ನು ಈ ನಾಟಕದಲ್ಲಿ ಉಲ್ಲೇಖಿಸಿದ್ದಾರೆ. ಮಂಡೋದರಿಯ ಪ್ರಶ್ನೆಯೊಡನೆ ನಾಟಕ ಪ್ರಾರಂಭವಾಗುತ್ತದೆ. ಅವಳು ಕೇಳುತ್ತಾಳೆ : "ಹೇಳಿರಿ ಸೀತೆಯ ಅಪಹರಣದ ಕಾರಣವ / ದೇವ ಮಾನವರಲಿ ಯಕ್ಷಗಂಧರ್ವರಲಿ / ಕಿಂಪುರಷ ಗಣಗಳಲಿ ಅತ್ಯಂತ ರೂಪವತಿಯರು / ಎಲ್ಲ ನಿನ್ನ ಅಂತಃಪುರವ ಸೇರಿರಲು / ಹುಲು ಮನುಜಳಾದ ಆ ಸೀತೆಯನು / ಕಿರಿಯವಳಹ ಪರವನಿತೆ / ಮಗಳ ಸಮನಾದವಳ ಅಪಹರಿಸಿ ತಂದುದೇಕೆ ?"

ಇದಕ್ಕೆ ರಾವಣನ ಉತ್ತರ ಸ್ವಾರಸ್ಯವಾಗಿದೆ.

"ನೀನವಳ ನೋಡಿಲ್ಲ, ಕೇಳು ಹೇಳುವೆನೀಗ / ಸೀತೆಯನು ತಂದುದಕೆ ನಿಜವಾದ ಕಾರಣವ / ನಿನ್ನಂತೆ ಆ ಸೀತೆ ಅಸದೃಶ ರೂಪವತಿ / ಪರ್ಣಶಾಲೆಯೊಳಂದು ನೋಡಿದೆನು ಸೀತೆಯನು / ಭ್ರಮಿಸಿದೆನು ನೀನೆಯೇ ಅವಳೆಂದು / ನಿನ್ನ ರೂಪವೇ ರೂಪ / ಕಣ್ ಮೂಗು ತುಟಿ ಮಾಟ ನಡೆ ನುಡಿಯು / ಮಂದಹಾಸದ ಹಾಸ / ಸಣ್ಣನಡು ನಿನ್ನಂತೆಯೇ ಎಲ್ಲ / ಊಹೆಗೂ ಮೀರಿದುದು ಆ ರೂಪ ಸಾದೃಶ್ಯ / ಮರುಳಾಯ್ತು ಈ ಮನಸು / ಯೋಚಿಸಿದೆ ಸೃಷ್ಟಿಯಲಿ ಎರಡೆರಡು ಮಂಡೋದರಿಯರು/ ವಾಸಿಸಲಿ ಈರ್ವರೂ ಒಂದೇ ಎಡೆ / ರಾವಣನ ರಾಣೀವಾಸದ ಮುಕುಟಮಣಿ ಮಂಡೋದರಿ / ಅವಳ ಸಾದೃಶ ರೂಪಳಾದ ಸೀತೆಯೂ ಇರಲಿ ಅವಳೊಡನೆ / ಬೇರೆ ಜಾಗದೊಳಲ್ಲ ಎಂದು ನಿರ್ಧರಿಸಿ ತಂದೆ ಆ ಸೀತೆಯನು !".

ಮೊದಮೊದಲಿಗೆ ಅತ್ಯಂತ ಬಾಲಿಷ ಎನಿಸಿಬಿಡುವ ಈ ಕಾರಣವು, ಮುಂದೆ ಹೋಗುತ್ತಿದ್ದಂತೆ ದೃಢವಾದ ನಂಬಬಹುದಾದ ಆಧಾರಗಳು ಸಿಕ್ಕು ಗಟ್ಟಿಗೊಳ್ಳತೊಡಗುತ್ತದೆ.

ಅಶೋಕವನದಲ್ಲಿದ್ದ ಸೀತೆಯನ್ನು ಒಲಿಸಿಕೊಳ್ಳಲು ರಾವಣ ಹೋಗುತ್ತಾನೆ. ಅವಳು ಒಲಿಯದಿದ್ದಾಗ ಸಂಹರಿಸಲು ಹೋಗುತ್ತಾನೆ. ಆಗ ಸೀತೆ ಹೇಳುವ : "ಎನ್ನನ್ನು ಮಗಳಂತೆಯೇ ತಿಳಿದುಕೊಳ್ಳಿ ತಂದೆ" ಎನ್ನುವ ಮಾತು ರಾವಣನ ಮೇಲೆ ಅಗಾಧವಾದ ಪರಿಣಾಮವನ್ನುಂಟು ಮಾಡುತ್ತದೆ. ಬೇರೆ ಎಷ್ಟೋ ಹೆಣ್ಣುಗಳು ಹೀಗೆ ಹೇಳಿದ್ದರೂ ಇಂತಹ ಪರಿಣಾಮ ಆಗಿರಲಿಲ್ಲ. ಚಿಂತಾಕ್ರಾಂತನಾಗಿರುವ ಅವನನ್ನು ಕಂಡ ಮಂಡೋದರಿ ಚಿಂತೆಗೆ ಕಾರಣವನ್ನು ಕೇಳಿದಾಗ ರಾವಣ ಹೇಳುತ್ತಾನೆ : "ಮಗಳೆಂಬ ಭಾವನೆ ಬಲಿಯುತಿಹುದು. ಅರಿಯೆ ಕಾರಣವ'. ಆಗ ಮಂಡೋದರಿ ನಿಜ ವೃತ್ತಾಂತವೊಂದನ್ನು ತಿಳಿಸುತ್ತಾಳೆ : 'ನಾಲ್ಕಾರು ವರ್ಷಗಳ ಕಾಲ ರಾವಣ ದಿಗ್ವಿಜಯ ಯಾತ್ರೆಗೆ ಹೊರಟಾಗ ಮಂಡೋದರಿ ಗರ್ಭವತಿ. ಎರಡು ವರ್ಷವಾದರೂ ಪ್ರಸವವಾಗುವುದಿಲ್ಲ. ಆತಂಕಗೊಂಡು ಆಪ್ತ ಸಖಿಯೊಡನೆ ಆಕೆ ತೀರ್ಥಯಾತ್ರೆ ಕೈಗೊಳ್ಳುತ್ತಾಳೆ. ಜನಕ ಮಹಾರಾಜನ ಉದ್ಯಾನದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದಾಗ ಮೂರು ನವಮಾಸಗಳು ತುಂಬಿ ಅಂದರೆ ೨೭ ತಿಂಗಳುಗಳು ತುಂಬಿ ಅಲ್ಲಿಯೇ ಪ್ರಸವ ವೇದನೆ ಶುರುವಾಗಿ ಹೆಣ್ಣು ಮಗುವೊಂದಕ್ಕೆ ಜನ್ಮ ಕೊಡುತ್ತಾಳೆ. ೨೭ ತಿಂಗಳಿಗೆ ಮಗುವಿಗೆ ಜನ್ಮ ಕೊಟ್ಟಿದ್ದೇನೆ ಎಂಬುದನ್ನು ರಾವಣ ನಂಬಲಾರ, ಅಕ್ರಮ ಗರ್ಭ ಎಂದು ಅಪವಾದ ಹೊರಿಸಬಹುದು ಎಂದು ಅಂಜಿ, ಮಗುವನ್ನು ಸುರಕ್ಷಿತವಾಗಿ ಭೂಮಿಯೊಳಗೆ ಮುಚ್ಚಿಟ್ಟು, ಲಂಕೆಗೆ ವಾಪಸ್ಸಾಗುತ್ತಾಳೆ. ದಿಗ್ವಿಜಯದಿಂದ ಬಂದ ರಾವಣನಿಗೆ, ಗರ್ಭಪಾತವಾಯಿತು ಎಂದು ತಿಳಿಸಿಬಿಡುತ್ತಾಳೆ".

ಸ್ತ್ರೀಯೊಬ್ಬಳು ಹಾಕಿದ ಶಾಪವನ್ನು ರಾವಣನು ನೆನಪಿಸಿಕೊಳ್ಳುತ್ತಾನೆ. ಪತಿವ್ರತಾ ಸ್ತ್ರೀಯೊಬ್ಬಳು ಕಠೋರ ವ್ರತ ಮಾಡುತ್ತಿದ್ದಾಗ ಅದನ್ನು ರಾವಣ ಭಂಗಪಡಿಸಿರುತ್ತಾನೆ. ಆ ಸ್ತ್ರೀ ರಾವಣನಿಗೆ ಶಾಪ ಕೊಡುತ್ತಾಳೆ: "ಮಗಳ ಕಾಮಿಸಿದಂದು ಸಮನಿಸಲಿ



ಸಾವು" ಎಂದು. ಸೀತೆಯ ಮಾತಿನಿಂದ ವಿಚಲಿತನಾದ ರಾವಣನಿಗೆ ಶಾಪ ನಿಜವಾಗುತ್ತಿದೆಯೇನೋ ಎಂಬ ಭಯ ಕಾಡತೊಡಗುತ್ತದೆ.

ಮಂಡೋದರಿಯ ಸಲಹೆಯಂತೆ ಸೀತೆಯನ್ನು ರಾಮನಿಗೆ ಒಪ್ಪಿಸಿಬಿಡೋಣ ಎಂದರೆ 'ಹೇಡಿ' ತಾನೆಂಬ ಅಪವಾದ ಬರಬಹುದೆಂದು ರಾವಣನು ಅಳುಕುತ್ತಾನೆ.

ತನ್ನ ಹಾಗೂ ರಾವಣನ ಮಗನಾಗಿ 'ರಾವಣಿ' ಆಗಬೇಕಾಗಿದ್ದ ಸೀತೆಯನ್ನು, ಜನಕ ರಾಜನ ಮಗಳಾಗಿ 'ಜಾನಕಿ'ಯನ್ನಾಗಿ ಮಾಡಿದೆನೆಂಬ ಅಪವಾದ ಮಂಡೋದರಿಗೆ.

ಹೀಗೆ ವಿಭಿನ್ನ ದೃಷ್ಟಿಕೋನದಿಂದ ರಾಮಾಯಣದ ಪ್ರಸಂಗವೊಂದನ್ನು ಅರ್ಥೈಸಿ ನವನವೀನ ಮಾದರಿಯಲ್ಲಿ ಪ್ರಸ್ತುತಪಡಿಸಿದ ನಾಟಕಕಾರರ ಜಾಣ್ಮೆ ಪ್ರಶಂಸನೀಯ.

ಸರಳವಾಗಿದ್ದರೂ ಗಾಂಭೀರ್ಯ ತುಂಬಿದ ಸಂಭಾಷಣೆಗಳು ಪ್ರೇಕ್ಷಕರನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿವೆ. ಒಂದೆರಡನ್ನು ಅವಲೋಕಿಸಬಹುದು:

ಮಂಡೋದರಿ : "ಮೈಮೆಗಾರಳು ಸೀತೆ / ಜಗದೇಕವಂದ್ಯನಹ ಸಾರ್ವಭೌಮನ ಮನವ / ಲೋಕೈಕ ವೀರನಹ ಆರ್ಯಪುತ್ರನ ಮನದ / ದೃಢತೆಯನು ಸಡಲಿಸುತ ಮಾತಿನಿಂ ಮೂದಲಿಸಿ / ಮನವ ಕದಡಿದ ಸೀತೆ ಮೈಮೆಗಾರಳೆ ಅಹುದು, ದಿಟವೆಂಬೆ".

ರಾವಣ : "ರಾವಣನ ಜಯಧ್ವಜವು ಜಾನಕಿಯ / ಒಲವಿನಲಗಿನ ಮೇಲೆ ನರ್ತಿಸುತ ನಡೆದಿಹುದು / ಜಾನಕಿಯು ರಾಮನಿಗೆ ಅರ್ಪಿಸಿಹ ದೃಢವಾದ / ಪ್ರೇಮವೇ ಅವನಿಗೀ ಸಮರವನು ಗೆಲುವಂಥ ಶಕ್ತಿಯನು ಕೊಟ್ಟಿಹುದು."

## ಅಚಾತುರ್ಯ

ಮೋಹನರಾಯರು ತಮ್ಮ ೪ ವರ್ಷದ ಹೆಣ್ಣು ಮಗಳನ್ನು ಸಂತೆಯಲ್ಲಿ ಕಳೆದುಕೊಂಡು ಬಿಡುತ್ತಾರೆ. ಅದೇ ಕೊರಗಿನಲ್ಲಿ ಹೆಂಡತಿ ಅಸುನೀಗುತ್ತಾಳೆ. ೧೮ ವರ್ಷಗಳ ನಂತರ ಮೋಹನರಾಯರು ಸೂಳೆಯ ಮನೆಯಿಂದ ವಿಮಲ ಎಂಬ ಸುಮಾರು ೨೨ ವರ್ಷ ವಯಸ್ಸಿನ ಹೆಣ್ಣನ್ನು ತಂದು ಇನ್ನೊಂದು ಮದುವೆ ಮಾಡಿಕೊಳ್ಳುತ್ತಾರೆ. ಈ ದಂಪತಿಗೆ ಜನಿಸಿದ ಗಂಡು ಮಗು ಈಗ ೪ ವರ್ಷದವನಾಗಿರುತ್ತಾನೆ. ಮೋಹನರಾಯರ, ವಿಧವೆ ತಂಗಿ ಸುಶೀಲೆ ಅಣ್ಣನ ಮಗುವಿನ ಹುಡುಕಾಟದಲ್ಲಿಯೇ ಸದಾ ಇರುತ್ತಾಳೆ. ಪೋಲಿಸರನ್ನು ವಿಚಾರಿಸುತ್ತಲೇ ಇರುತ್ತಾಳೆ. ಒಂದು ದಿನ ಪೋಲಿಸ್ ಇನ್ಸ್‌ಪೆಕ್ಟರ್ ಅವರು ಸುಶೀಲೆಯ ಮನೆಗೆ ಬಂದು "ಕಳೆದು ಹೋಗಿದ್ದ ಮೋಹನರಾಯರ ಮಗಳು ಪತ್ತೆಯಾಗಿದ್ದಾಳೆ. ಸೂಳೆಯ ಮನೆಯಲ್ಲಿ ಇದ್ದಳು" ಎಂಬ ಸಂಗತಿಯನ್ನು ತಿಳಿಸುತ್ತಾರೆ. ಸುಶೀಲೆ ಅಣ್ಣನ ಮನೆಗೆ ಬಂದು ವಿಷಯ ತಿಳಿಸುತ್ತಾಳೆ. ಮೋಹನರಾಯರು ಇನ್ಸ್‌ಪೆಕ್ಟರನ್ನು ಕರೆಸಿ ವಿಚಾರಿಸಿದಾಗ, ಈಗ ತಾನು ಮದುವೆ ಆಗಿರುವ ವಿಮಲೆಯೇ ಕಳೆದುಹೋಗಿರುವ ತನ್ನ ಮಗಳು ಎಂಬ ವಿಷಯ ಗೊತ್ತಾಗಿ ದಿಗ್ಭ್ರಾಂತರಾಗುತ್ತಾರೆ. ಅರಿಯದೇ ಆದ ಅಚಾತುರ್ಯಕ್ಕೆ

ಪರಿತಪಿಸುತ್ತಾರೆ. ಮರೆಯಲ್ಲಿಯೇ ನಿಂತು ಇವರ ಮಾತುಗಳನ್ನು ಕೇಳಿಸಿಕೊಂಡ ವಿಮಲೆ, ಹೆದರಿ ಹೌಹಾರಿ ಕೋಣೆಗೆ ಓಡಿಹೋಗಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಮೋಹನರಾಯ, ಕೋಣೆಗೆ ಬಂದು ನೋಡಿ ನೇತಾಡುತ್ತಿರುವ ಹೆಂಡತಿಯ ಹೆಣವನ್ನು ತಬ್ಬಿಕೊಂಡು ಚಾಕುವಿನಿಂದ ತಮ್ಮನ್ನೇ ತಾವು ಇರಿದುಕೊಂಡು ಸಾಯುತ್ತಾರೆ. ಶಾಲೆಯಿಂದ ಬಂದ ಮಗುವನ್ನು ಸುಶೀಲೆ ಸಂತೈಸುತ್ತಾಳೆ.

ಈ ದುರಂತ ನಾಟಕದ ಕಥಾತಂತ್ರ ಮೆಚ್ಚುವಂತಹುದಾಗಿದೆ. ಅಂತಿಮ ಕ್ಷಣಗಳ ಕರುಣಾಜನಕ ಸನ್ನಿವೇಶ ಮನಮಿಡಿಯುವಂತಿದೆ.

ನಾಟಕದ ಪ್ರಾರಂಭದಲ್ಲಿಯೇ ಹೆಂಡತಿಯನ್ನು 'ಮಗೂ' ಎಂದು ಕರೆಯುವ ಮೋಹನರಾಯರು ಅವರು ನೋವಿನಿಂದ ಕಿರುಚಿದಾಗ 'ಅಯ್ಯೋ ಏನಾಯ್ತಪ್ಪಾ' ಎನ್ನುವ ಹೆಂಡತಿ ವಿಮಲೆಯ ಸಂಭಾಷಣೆಗಳನ್ನು ಹೆಣೆದು ನಾಟಕದ ಪ್ರಮುಖ ಬಿಂದುವನ್ನು ಮೊದಲೇ ಸೂಚ್ಯವಾಗಿ ಧ್ವನಿಸಿದ ನಾಟಕಕಾರರ ತಂತ್ರಕ್ಕೆ ಭೇಷ್ ಎನ್ನದೇ ಇರಲಾರೆವು.

ಕೆಲವು ಪಾಶ್ಚಿಮಾತ್ಯ "ಟ್ರಾಜಿಡಿ ಡ್ರಾಮಾ"ಗಳನ್ನು (ದುರಂತ ನಾಟಕಗಳನ್ನು) ಇದು ನೆನಪಿಗೆ ತರುತ್ತದೆ.

## ಪ್ರೇಮ ಪರೀಕ್ಷೆ

ಶ್ರೀಮಂತ ಕೇಶವರಾಯರ ಒಬ್ಬಳೇ ಮಗಳು ಶಾಂತಾ ಕ್ರಿಶ್ಚಿಯನ್ ಸಹಪಾಠಿಯನ್ನು ಪ್ರೇಮಿಸಿ ಮದುವೆ ಆಗ ಬಯಸಿರುತ್ತಾಳೆ. ಅವಳ ಸೋದರಮಾವ ಬ್ಯಾರಿಸ್ಟರ್ ವಕೀಲ ನಾರಾಯಣರಾಯರು ಅವಳ ಪ್ರೇಮವನ್ನು ಪರೀಕ್ಷಿಸುವ ಪರಿಯೇ ಈ ನಾಟಕದ ವಸ್ತು. ಬಗೆಬಗೆಯಾಗಿ ಪ್ರಶ್ನಿಸಿ ಪ್ರಿಯಕರನ ಕುರಿತು ಅನೇಕ ಅನುಮಾನಗಳನ್ನು ವ್ಯಕ್ತಪಡಿಸುತ್ತಾರೆ. ಆ ಅನುಮಾನಗಳನ್ನು ಅವಳು ತನ್ನ ಪ್ರೇಮಿ ಆನಂದ್‌ನ ಬಳಿ ಪ್ರಸ್ತಾಪಿಸುತ್ತಾಳೆ. ಅವನು ಇವಳ ಆಸ್ತಿ ಮೇಲೆ ಕಣ್ಣಿಟ್ಟು ಅವಳನ್ನು ಮದುವೆ ಆಗಲು ಬಯಸಿದ್ದಾನೆಂಬ ನಿಜ ಸಂಗತಿ ಅರಿಯುತ್ತಾಳೆ. ಅವನ ಕೆನ್ನೆಗೆ ಬಾರಿಸಿ ಅವನನ್ನು ತಿರಸ್ಕರಿಸುತ್ತಾಳೆ.

ಪರಿಣತ ವಕೀಲರು ಪ್ರತಿವಾದಿಗಳಿಗೆ ನ್ಯಾಯಾಲಯದಲ್ಲಿ ಕೇಳುವ ಪ್ರಶ್ನೆಗಳನ್ನು ಜ್ಞಾಪಿಸುತ್ತವೆ ನಾರಾಯಣರಾಯರ ಮಾತುಗಳು. ನಾಟಕಕಾರರಾದ ಕೈವಾರ ರಾಜಾರಾಯರು ಕಾನೂನು ಪದವಿ ಪಡೆದವರಲ್ಲ. ವಕಾಲತ್ತು, ವ್ಯಾಜ್ಯಗಳನ್ನು ಎದುರಿಸಿದವರಲ್ಲ. ಆದಾಗ್ಯೂ ಈ ತೆರನ ಬರವಣಿಗೆಯನ್ನು ಹೇಗೆ ಸಿದ್ಧಿಸಿಕೊಂಡರೆಂಬುದು ಯಕ್ಷಪ್ರಶ್ನೆಯಾಗಿದೆ !

ನಾಟಕಪ್ರದರ್ಶಕರಿಗೆ, ಪಾತ್ರಗಳ ವೇಷಭೂಷಣಗಳನ್ನು ವಿವರಿಸಿದ ರೀತಿಯೇ ಮನಮೋಹಕವಾಗಿವೆ.



೧) ಶ್ರೀಮಂತರ ಪ್ರಾಯದ ಮಗಳು ಶಾಂತಾ : "ಮಧ್ಯೆ ಬೈತಲೆ, ಒಂದೊಂದು ಭಾಗಕ್ಕೆ ಒಂದೊಂದು ಹೆರಳು. ಎರಡರ ಕೊನೆಯನ್ನು ಮಾತ್ರ ಕಟ್ಟಿದ್ದಾಳೆ. ಹುಬ್ಬಿನ ನಡುವೆ ಸಣ್ಣ ಕುಂಕುಮ. ಉಬ್ಬಿದ ಮೇಲ್ತೋಳಿನ ಜಾಕೆಟ್ಟು. ಸ್ವಲ್ಪ ಹೆಚ್ಚಾಗಿಯೇ ಕಾಣುವ ಎದೆ, ಅದಕ್ಕೆ ಒಂದು ಫೌಂಟೆನ್ ಪೆನ್ನು, ಜಾರ್ಜೆಟ್ ಸೀರೆ ಉಟ್ಟಿದ್ದಾಳೆ. ಕೈಗಳಿಗೆ ಬಂಗಾರದ ಬಳೆಗಳು, ಕಿವಿಯಲ್ಲಿ ಸಣ್ಣ ಚಳತುಂಬು, ಎಡಗೈಗೆ ಕೈಗಡಿಯಾರ. ಒಂದು ಕೈಯಲ್ಲಿ ಫ್ಯಾನ್ಸಿ ಪರ್ಸು".

೨) ಶ್ರೀಮಂತ ಕೇಶವರಾಯರ ಡ್ರೆಸ್ : "ಮೂರು ಬೊಟ್ಟುಗಲ ಜರತಾರಿಯಂಚಿನ ಪಂಚೆಗಚ್ಚೆಯುಟ್ಟಿರುವ ಪಂಚೆ. ಹೊದ್ದಿರುವ ದೊಡ್ಡ ಜರತಾರಿಯಂಚಿನ ವಲ್ಲಿ. ವಜ್ರದ ಹತ್ತಕಡಕು. ವಜ್ರದ ಉಂಗುರ. ಕೈಯಲ್ಲಿ ಬೆಳ್ಳಿಹಿಡಿಯ ಕೋಲು. 'ಟ್ವೀಡಿ'ನ ತುಂಬುಮೈಯ ನಿಲುವಂಗಿ. ಜರತಾರಿಯಂಚಿನ ರುಮಾಲು".

೩) ಕೇಶವರಾಯರ ಹೆಂಡತಿ ಸಾವಿತ್ರಿಬಾಯಿಯವರ ಉಡುಪು : "ವಜ್ರದ ಬೆಂಡೋಲೆ. ವಜ್ರದ ಮೂಗುತಿ, ವಜ್ರದ ಉಂಗುರ, ವಜ್ರದ ಕುತ್ತಿಗೆಸರ, ಬಂಗಾರದ ಡಾಬು, ಕೈಗೆ ಕೆಂಪಿನ ಬಳೆ. ಕಚ್ಚೆ ಹಾಕಿ ಉಟ್ಟಿರುವ ಧರ್ಮಾವರದ ಸೀರೆ. ಜರತಾರಿ ಕುಪ್ಪುಸ. ಹಣೆಗೆ ಕಾಸಗಲದ ಕುಂಕುಮ."

ಹಿಂದಿನ ಕಾಲದ ಈ ಉಡುಪುಗಳು ಹಾಗೂ ಆ ಪದಗಳು ಈಗಿನ ಅನೇಕರಿಗೆ ಅಪರಿಚಿತವಾಗಿ ಕಂಡರೂ ಆಶ್ಚರ್ಯವಿಲ್ಲ !

## ಪತ್ರ ಪ್ರಮಾದ

"ನೀವು ಹೊರಟುಹೋಗಿ ಎಷ್ಟೋ ದಿನ ಆಯಿತು. ದುಡ್ಡೇ ಕಳಿಸಿಲ್ಲ. ಸಂಸಾರ ನಡೆಸೋದು ಕಷ್ಟವಾಗಿದೆ. ದುಡ್ಡು ಕಳಿಸಿರಿ. ನಿಮ್ಮವರು–ರಜಿಯಾಬಿ" ಎಂದು ಗಂಡನ ಹೆಸರು ವಿಳಾಸಕ್ಕೆ ಬಂದ ಯಾರದೋ ಪತ್ರವೊಂದು ಹೆಂಡತಿಯ ಕೈಗೆ ಸಿಕ್ಕು, ಗಂಡನ ನಡತೆಯ ಬಗ್ಗೆ ಸಂಶಯವುಂಟಾಗಿ ಗಂಡ ಹೆಂಡತಿಯ ಮಧ್ಯೆ ಜಗಳ ತಾರಕಕ್ಕೆ ಏರಿ ಕೊನೆಗೆ ಹೆಂಡತಿ ಮನೆ ಬಿಟ್ಟು ಹೊರಡಲು ಸಿದ್ಧಳಾಗುತ್ತಿದ್ದಾಗ, ಅವಳ ಅಣ್ಣ ಪ್ರವೇಶಿಸುತ್ತಾನೆ. ಅಣ್ಣನಿಗೆ ಪತ್ರದ ವಿಷಯ ತಿಳಿಸತೊಡಗುತ್ತಾಳೆ. ಅಷ್ಟರಲ್ಲಿ ನೆರೆಮನೆಯವರು ತುರ್ತು ಸಹಾಯವೊಂದಕ್ಕಾಗಿ ಇವಳ ಗಂಡನನ್ನು ಕರೆದುಕೊಂಡು ಹೋಗುತ್ತಾರೆ. ಅಣ್ಣನಿಗೆ ವಿಷಯ ತಿಳಿಸಿ ಆದಮೇಲೆ ಆತ ತನ್ನ ಡ್ರೈವರ್ ಕರೀಮ್‌ನನ್ನು ಕರೆದು ಕಾಗದ ತೋರಿಸುತ್ತಾನೆ. ಕರೀಮ್ : "ಇದು ನನ್ನ ಹೆಂಡತಿ ರಜಿಯಾಬಿ ಪತ್ರ. ನೀವು ತಂಗಿಯ ಮನೇಲಿ ೨ ದಿನ ಉಳಿತೀನಿ ಅಂತ ಹೇಳಿದ್ರಲ್ಲ. ಅದಕ್ಕೇ ಈ ಮನೆ ಅಡ್ರೆಸ್ ಕೊಟ್ಟಿದ್ದೆ. ಅವಳಿಗೆ ಬರೆಯೋಕೆ ಸರಿಯಾಗಿ ಬರೊಲ್ಲ. ಕ್ಷಮಿಸಿ" ಅಂತ ಹೇಳ್ತಾನೆ. ಚಾಲಾಕಿ ಹೆಂಡತಿ ಅಣ್ಣನಿಗೆ ಹೇಳ್ತಾಳೆ, "ಈ ನಿಜ ವಿಷಯವನ್ನು ಗಂಡನಿಗೆ ತಿಳಿಸೋದು ಬೇಡ. ಇಂತಹದ್ದೊಂದು ಲಗಾಮು ಇದ್ದರೆ ಮುಂದಕ್ಕೆ ಉಪಯೋಗಕ್ಕೆ ಬರುತ್ತೆ" ಅಂತ. ಗಂಡ ಬಂದ ಮೇಲೆ 'ಅಯ್ಯೋ ಬಿಟ್ಟುಬಿಡಿ ಈ ವಿಷಯ ಹಾಗೇ ಮರೆತುಬಿಡೋಣ' ಅಂತ ಸಾಗಹಾಕುತ್ತಾಳೆ.

ನಾಟಕ ರಚನೆಯಲ್ಲಿ ಬಳಸಿದ ಕೆಲವು ತಂತ್ರಗಾರಿಕೆ ನೈಜತೆಯನ್ನು ಹೆಚ್ಚಿಸಿವೆ :

ಅಣ್ಣ ಪ್ರವೇಶಿಸುತ್ತಿದ್ದಂತೆ ಗಂಡ ಹೆಂಡತಿ, ಜಗಳವನ್ನು ನಿಲ್ಲಿಸಿ, ಅಣ್ಣ ಮುಖ ತೊಳೆದುಕೊಳ್ಳಲು ಒಳಗೆ ಹೋದಾಗ ಮತ್ತೆ ಮುಂದುವರಿಸುವುದು. ಅಣ್ಣ ತಂಗಿಯ ಸಂಭಾಷಣೆ ಸಮಯದಲ್ಲಿ ಅದು ಗಂಡನಿಗೆ ತಿಳಿಯಬಾರದೆಂದು ಗಂಡ ನೆರೆಮನೆಗೆ ಹೋಗುವುದು ಇತ್ಯಾದಿಗಳು ನಾಟಕಕಾರರ ಪಳಗಿದ ಲೇಖನಿಯಿಂದ ಸಹಜವೆಂಬಂತೆ ಮೂಡಿಬಂದಿದೆ.

ರಾಜಾರಾಯರ ನಾಟಕಗಳಲ್ಲಿ ಸಾರ್ವಕಾಲಿಕವಾದ ಅನೇಕ ಹಿತನುಡಿಗಳು ಅಲ್ಲಲ್ಲಿ ನಮಗೆ ಕಾಣಸಿಗುತ್ತವೆ. ಈ ನಾಟಕದಲ್ಲಿ ಅಂತಹ ಒಂದು ಮಾತು ಹೀಗಿದೆ : "ನಿನ್ನ ಮೈಮೇಲಿನ ಸೆರಗು ತೆಗೆದರೆ ನಿನಗೇ ಅವಮಾನ, ನಾಳೆ ಎಲ್ಲರೂ ನಿನ್ನನ್ನು ತಾತ್ಸಾರ ಮಾಡ್ತಾರೆ." ಗಂಡನಿಗೆ ಬೇರೆ ಹೆಣ್ಣಿನ ಸಹವಾಸ ಇದೆ ಎಂದು ಅನುಮಾನಿಸಿದ ಹೆಂಡತಿ, ತನ್ನ ಅಣ್ಣನಿಗೆ ಈ ವಿಷಯ ತಿಳಿಸಲು ಮುಂದಾಗುತ್ತಾಳೆ. ಆಗ ಗಂಡ ಹೇಳುತ್ತಾನೆ : "ನಾನು ಅಂತಹವನಲ್ಲ. ಹಾಗೊಮ್ಮೆ ಅಂತಹವನೇ ಅಂತ ಇಟ್ಟುಕೊಂಡರೂ ಅದನ್ನು ಅಣ್ಣನಿಗೂ ಅಲ್ಲ, ಯಾರಿಗೂ ತಿಳಿಸಬಾರದು. ನಾವು ನಾವೇ ಬಗೆಹರಿಸಿಕೊಳ್ಳಬೇಕು.

## ಒಂದು ದುರಂತ

'The Accused' ಎಂಬ ಇವರದೇ ಇಂಗ್ಲಿಷ್ ನಾಟಕದ ಕನ್ನಡ ಅನುವಾದ. 'ಭವಾನ್ಸ್ ಜರ್ನಲ್' ಪತ್ರಿಕೆಯು ಏರ್ಪಡಿಸಿದ್ದ ಅಖಿಲ ಭಾರತ ಏಕಾಂಕ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ನಾಟಕವಿದು. ೧೯೬೧ನೆಯ ಇಸವಿ ಮಾರ್ಚ್–ಏಪ್ರಿಲ್ ಸಂಚಿಕೆಯಲ್ಲಿ ಪತ್ರಿಕೆಯು ಇದನ್ನು ಪ್ರಕಟಿಸಿತ್ತು. ಅಪಾರ ಜನಮೆಚ್ಚುಗೆಗೆ ಪಾತ್ರವಾಗಿತ್ತು.

ಕಥಾ ಸಾರಾಂಶ ಸಂಕ್ಷಿಪ್ತವಾಗಿ ಹೀಗಿದೆ : ವಿದ್ಯಾವಂತ ಯುವಕನೊಬ್ಬ, ಗೌರವಸ್ಥ ಮನೆತನದ ಮಹಿಳೆಯೊಬ್ಬಳ ಮಂಗಳಸೂತ್ರ ಅಪಹರಿಸುವಾಗ ಸಿಕ್ಕಿಬಿದ್ದು ಪೋಲಿಸರು ವ್ಯಾಜ್ಯ ಹೂಡಿ ಪ್ರಕರಣದ ವಿಚಾರಣೆಯನ್ನು ಕೋರ್ಟು ನಡೆಸುತ್ತದೆ. ಕೋರ್ಟಿನಲ್ಲಿ ನಡೆಯುವ ವಿದ್ಯಮಾನಗಳೇ ನಾಟಕದ ವಸ್ತು. ಸರ್ಕಾರಿ ವಕೀಲರು ಕೇಳುವ ಪ್ರಶ್ನೆಗಳಿಗೆ ಗೋಪಾಲ್ ಎಂಬ ವಿದ್ಯಾವಂತ ಸರಗಳ್ಳ ಕೊಡುವ ಉತ್ತರಗಳು ಸಮಕಾಲೀನ ಸಮಾಜದ ವೈರುಧ್ಯಗಳನ್ನು ವಾಸ್ತವದ ನೆಲಗಟ್ಟಲ್ಲಿ ಅನಾವರಣಗೊಳಿಸುತ್ತ ಹೋಗುತ್ತದೆ.

ಪ್ರತಿಭೆ ಇದ್ದರೂ ಮುಂದುವರಿದ ಜಾತಿಯವನಾಗಿರುವುದರಿಂದ ತನಗೆ ಸರ್ಕಾರಿ ಉದ್ಯೋಗ ಸಿಗದಿದ್ದುದು, ಖಾಸಗಿ ಹೈಸ್ಕೂಲಿನಲ್ಲಿ ಅರ್ಧ ಸಂಬಳ ನೀಡಿ ಪೂರ್ತಿ ಸಂಬಳಕ್ಕೆ ಸಹಿ ಪಡೆಯುತ್ತಿದ್ದುದರಿಂದ ಅದನ್ನು ಬಿಟ್ಟಿದ್ದು, ವ್ಯಾಪಾರೋದ್ಯಮದಲ್ಲಿ ಕೆಲಸಕ್ಕೆ ಸೇರಿದಾಗ, ಅದು ಕಾಳಸಂತೆಯ ವ್ಯಾಪಾರವಾಗಿ ಯಜಮಾನನ ಪರವಾಗಿ ಸಾವಿರಾರು ರೂಪಾಯಿಗಳ ಸುಳ್ಳು ಕಾಗದ ಪತ್ರಗಳಿಗೆ ರುಜು ಮಾಡಿ ಸರ್ಕಾರಕ್ಕೆ



ವಂಚಿಸುವ ಕಾರ್ಯ ಮಾಡಬೇಕಾದ್ದರಿಂದ ಅದನ್ನು ತ್ಯಜಿಸಿದ್ದು, ಪಿತ್ರಾರ್ಜಿತವಾಗಿ ಬಂದ ಸ್ವಲ್ಪ ಜಮೀನಿನಲ್ಲಿ ಕೃಷಿ ಮಾಡೋಣ ಎಂದು ಬಾವಿ ತೆಗೆಸಲು ಸರ್ಕಾರದ ಸಹಾಯಧನಕ್ಕೆ ಅರ್ಜಿ ಸಲ್ಲಿಸಿದಾಗ ಅರ್ಧದಷ್ಟು ಹಣ ಅಧಿಕಾರಿಗಳಲ್ಲೇ ಹಂಚಿಕೆಯಾಗಿ ಬಂದ ಉಳಿದರ್ಧದಲ್ಲಿ ಬಾವಿ ತೆಗೆಸಲಾಗದೆ ಪೂರ್ತಿ ಹಣಕ್ಕೆ ಸಾಲಗಾರನಾಗಿದ್ದು, ಸರ್ಕಾರ ಬಲವಂತವಾಗಿ ಜಾರಿಗೆ ತಂದ 'ಕೋ ಆಪರೇಟಿವ್ ಫಾರ್ಮಿಂಗ್' ಕಾಯ್ದೆಯಿಂದಾಗಿ ಜಮೀನಿನ ಹಕ್ಕು ಕಳೆದುಕೊಂಡಿದ್ದು, ಸಾಲದ ಬಡ್ಡಿ ಬೆಳೆಯುತ್ತ ಹೋಗಿದ್ದು, ಅಷ್ಟೊತ್ತಿಗೆ ತನ್ನ ಹೆಂಡತಿಗೆ ಮಗುವಾಗಿ ಜವಾಬ್ದಾರಿ ಜಾಸ್ತಿ ಆಗಿದ್ದು, ಗ್ರಾಮ ಸೇವಕನ ಚಿತಾವಣೆಯಿಂದಾಗಿ ಹೆಂಡತಿ ತನ್ನನ್ನು ಬಿಟ್ಟು ಹೋಗಿ ವಿಚ್ಛೇದನಕ್ಕೆ ಪತ್ರ ಕಳುಹಿಸಿದ್ದು, ಸಾಲದ ಭಾರ ಜಾಸ್ತಿ ಆಗಿ ಅದು ಭೂಮಿಯನ್ನೇ ನುಂಗಿದ್ದು ನಂತರ ದೊಡ್ಡ ಕಂಪೆನಿಯೊಂದರಲ್ಲಿ ಸಂಪರ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ ಕಂಪೆನಿಯ ಯಜಮಾನನಿಗೆ ಪ್ರತಿ ವಾರ ಹೆಂಡದ ಜೊತೆಗೆ ಮಂಚಕ್ಕೆ ಸುಂದರಿಯರನ್ನು ಒದಗಿಸಲಾಗದೇ ಕಳ್ಳತನದ ಆರೋಪದಿಂದ ಕೆಲಸದಿಂದ ವಜಾಗೊಂಡಿದ್ದು, ಅನಂತರ ಕೂಲಿ ಕೆಲಸ ಮಾಡಿ ಆರೋಗ್ಯ ಹದಗೆಟ್ಟು, ಭಿಕ್ಷಾಟನೆಗೆ ಇಳಿದದ್ದು ಹೀಗೆ ತಾನು ಅನುಭವಿಸಿದ ಒಂದೊಂದೇ ಘಟನೆಗಳನ್ನು ವಿವರಿಸುತ್ತ ಆದರ್ಶ ಪಾಲನೆ, ನೀತಿವಂತ ಬಾಳು ಈ ದೇಶದಲ್ಲಿ ಎಷ್ಟು ಕಷ್ಟ ಎಂಬುದನ್ನು ಪರೋಕ್ಷವಾಗಿ ನ್ಯಾಯಾಧೀಶರಿಗೆ ತಿಳಿಸುತ್ತಾನೆ.

ಆ ಶ್ರೀಮಂತ ಮಹಿಳೆಯ ಕತ್ತಿನಲ್ಲಿದ್ದ ಮಾಂಗಲ್ಯಕ್ಕೆ ಕೈಹಾಕಿ ಕಿತ್ತುಕೊಂಡಿದ್ದರ ಕಾರಣವನ್ನು ಅರುಹುತ್ತಾನೆ. 'ಅವಳು ಧರಿಸಿದ ಮಂಗಳಸೂತ್ರ ಅವಳದಲ್ಲ. ವಿಚ್ಛೇದನ ಮಾಡಿದ ಅವಳ ಗಂಡನಿಗೆ ಸೇರಿದ್ದು, ಅವಳಿಗೆ ಅದನ್ನು ಧರಿಸುವ ಹಕ್ಕಿಲ್ಲ. ಅವಳ ಗಂಡ ಯಾರೆಂಬುದು ನನಗೆ ಗೊತ್ತು' ಎಂದು ತಿಳಿಸುತ್ತಾನೆ.

ಆದರೂ ನ್ಯಾಯಾಧೀಶರು ತೀರ್ಪು ಪ್ರಕಟಿಸುತ್ತ–"ಈತ ತನ್ನ ವಿಚಿತ್ರ, ಅಸಂಬದ್ಧ, ಅಸ್ವಾಭಾವಿಕ ಆದರ್ಶ ತತ್ವಗಳ ಪಾಲನೆಯ ಭ್ರಮೆಯಲ್ಲಿ ಸೋತು ನಾಲ್ಕು ಜನರಂತೆ ಬಾಳಲಾರದೇ ದಿಕ್ಕೆಟ್ಟ ಸ್ಥಿತಿಗೆ ತಲುಪಿದ್ದಾನೆ. ಕಾನೂನಿನ ಪ್ರಕಾರ ಕೋರ್ಟು ಈತನಿಗೆ ಶಿಕ್ಷೆ ವಿಧಿಸಲೇಬೇಕಾಗುತ್ತದೆ ಎಂದು ಓದುತ್ತಿದ್ದಂತೆ ಕೋರ್ಟಿನಲ್ಲಿದ್ದ ಆ ಶ್ರೀಮಂತ ಮಹಿಳೆ ಗೋಪಾಲನ ಹೆಂಡತಿ ರಾಧಾ ಓಡಿ ಮುಂದೆ ಬಂದು ನ್ಯಾಯಾಧೀಶರ ಮುಂದೆ ನಿಂತು ಜೋರಾದ ಧ್ವನಿಯಲ್ಲಿ" ವಿಚಾರಣೆ ನಿಲ್ಲಿಸಿರಿ. ತೀರ್ಪು ಪ್ರಕಟಿಸಬೇಡಿ. ಇವರೇ ನನ್ನ ಗಂಡ. ಇವರಿಗೆ ಶಿಕ್ಷೆ ಕೊಡಬೇಡಿ. ಇವರು ವಿಚ್ಛೇದನಕ್ಕೆ ಒಪ್ಪಿಗೆ ಕೊಟ್ಟಿದ್ದರು. ಆದರೆ ನಾನು ವಿಚ್ಛೇದನ ಪಡೆದುಕೊಳ್ಳಲಿಲ್ಲ. ನಾನು ಬಯಸಿದ್ದ ಗ್ರಾಮಸೇವಕ ತನ್ನ ಆಸ್ತಿ ಕೇಳಿದ. ಅವನನ್ನು ನಾನು ಓಡಿಸಿಬಿಟ್ಟೆ. ಇವರು ಪ್ರೀತಿ ವಿಶ್ವಾಸ ಮಾತ್ರ ಸಾಕು ಎಂದಿದ್ದರು. ನನ್ನ ತಂದೆಯ ಬಹುದೊಡ್ಡ ಆಸ್ತಿಯಲ್ಲಿ ಏನನ್ನೂ ಕೇಳಲಿಲ್ಲ. ಇವರ ಆದರ್ಶಗಳನ್ನು ಅರ್ಥ ಮಾಡಿಕೊಳ್ಳದೆ ದುಡುಕಿದೆ. ಇವರೊಡನೆ ಬಾಳಲು ಅವಕಾಶ ಕೊಡಿ. ಇವರೇ ನನ್ನ ಗಂಡ" ಎಂದು ದೈನ್ಯದಿಂದ ಕಿರುಚಿ ಕಿರುಚಿ ಬೇಡುತ್ತಾಳೆ.

ಸರ್ಕಾರಿ ವಕೀಲರು ತಮ್ಮ ಅಹವಾಲನ್ನು ಮಂಡಿಸಿ ವಾಸ್ತವಾಂಶಕ್ಕಿಂತ ಅಪರಾಧಿಯ ಅಂತರ್ ಹೇತುವೇ (Motive) ಮುಖ್ಯ, ಕಾನೂನಿನ ಅನ್ವಯ ಅವನಿಗೆ ಶಿಕ್ಷೆ ಆಗಲೇಬೇಕು ಎಂದು ತಿಳಿಸುತ್ತಾರೆ.

ಗೋಪಾಲನೂ "ತನಗೆ ಜೈಲು ಶಿಕ್ಷೆಯೇ ಸೂಕ್ತ. ಯಾವ ಆಡಳಿತದಲ್ಲಿ ಲಂಚ, ಭ್ರಷ್ಟಾಚಾರ, ಜಾತೀಯತೆ, ಸ್ವಜನ ಪಕ್ಷಪಾತ ತಾಂಡವವಾಡುತ್ತಿದೆಯೋ ಅಂತಹ ಕಡೆ ನೀತಿವಂತನು ಗೌರವದ ಬಾಳನ್ನು ನಡೆಸಲಾರನು" ಎನ್ನುತ್ತಾನೆ.

ನ್ಯಾಯಾಧೀಶರು : 'ನಮ್ಮ ರಾಜ್ಯಾಂಗವು ಅಂತಹ ಅನೀತಿಗಳಿಂದ ಪ್ರಜೆಗಳನ್ನು ಕಾಪಾಡುತ್ತದೆ'.

ಗೋಪಾಲ್ : "ರಾಜ್ಯಾಂಗದ ಉದ್ದೇಶ ಶ್ಲಾಘನೀಯ. ಆದರೆ ಆಡಳಿತಗಾರರು ಪ್ರಜೆಗಳ ವೈಯಕ್ತಿಕ ವಿಷಯದಲ್ಲೂ ತಲೆಹಾಕುತ್ತಿದ್ದಾರೆ. ಕಾನೂನುಗಳ, ನೀತಿ ನಿಯಮಗಳ ಹೆಸರಿನಲ್ಲಿ ವೈಷಮ್ಯವನ್ನು ತಂದೊಡ್ಡುತ್ತಿದ್ದಾರೆ. ಸಮಾಜದ ಮಧುರ ಬಾಂಧವ್ಯಕ್ಕೆ ಹುಳಿ ಹಿಂಡುತ್ತಿದ್ದಾರೆ. ನೀತಿವಂತನಾದ ಸತ್ಪ್ರಜೆಯು ನಿಷ್ಠಾವಂತನಾಗಿ ಬಾಳುವುದು ದುಸ್ತರವಾಗಿದೆ. ನನ್ನ ಜೀವನ ಕೆಟ್ಟ ಆಡಳಿತಕ್ಕೆ ಬಲಿಯಾಗಿದೆ ಎಂದು ಪ್ರಲಾಪಿಸುತ್ತಾನೆ.

ನ್ಯಾಯಾಧೀಶರು ತೀರ್ಪು ಪ್ರಕಟಿಸಿ ಆರು ತಿಂಗಳ ಸಾದಾ ಸಜೆಯನ್ನು ವಿಧಿಸುತ್ತಾರೆ.

ರಾಧಾ ಗೋಪಾಲನ ಬಳಿ ಬಂದು ಕಾಲಿಗೆ ಬಿದ್ದು ಕ್ಷಮೆಯಾಚಿಸುತ್ತ ನನ್ನನ್ನು ಕೈಬಿಡಬೇಡಿ. ನಿಮ್ಮ ಶಿಕ್ಷೆ ಅವಧಿ ಮುಗಿಯುವವರೆಗೂ ಕಾಯುತ್ತೇನೆ. ನಿಮ್ಮಂತಹ ಆದರ್ಶವಾದಿಗಳಿಗೆ ಗೌರವಯುತ ಬಾಳುವೆಯನ್ನು ದೊರಕಿಸದಿರುವುದು ಪ್ರಪಂಚದ ಒಂದು ಮಹಾದುರಂತ ಕತೆ ಎಂದೆನ್ನುತ್ತಾಳೆ.

ಗೋಪಾಲ ಅವಳಿಂದ ದೂರ ಸರಿದು ನಿಂತು ಹೇಳುತ್ತಾನೆ : 'ಇಂದಿನ ಪ್ರಪಂಚವೇ ಒಂದು ದುರಂತ ಕತೆಯಾಗಿದೆ. ನಮ್ಮನ್ನು ಕಾಪಾಡಲು, ಸುಖವಾಗಿಟ್ಟಿರಲಿ ಎಂದು ಮಾಡಿದ ಕಾಯಿದೆ ಕಟ್ಟಳೆಗಳೇ ವಿಕಾರಗೊಂಡು ನಮ್ಮನ್ನೇ ಬಂಧನದಲ್ಲಿ ಸಿಕ್ಕಿಸಿ ನಮ್ಮ ಜೀವನವನ್ನೇ ದುರಂತಮಯವನ್ನಾಗಿ ಮಾಡುತ್ತಿವೆ. ಇದು ಇನ್ನೂ ದೊಡ್ಡ ದುರಂತ.

ನೀನು ನನಗಾಗಿ ಕಾದಿರಬೇಡ. ಶಿಕ್ಷೆ ಪೂರೈಸಿ ಬಂದ ಮೇಲೆ ನಾನು ಜೈಲಿನಿಂದ ಬಂದ ಖೈದಿ. ನಾನೂ ನೀನೂ "ನೆಲ್ಲು ಮೊಸರು ಕಲಸಿದ ಹಾಗೆ". ನಿನ್ನ ಮನೋಧರ್ಮಕ್ಕೆ ಒಪ್ಪುವವನನ್ನು ಮದುವೆ ಮಾಡಿಕೋ. ನನ್ನ ಶಿಕ್ಷೆ ಮುಗಿದ ಮೇಲೆ ನಿನ್ನನ್ನು ನೋಡಲು ಇಷ್ಟಪಡುವುದಿಲ್ಲ. ನಿನಗೆ ಮಂಗಳವಾಗಲಿ." ಎಂದು ತಿಳಿಸಿಬಿಡುತ್ತಾನೆ. ರಾಧೆಯ ಬಾಳೂ ದುರಂತವಾಗಿ ಬಿಡುತ್ತದೆ !

೧೯೬೦ರ ದಶಕದಲ್ಲಿ ರಚಿತವಾದ ಈ ನಾಟಕ ಇಂದಿನ ಈ ದಿನಗಳಿಗೂ ಪ್ರಸ್ತುತವಾಗುವಂತಿದೆ. ಭ್ರಷ್ಟಾಚಾರ, ಜಾತೀಯತೆ, ಸ್ವಜನಪಕ್ಷಪಾತ, ಲಂಚಗುಳಿತನ



ಇಂದಿನ ಕಾಲದಲ್ಲಿಯೂ ಮುಂದುವರಿದಿದೆ ಎಂಬುದು ಗೋಪಾಲನಂತಹ ಆದರ್ಶವಾದಿಗಳನ್ನು ಚಿಂತೆಗೀಡು ಮಾಡುತ್ತದೆ.

ನ್ಯಾಯಾಲಯದ ಕಲಾಪವನ್ನು ಕಾನೂನು ಬದ್ಧವಾಗಿ ನಡೆಸಿರುವ ಸನ್ನಿವೇಶಗಳು, ವಾದದ ಪ್ರಸ್ತಾವನೆಯ ಶೈಲಿಯು ನಾಟಕಕಾರರ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ.

ರಾಜಾರಾಯರು **"ಸಾವಿನ ದವಡೆಯಲ್ಲಿ"** ಎಂಬ ಐತಿಹಾಸಿಕ ನಾಟಕವನ್ನೂ ಬರೆದಿದ್ದಾರೆ. ವಿಜಯನಗರ ಸಾಮ್ರಾಜ್ಯದ ಪತನದ ನಂತರ, ಅವರ ಸಾಮಂತರಾಗಿದ್ದ ಧಾರಾನಗರ ರಾಜ್ಯದಲ್ಲಿ ನಡೆದ ಒಂದು ಘಟನೆ ಈ ನಾಟಕದ ವಸ್ತು. ವಿಶಪ್ರಾಶನ ಮಾಡಿಸಿ ವಿದ್ರೋಹಿಗಳನ್ನು ಕೊಲ್ಲುವುದರೊಂದಿಗೆ ನಾಟಕ ಅಂತ್ಯಗೊಳ್ಳುತ್ತದೆ.

ಅಖಿಲ ಭಾರತ ೫೬ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಪ್ರೊ. ಎ.ಎನ್. ಮೂರ್ತಿರಾಯರ ಅಧ್ಯಕ್ಷತೆಯಲ್ಲಿ ೧೯೮೪ರಲ್ಲಿ ಕೈವಾರದಲ್ಲಿ ನಡೆದ ಸಂದರ್ಭದಲ್ಲಿ ಪ್ರಕಟವಾದ ಸ್ಮರಣ ಸಂಚಿಕೆ "ಕೈವಾರ ಕೈವಲ್ಯ"ದಲ್ಲಿ ಈ ಪುಟ್ಟ ನಾಟಕ ಪ್ರಕಟಗೊಂಡಿದೆ.

## ನವ ದಂಪತಿಗಳು

ಇದು ನಾಟಕವಲ್ಲ. ನವದಂಪತಿಗಳ ಆತ್ಮೀಯ ಸರಸ ಸಲ್ಲಾಪಗಳು ಸಂಭಾಷಣಾ ರೂಪದಲ್ಲಿ ೧೪ ಪುಟ್ಟ ಅಧ್ಯಾಯಗಳಲ್ಲಿ ಮೂಡಿಬಂದ ಚಿತ್ರಗಳ ಸಂಕಲನ.

ಮೊದಲು ಹತ್ತು ಚಿತ್ರಗಳನ್ನು ಮಾತ್ರ ಒಳಗೊಂಡಿದ್ದ ಈ ಪುಸ್ತಕವನ್ನು ೧೯೫೩ರಲ್ಲಿ ಸತ್ಯಶೋಧನ ಪುಸ್ತಕ ಭಂಡಾರದವರು ಪ್ರಕಟಿಸಿದ್ದರು. ಅದಕ್ಕೆ ಮತ್ತೆ ನಾಲ್ಕು ಚಿತ್ರಗಳನ್ನು ಸೇರಿಸಿ ೨೭ ವರ್ಷಗಳ ನಂತರ ರಾಜಾರಾಯರು ೧೯೮೦ರಲ್ಲಿ ತಮ್ಮದೇ ಆದ 'ಕೈವಾರ ಪ್ರಕಾಶನ'ದಿಂದ ಪ್ರಕಟಿಸಿದ್ದಾರೆ.

ಈ ಪುಸ್ತಕದ 'ಮೊದಲ ಮಾತು'ವಿನಲ್ಲಿ ಶ್ರೀ ಕೈವಾರ ರಾಜಾರಾಯರೇ ಬರೆದಿರುವ ಕೆಳಗಿನ ಮಾತುಗಳನ್ನು ಅವಲೋಕಿಸಿದರೆ ಪುಸ್ತಕದ ಸ್ಥೂಲ ಚಿತ್ರಣ ನಮಗೆ ದೊರೆಯುತ್ತದೆ: "ನವದಂಪತಿಗಳು" ಹದಿನಾಲ್ಕು ಚಿತ್ರಗಳ ಸಂಕಲನ. ಮದುವೆಯೆಂದರೇನೇ ಹೆದರುವ ಇಂದಿನ ಗಂಡು–ಹೆಣ್ಣುಗಳ ಸಮಸ್ಯೆ. ಅದರ ಪರಿಹಾರವನ್ನು ಮೊದಲಿನೆರಡು ಚಿತ್ರಗಳು ಸೂಚಿಸುತ್ತವೆ. ಗಂಡು–ಹೆಣ್ಣು ಪರಸ್ಪರ ಮೆಚ್ಚಿ ಮದುವೆಯಾಗಲೊಪ್ಪಿದ ಸನ್ನಿವೇಶ ಮೂರನೆಯದು. ನಾಲ್ಕನೆಯದು ಪ್ರಥಮ ಸಮಾಗಮದ ಚಿತ್ರ. ಹಿಂದಿನ ಸಂಸ್ಕೃತಿಯ ವಯಸ್ಸಾದ ತಾಯಿ ಮತ್ತು ಇಂದಿನ ಸಂಸ್ಕೃತಿಯ ಚಿಕ್ಕ ವಯಸ್ಸಿನ ಹೆಂಡತಿಯರ ಮಧ್ಯೆ ಸಾಮರಸ್ಯವನ್ನು ಕಲ್ಪಿಸುವ ಚಿತ್ರ ಆರನೆಯದು. ಸಂಸಾರ ಹೂಡಿದ ತರುಣದಲ್ಲಿ ಅಲ್ಪ ಕಾರಣಗಳಿಂದಾಗುವ ವಿರಸವನ್ನು ಒಂಬತ್ತನೆಯದೂ ಅಂತಹ ವಿರಸಗಳು ಮುಂದೆ ಉಂಟಾಗದಂತೆ ಅನುಸರಿಸಬೇಕಾದ ನೀತಿ ನಿಯಮಗಳನ್ನು ಹತ್ತನೆಯ 'ಸುಖ ಸಂಸಾರದ ಸೂತ್ರಗಳೂ' ಪ್ರವಾಸಾನುಭವದ ಸ್ವಾರಸ್ಯವನ್ನು ಹನ್ನೆರಡನೆಯ ಚಿತ್ರವೂ, ಉಳಿದ ಚಿತ್ರಗಳು ನವದಂಪತಿಗಳ ರಮ್ಯ ಅನುಭವವನ್ನೂ ಚಿತ್ರಿಸುತ್ತವೆ.

ಹೀಗೆ ಮದುವೆಯ ಪ್ರಸ್ತಾಪದಿಂದ ಪ್ರಾರಂಭವಾಗಿ ಮೊದಲ ಮಗುವಾಗುವ ಸೂಚನೆಯಿಂದ ಮುಗಿಯುತ್ತದೆ. ಈ ಒಂದೊಂದು ಚಿತ್ರವೂ ಸ್ವಯಂಪೂರ್ಣ ಹಾಗೂ ಒಂದಕ್ಕೊಂದು ಪೂರಕ.

ಮದುವೆಯಾದ ದಂಪತಿಗಳ ನವ ಜೀವನದಲ್ಲಿ ಪ್ರೇಮ ಕಾಮಗಳು ವಿಜೃಂಭಿಸುತ್ತವೆ. ಮಡಿವಂತರಿಗೆ ಇದು ಸ್ವಲ್ಪ ಅತಿರೇಕವಾಗಿ ಕಾಣಬಹುದು. ಆದರೆ ಆ ವಯಸ್ಸಿನ ಮಹಿಮೆಯೇ ಅಂತಹುದು.

ನವದಂಪತಿಗಳ ಸರಸ ಜೀವನದ ಹೂಚಿತ್ರ ಇಲ್ಲಿದೆ ಸರಿ. ಆದರೆ ಇದು ಮಾನವ ಜೀವಿತದ ಮೊದಲ ಭಾಗ ಮಾತ್ರ. ಅಂದರೆ ಅವರ ಈ ರಮ್ಯ ಜೀವನದಲ್ಲಿ ಅವಿಭಾಜ್ಯವಾಗಿರುವ ಅವರ ಪ್ರೇಮದಲ್ಲಿ ಪಾಲ್ಗೊಳ್ಳಲು ಬರುವ ಒಂದು ಮಗುವಾಗುವವರೆಗೆ ಮಾತ್ರ. ಅನಂತರದ ಗೃಹಸ್ಥಜೀವನ ಹೆಚ್ಚು ಜವಾಬ್ದಾರಿಯುಳ್ಳದ್ದು. ಕಷ್ಟ ಸುಖಗಳನ್ನು ಎದುರಿಸಿ ಮಕ್ಕಳ ವಿದ್ಯಾಭ್ಯಾಸ, ಮದುವೆ, ಮಧ್ಯೆ ಸಾವು–ಬಾಳು, ಮುನಿಸು, ಮನಸ್ತಾಪ ಇತ್ಯಾದಿ–ಇವು ಮದುವೆಯ ಸುವರ್ಣ ಮಹೋತ್ಸವ ನಡೆಯುವವರೆಗಿನ ಗೃಹಸ್ಥ ಜೀವನಕ್ಕೆ ಸಂಬಂಧಿಸಿದ್ದು, ಅದರ ನಂತರದ್ದು ಜೀವನದ ತಪಸ್ಸನ್ನು ಯಶಸ್ವಿಯಾಗಿ ನಡೆಸಿ ಗಂಡಹೆಂಡಿರ ಜೀವಗಳು ಒಂದೇ ಆದದ್ದು, ಸಾರ್ಥಕ ಜೀವನದ ವೃದ್ಧ ದಂಪತಿಗಳ ದಾಂಪತ್ಯದ ಚಿತ್ರಗಳನ್ನು ಪ್ರಕಟಿಸಿ ಜೀವನ ಪರಿಪೂರ್ಣತೆಯ ಚಿತ್ರಗಳನ್ನು ಪ್ರಕಟಿಸಲಾಗುವುದು. ಆ ಪೈಕಿ ಕೆಲವು ಚಿತ್ರಗಳನ್ನು ಈಗಾಗಲೇ ಬರೆಯಲಾಗಿದೆ. ಅಂತಹ ಪ್ರಕಟನೆಯಿಂದ ಈಗ ಪ್ರಾರಂಭವಾಗಿರುವ ಪುಸ್ತಕ ಮುಗಿದಂತಾಗುತ್ತದೆ.

“ಸಂಭಾಷಣೆಯ ರೂಪದಲ್ಲಿದ್ದರೂ ಇದು ನಾಟಕವಲ್ಲ. ಮಧ್ಯಮವರ್ಗದ ಸುಸಂಸ್ಕೃತ ಸಂಸಾರದಲ್ಲಿ ಗಂಡ ಹೆಂಡತಿಯರು ಆಡಿಕೊಳ್ಳುವ ಅಂತರಂಗದ ಸವಿಮಾತುಗಳು, ಹಿರಿಯ ಸ್ನೇಹಿತರ ಅನುಭವ, ನಿತ್ಯ ಜೀವನದಲ್ಲಿ ಮನೆಯಲ್ಲಿ ಸ್ವಾಭಾವಿಕವಾಗಿ ಮಾತನಾಡಿಕೊಳ್ಳುವಂತೆ ಇಲ್ಲಿ ಬರೆಯಲಾಗಿದೆ. ಇದನ್ನು ಓದಿ ಅನುಭವಿಸುವ ನವದಂಪತಿಗಳಿಗೆ ಸುಖ ದಾಂಪತ್ಯಾನುಭವಕ್ಕೆ ಬೇಕಾದ ರಸಿಕ ಮನೋರಂಜನೆಯೂ, ಅನುಭವಿಗಳಿಗೆ ಆ ನೆನಪಿನ ಆನಂದವೂ, ಅನನುಭವಿಗಳಿಗೆ ಊಹಿಸಿ ಸುಖಿಸುವ ಸಂತೋಷವೂ ದೊರಕುವುದೆಂದು ಭಾವಿಸಲಾಗಿದೆ.”

ಕೈವಾರ ರಾಜಾರಾಯರ ಈ ‘ಮೊದಲ ಮಾತು’ವಿನಲ್ಲಿ ಉಲ್ಲೇಖಿಸಿರುವ ಗೃಹಸ್ಥ ಜೀವನದ, ವೃದ್ಧಾಪ್ಯ ಜೀವನದ ಚಿತ್ರಗಳು ಆನಂತರ ಪ್ರಕಟವಾಗಲಿಲ್ಲ. ಅಪ್ರಕಟಿತ ಸಾಹಿತ್ಯದ ಸಾಲಿಗೆ ಅವೂ ಸೇರಿಹೋಗಿವೆ !

ಈ ಪುಸ್ತಕದ ಪ್ರಕಟಣೆಗೆ ರಾಜಾರಾಯರ ಬೀಗರಾದ ಶ್ರೀ ಬಿ.ವಿ. ರಾಘವೇಂದ್ರರಾವ್ ಅವರ ಉದಾರ ನೆರವು ದೊರಕಿರುವುದನ್ನು ಸ್ಮರಿಸಿದ್ದಾರೆ. ಈ ಪುಸ್ತಕದ ‘ಸುಖ ಸಂಸಾರದ ಸೂತ್ರಗಳು’ ಎಂಬ ೧೦ನೆಯ ಅಧ್ಯಾಯದಲ್ಲಿ ತಿಳಿಸಿರುವ ಅನುಭವದ ಹಿತನುಡಿಗಳು ಎಲ್ಲರಿಗೂ ಸಾರ್ವಕಾಲಿಕ ಮಾರ್ಗದರ್ಶಕ ಸೂತ್ರಗಳಾಗಿವೆ.



ಪರಸ್ಪರರಲ್ಲಿ ಯಾವ ವಿಷಯಕ್ಕಾದರೂ ಕೋಪ, ಅಸಮಾಧಾನ ಉಂಟಾದಲ್ಲಿ ಸಿಟ್ಟಿನ ಭರದಲ್ಲಿ ಜೋರಾಗಿ ಕೂಗಿ ತಪ್ಪು ಮಾಡಬಹುದು. ಆಗ ಸಿಟ್ಟು ಬಂದಿರುವವರಿಗೆ ರಿಯಾಯಿತಿ ಕೊಟ್ಟು ಇನ್ನೊಬ್ಬರು ಎದುರುತ್ತರ ಕೊಡದೇ ಮೌನವಾಗಿರಬೇಕು. ಕೋಪದ ಕಾವು ಇಳಿದ ಮೇಲೆ ಸಮಾಧಾನ ಸ್ಥಿತಿಗೆ ಬರುತ್ತೀರಿ. ಆಗ ಸರಿ ತಪ್ಪುಗಳ ವಿಮರ್ಶೆ ಮಾಡಿಕೊಳ್ಳಬಹುದು. ಆದರೆ ಒಬ್ಬರು ಸಿಟ್ಟಾದಾಗ ಇನ್ನೊಬ್ಬರೂ ಸಿಟ್ಟಿನಿಂದ ಮಾತನಾಡಬಾರದು.

ನಾವುಗಳು ಏನಾದರೂ ತಪ್ಪು ಮಾಡಿದರೆ ಅಥವಾ ಯಾವ ವಿಷಯಗಳಲ್ಲಿ ಯಾದರೂ ನಮನಮಗೆ ಭಿನ್ನಾಭಿಪ್ರಾಯಗಳಿದ್ದರೆ ಅದನ್ನು ಬಂದವರ ಮುಂದೆಯಾಗಲಿ, ಬಂಧುಬಳಗದ ಮುಂದೆಯಾಗಲಿ ಪ್ರಕಟಪಡಿಸಬಾರದು. ಅಂತಹವುಗಳನ್ನು ನಮ್ಮ ನಮ್ಮಲ್ಲೇ ಗುಟ್ಟಾಗಿ ಚರ್ಚೆ ಮಾಡಿಕೊಂಡು ಸರಿಪಡಿಸಿಕೊಳ್ಳಬೇಕು.

ಗಂಡಸು ಬರೀ ಕಛೇರಿ ಕೆಲಸ, ಸಂಪಾದನೆ ಅಷ್ಟರಲ್ಲೇ ಮುತುವರ್ಜಿ ವಹಿಸಿದರೆ ಸಾಲದು. ನಿತ್ಯಗಟ್ಟಲೆಯ ಸಂಸಾರ ನಿರ್ವಹಣೆಯಲ್ಲೂ ಮುತುವರ್ಜಿ ವಹಿಸಬೇಕು. ಸಂಸಾರದಲ್ಲಿ ಇಬ್ಬರೂ ಸಮಭಾಗಿಗಳು ಎಂದು ತೋರಿಸಿ ಸಹಕರಿಸಬೇಕು. ಗಂಡ ಹೆಂಡಿರು ಒಬ್ಬರೊಬ್ಬರ ಇಷ್ಟಾನಿಷ್ಟಗಳಿಗೆ ಗೌರವ ಕೊಡಬೇಕು.

ಒಬ್ಬರನ್ನೊಬ್ಬರು ಗೌರವದಿಂದ ಕಾಣಬೇಕು. ಅವರ ಸಂಬಂಧ ದಿನ ದಿನಕ್ಕೆ ಹತ್ತಿರವಾಗುತ್ತಾ ಹೋಗಬೇಕು. ಬರಬರುತ್ತಾ ಒಬ್ಬರ ಮನಸ್ಸು ಇನ್ನೊಬ್ಬರ ಮನಸ್ಸಿನೊಡನೆ ಮಿಳಿತವಾಗಿ ಎರಡು ವ್ಯಕ್ತಿತ್ವ ಹೋಗಿ ಒಂದೇ ವ್ಯಕ್ತಿತ್ವವಾಗಬೇಕು.

ಹೀಗೆ ಈ ಪುಸ್ತಕ ಸಮಸ್ತರಿಗೂ ಉಪಯುಕ್ತವಾಗಿ ಪರಿಣಮಿಸಿದೆ.

## ಭಾರತದ ಶ್ರೀಕೃಷ್ಣ

ಈ ಹಿಂದೆ ಪ್ರಸ್ತಾಪಿಸಿರುವಂತೆ ಈ ಪುಸ್ತಕ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರ ಉಪನ್ಯಾಸವೊಂದರ ವಿಸ್ತೃತರೂಪ. ಪುಸ್ತಕ ರಚನೆಗೆ ಮುನ್ನ ಕೈವಾರ ರಾಜಾರಾಯರು ಶ್ರೀಕೃಷ್ಣನಿಗೆ ಸಂಬಂಧಿಸಿದ ಅನೇಕ ಮೌಲಿಕ ಗ್ರಂಥಗಳನ್ನು ತಲಸ್ಪರ್ಶಿ ಅಧ್ಯಯನ ಮಾಡಿದ್ದಾರೆ. ಸಂಶೋಧಕನ ರೀತಿ ಹಲವಾರು ಮಹತ್ವದ ಅಂಶಗಳನ್ನು ಹೆಕ್ಕಿ ತೆಗೆದಿದ್ದಾರೆ. ಬಂಕಿಮಚಂದ್ರರು ಬಂಗಾಳಿಯಲ್ಲಿ ಬರೆದು, ಅದನ್ನು ಕನ್ನಡಕ್ಕೆ ಅನುವಾದಿಸಿದ್ದ ಶ್ರೀ ಆರ್. ವ್ಯಾಸರಾಯರ “ಶ್ರೀಕೃಷ್ಣಚರಿತ್ರೆ”, ಪ್ರೊ. ವಿ. ಸೀತಾರಾಮಯ್ಯನವರು ಬರೆದ “ಭಾರತಗಳ ಶ್ರೀಕೃಷ್ಣ ಹಾಗೂ ಮಹಾಭಾರತದ ಕೃಷ್ಣಚಾರಿತ್ರ್ಯ” ವ್ಯಾಸಮಹಾಭಾರತ, ವಿಷ್ಣುಪುರಾಣ, ಹರಿವಂಶ, ಭಾಗವತ, ಬ್ರಹ್ಮವೈವರ್ತಪುರಾಣ, ಪ್ರೊ. ಎಸ್.ಕೆ. ರಾಮಚಂದ್ರರಾಯರು ಬರೆದ ‘ಶ್ರೀ ಕೃಷ್ಣನ ವ್ಯಕ್ತಿತ್ವ’ ಮುಂತಾದ ಗ್ರಂಥಗಳನ್ನು ಅಭ್ಯಸಿಸಿ ಟಿಪ್ಪಣಿ ಮಾಡಿಕೊಂಡು ವೆಂಕಣ್ಣಯ್ಯನವರ ಉಪನ್ಯಾಸವನ್ನು ಮೂಲ ಆಧಾರವನ್ನಾಗಿ ಇಟ್ಟುಕೊಂಡು ‘ಭಾರತದ ಶ್ರೀಕೃಷ್ಣ’ವನ್ನು ಸಿದ್ಧಪಡಿಸಿದ್ದಾರೆ. ಪುಸ್ತಕದ ಕೆಲವು ಅಂಶಗಳು ಇಂತಿವೆ:

ಭಾರತದಲ್ಲಿ ಬರುವ ಕೃಷ್ಣ ಅಲ್ಲಿ ಬರುವ ಇತರ ವ್ಯಕ್ತಿಗಳಂತೆಯೇ ಮನಷ್ಯ. ಸಾಮಾನ್ಯ ಮನುಷ್ಯ. ಇತರ ಪುರಾಣಗಳಲ್ಲಿ ಆತ ಭಗವಂತನ ಅವತಾರ. ಸಾಮಾನ್ಯವಾಗಿ ನಾವೆಲ್ಲ ಕೃಷ್ಣ ಅವತಾರ ಪುರುಷ ಎಂದು ನಂಬಿದ್ದೇವೆ. ಆ ಭಾವನೆ ಬೆಳೆಯಲು ಕಾರಣ ಪುರಾಣಗಳು. ವ್ಯಾಸ ಕೃತ ಮೂಲ ಭಾರತದಲ್ಲಿ ಕೃಷ್ಣನು ಮಾನವನೇ. ರಾಮ ಹುಟ್ಟಲು ದಶರಥನಿಗೆ ಸಿಕ್ಕ ಪಾಯಸ ಕಾರಣ. ಕೃಷ್ಣನ ಹುಟ್ಟಿಗೆ ಇಂತಹ ಕಾರಣಗಳಿಲ್ಲ. ಇತರ ಮಾನವರು ಹುಟ್ಟಿದಂತೆಯೇ ಹುಟ್ಟಿದ್ದಾನೆ. ಕ್ಲೇಶಗಳನ್ನು ಅನುಭವಿಸಿದ್ದಾನೆ. ಆದ್ದರಿಂದಲೇ ಕೃಷ್ಣಾವತಾರ ಪೂರ್ಣಾವತಾರ ಎಂಬ ಪ್ರತೀತಿ ಇದೆ. ಕೃಷ್ಣನು ಬದುಕಿದ ಆದರ್ಶ, ಜೀವನ, ಹಾಕಿಕೊಟ್ಟ ಮೇಲ್ಪಂಕ್ತಿ, ಬೋಧಿಸಿದ ತತ್ವಗಳು ಅವನನ್ನು ದೈವತ್ವಕ್ಕೆ ಏರಿಸಿದವು.

ವಿದ್ವಾಂಸರು ಒಪ್ಪಿರುವ ಹಾಗೆ ವ್ಯಾಸಭಾರತ ಮೊದಲು. ನಂತರ ವಿಷ್ಣುಪುರಾಣ. ಅನಂತರ ಹರಿವಂಶ. ಇದಾದ ಮೇಲೆ ಭಾಗತ. ಅದರಂದ ಈಚೆನದು ಬ್ರಹ್ಮವೈವರ್ತ ಪುರಾಣ. ಒದೊಂದು ಪುರಾಣಗಳಲ್ಲಿಯೂ ಕೃಷ್ಣನ ಚರಿತ್ರೆ, ವ್ಯಕ್ತಿತ್ವ ಬದಲಾವಣೆಗೊಳ್ಳುತ್ತ ಬಂದಿದೆ.

## ಕೃಷ್ಣ–ಚೋರ, ಜಾರ, ವಂಚಕನೇ?

ಕೃಷ್ಣ ಬಾಲ್ಯದಲ್ಲಿ ಕಳ್ಳ, ಬೆಣ್ಣೆ ಕದ್ದವ, ಜಾರತ್ವವೇ ಅವನ ಪ್ರಧಾನ ಗುಣ. ಅಸಂಖ್ಯಾತ ಗೋಪಿಕಾಸ್ತ್ರೀಯರನ್ನು, ಅವರುಗಳಿಗೆಲ್ಲಾ ಗಂಡಂದಿರಿದ್ದರೂ ತನ್ನ ಅಂಗ–ಸಂಗದಿಂದ ತೃಪ್ತಿಪಡಿಸುತ್ತಿದ್ದನು. ಅವರೆಲ್ಲ ಪತಿಯ ರೂಪದಲ್ಲಿ ಇವನನ್ನು ಪಡೆದಿದ್ದರು. ಈ ಜಾರತ್ವವು ಕೃಷ್ಣನು ಬಾಲಕನಾಗಿದ್ದಾಗ, ಯೌವನ ತಳೆಯದ ಅಪ್ರಬುದ್ಧ ವಯಸ್ಸಿನಲ್ಲಿ. ಯೌವನದ ನಂತರ ವಂಚನೆಯಿಂದ ಜರಾಸಂಧ, ಕರ್ಣ, ಭೀಷ್ಮ, ದ್ರೋಣಾದಿಗಳನ್ನು ಕೊಲ್ಲಿಸಿದ. ನಮಗೆ ದೇವ ಸ್ವರೂಪನಾದ ಕೃಷ್ಣ ಇಂತಹ ದುರ್ಗುಣಗಳನ್ನು ಹೊಂದಿರುವನೇನು ? ಹಾಗಾದರೆ ಮೊದಲು ಇದ್ದ ಕೃಷ್ಣ ಚರಿತ್ರೆ ಏನು ? ಆಮೇಲೆ ಸೇರಿದ ವಿಷಯಗಳೇನು ?

ವ್ಯಾಸರು ಮಹಾಭಾರತವನ್ನು ಬರೆಯುವ ಮೊದಲು ಹಾಗೂ ಕೃಷ್ಣ ಜೀವನವನ್ನು ವಿವರಿಸುವ ಪುರಾಣಗಳು ಪ್ರಕಟವಾಗುವ ಮುಂಚೆ ಕೃಷ್ಣನ ಪ್ರಸ್ತಾಪವಿದೆ. ಋಗ್ವೇದದ ಎಂಟನೆಯ ಮಂಡಲದಲ್ಲಿ, ಛಾಂದೋಗ್ಯ ಉಪನಿಷತ್ತಿನಲ್ಲಿ ಕೃಷ್ಣನ ಪ್ರಸ್ತಾಪವಿದೆ. ಕೃಷ್ಣ ಇಂದ್ರರಿಗೆ ನಡೆದ ಯುದ್ಧಗಳು, ಪಾರಿಜಾತ ಅಪಹರಣ, ಗೋವರ್ಧನೋದ್ಧರಣ ಇವು ಇಲ್ಲಿ ಸೂಚಿವಾಗಿವೆ. ಕ್ರಿಸ್ತಪೂರ್ವದ ಶಾಸನಗಳಲ್ಲಿಯೂ ಕೃಷ್ಣನ ಪ್ರಸ್ತಾಪವಿದೆ. ಪ್ರಾಚೀನವಾದ ಬೌದ್ಧ ಸಾಹಿತ್ಯದಲ್ಲಿ ಕೃಷ್ಣನನ್ನು ಮಹಾಪುರುಷ ಎಂದು ಚಿತ್ರಿಸಲಾಗಿದೆ. ಪ್ರಾಚೀನ ಜೈನ ಸಾಹಿತ್ಯದಲ್ಲಿ ಕೃಷ್ಣನ ಕತೆಯ ಅನೇಕ ವಿಷಯಗಳು ಸಿಗುತ್ತವೆ. ಈ ಇತಿಹಾಸ ಮತ್ತು ಚರಿತ್ರೆಯ ಅಂಶಗಳಿಂದ ವ್ಯಾಸರು ಮಹಾಭಾರತವನ್ನು ರಚಿಸಿದರು. ಆದ್ದರಿಂದಲೇ ರಾಮಾಯಣವನ್ನು 'ಕಾವ್ಯ' ಎನ್ನುತ್ತೇವೆ. ಮಹಾಭಾರತವನ್ನು "ಇತಿಹಾಸ" ಎನ್ನುತ್ತೇವೆ.



ಈ ಎಲ್ಲ ಪ್ರಾಚೀನ ಆಕರಗಳಲ್ಲಿಯೂ ಕೃಷ್ಣನನ್ನು ಆದರ್ಶಮಾನವನನ್ನಾಗಿ ಚಿತ್ರಿಸಿದ್ದಾರೆಯೇ ಹೊರತು ದೇವರೆಂದು ಹೇಳಿಲ್ಲ. ಈ ಪರಂಪರೆಯನ್ನೇ ಅನುಸರಿಸಿ ವ್ಯಾಸರು ಕೃಷ್ಣನನ್ನು ಆದರ್ಶ ಮಾನವನನ್ನಾಗಿ ಚಿತ್ರಿಸಿದ್ದಾರೆ. ಮುಂದೆ ಬಂದ ಪುರಾಣಗಳು ಕೃಷ್ಣನನ್ನು ದೇವರನ್ನಾಗಿ ಚಿತ್ರಿಸಿದರು. ಜಾರತ್ವ, ಚೋರತ್ವಗಳು ಅವನ ಲೀಲೆಗಳಾದವು, ಕ್ಷಮಾಯೋಗ್ಯವಾದವು ! ಕೃಷ್ಣನ ಚರಿತ್ರೆಗಳು ಮಹಾಭಾರತದಿಂದ>ವಿಷ್ಣುಪುರಾಣಕ್ಕೆ> ಹರಿವಂಶಕ್ಕೆ>ಭಾಗವತಕ್ಕೆ>ಬ್ರಹ್ಮವೈವರ್ತಪುರಾಣಕ್ಕೆ ಬದಲಾಗುತ್ತ ಹೋಗಿವೆ !

ಉದಾಹರಣೆಗೆ ನೋಡಿ : ಮಹಾಭಾರತದಲ್ಲಿ 'ಪೂತನಿ' ಎಂಬುದೊಂದು ಹಕ್ಕಿ. ವಿಷ್ಣುಪುರಾಣದಲ್ಲಿ ಬಾಲಘಾತನಿಯಾದ ಕೆಟ್ಟ ಹೆಂಗಸು. ಭಾಗವತದಲ್ಲಿ ಘೋರ ರಕ್ಕಸಿ! ಹೀಗೆ ಪೂತನಿ ವಿಚಾರ ಬದಲಾಗಿದೆ.

ಬಾಯಿಂದ ಬಾಯಿಗೆ ಹೋಗುವ ಸುದ್ದಿ 'ಅವನು ಹುಚ್ಚನ ಹಾಗೆ ನಕ್ಕ', ಎಂಬುದು ಕ್ರಮೇಣ 'ಅವನಿಗೆ ಹುಚ್ಚು ಹಿಡಿದಿದೆ' ಎಂದು ಮಾರ್ಪಾಡಾಗುತ್ತದೆ.

ಬಂಕಿಮಚಂದ್ರರು ಊರ್ವಶೀ ಪುರೂರವರ ಉದಾಹರಣೆಯನ್ನು ಕೊಟ್ಟಿದ್ದಾರೆ. ಯಜುರ್ವೇದ ಸಂಹಿತೆಯಲ್ಲಿ ಅಗ್ನಿಚರ್ಯ ಕಾರ್ಯದಲ್ಲಿ ಬಳಸುವ ಕೆಳಗೆ ಇರುವ ಅರಣಿಗೆ ಸ್ತ್ರೀರೂಪ ಕಲ್ಪಿಸಿ "ಊರ್ವಶೀ" ಎಂದು ಕರೆದರು. ಅಗ್ನಿ ಉತ್ಪತ್ತಿಗೆ ಗಂಡಸೂ ಬೇಕೆಂದು ಮೇಲೆ ಇರುವ ಅರಣಿಗೆ 'ಪುರೂರವ' ಎಂದು ಕರೆದರು. ಮುಂದೆ ಋಗ್ವೇದ ಸಂಹಿತೆಯಲ್ಲಿ ಇವರು ನಾಯಕ ನಾಯಕಿಯರಾದರು. ಮಹಾಭಾರತದಲ್ಲಿ ಪುರೂರವರು ಚಂದ್ರವಂಶದ ರಾಜನು. ಊರ್ವಶಿಯ ಗರ್ಭದಲ್ಲಿ ಇವನಿಗೆ 'ಆಯೂ' ಎಂಬ ಪುತ್ರನಾದನು. ಈ ಆಯೂವಿನ ಮಗನೆ ನಹುಷ. ಇವನೇ ಕುರು, ಪಾಂಡವರಿಗೆ, ಯಾದವರಿಗೆ ಮೂಲ ಪುರುಷ–ಹೀಗೆ ಊರ್ವಶೀ–ಪುರೂರವರ ವ್ಯಕ್ತಿತ್ವ ಬದಲಾಗುತ್ತ ಹೋಗಿದೆ.

ಕಾಳಿಂಗ ಮರ್ದನದ ಕಾಳಿಂಗ ಸರ್ಪದ ಪ್ರಸ್ತಾಪ ಮಹಾಭಾರತದಲ್ಲಿಲ್ಲ. ಮಹಾಭಾರತದಲ್ಲಿ ಗೊಲ್ಲ–ಗೋಪಿಯರ ವಿಷಯವೇ ಇಲ್ಲ. ಪುರಾಣಗಳಲ್ಲಿ ರಾಸಲೀಲೆ ಎಂಬುದು ಗೋಪಿಕಾಸ್ತ್ರೀಯರು ಭಕ್ತಿಯೋಗದ ದ್ವಾರಾ ಕೃಷ್ಣನಲ್ಲಿ ಏಕಾತ್ಮತೆಯನ್ನು ಪಡೆದುಕೊಂಡರು ಎಂಬುದಾಗಿದೆ.

ಬ್ರಹ್ಮವೈವರ್ತ ಪುರಾಣವನ್ನು ಹತ್ತನೆಯ ಶತಮಾನದಲ್ಲಿ ಬರೆದಿರಬಹುದೆಂದು ವಿಮರ್ಶಕರು ಊಹಿಸಿದ್ದಾರೆ. ಇದರಲ್ಲಿ ಕೃಷ್ಣಗೋಪಿಯರ ಸಂಬಂಧವು ಒಂದು ಕಾಮಕೇಳಿಯಾಗಿ ಅಶ್ಲೀಲವೆನಿಸುವ ಹಂತ ತಲುಪಿದೆ. ಹೀಗೆ ಕೃಷ್ಣನ ಕತೆ ಕಾಲಾನುಕಾಲಕ್ಕೆ ಬದಲಾಗಿದೆ.

ರಾಧೆಯ ಹೆಸರು ಮಹಾಭಾರತದಲ್ಲಿ ಇಲ್ಲ. ಈ ರಾಧೆಯ ಹೆಸರು ಮೊದಲು ಬರುವುದು ಬ್ರಹ್ಮವೈವರ್ತಪುರಾಣದಲ್ಲಿ. ಭೂಮಿಯಲ್ಲಿ ಅವಳು 'ರಾಯಣ'ನೆಂಬವನ ಹೆಂಡತಿ. ಕಳಂಕಿಯಾಗು ಎಂಬ ಶಾಪ ಅವಳಿಗಿದೆ. ಬೃಂದಾವನದಲ್ಲಿ ಅವತರಿಸಿ

ಕೃಷ್ಣನಿಗಾಗಿ ಕಾದಿರುತ್ತಾಳೆ. ಕೃಷ್ಣನಿಗಿಂತ ದೊಡ್ಡವಳು. ತನ್ನ ಮಾಯೆಯಿಂದ ರಾಸಮಂಡಲವನ್ನು ಸೃಷ್ಟಿಸಿದಳು. ಕೂಸಾಗಿದ್ದ ಕೃಷ್ಣನು ಪ್ರಾಯದವನಾದನು. ಬ್ರಹ್ಮನು ಇವರಿಗೆ ವಿವಾಹ ಮಾಡುವನು. ರಾಯಣನ ಹೆಂಡತಿ ಆಗಿದ್ದ ಇವಳು ಈಗ ಜಾರೆಯಾದಳು. ಕೃಷ್ಣನಿಗೆ ಪರದಾರಾಗಮನದ ಕಳಂಕ ಬಂದಿತು. ಈ ರಾಧೆಯ ಪಾತ್ರದ ಸೃಷ್ಟಿ ಬ್ರಹ್ಮವೈವರ್ತ ಪುರಾಣಕಾರನದು. ಕೃಷ್ಣನ ಚರಿತ್ರೆಗೇ ರಾಧೆಯ ಪಾತ್ರ ಕಳಂಕ ತಂದಿದೆ. ಅಮರಕೋಶದಲ್ಲಿಯೂ ರಾಧಾ ಗೋಪಿಯರ ಪ್ರಸ್ತಾಪ ಇಲ್ಲ. ಬ್ರಹ್ಮವೈವರ್ತ ಪುರಾಣ ಮತ್ತು ಜಯದೇವನ 'ಗೀತಗೋವಿಂದ'ಗಳನ್ನು ಬಿಟ್ಟರೆ ಯಾವ ಪ್ರಾಚೀನ ಗ್ರಂಥದಲ್ಲೂ ಈ ರಾಧೆಯ ಪ್ರಸ್ತಾಪವಿಲ್ಲ. ಸೂರ್ಯನಂತೆ ಪ್ರಕಾಶಮಾನವಾಗಿರುವ ಕೃಷ್ಣನ ಚರಿತ್ರೆಗೆ ಈ ಪುರಣ ಕತೆಗಳು ಮೋಡಗಳಂತೆ ಅಡ್ಡಬಂದಿವೆ. ಅವುಗಳನ್ನು ಸರಿಸಬೇಕು.

ದೈವ, ಮನುಷ್ಯಪ್ರಯತ್ನ ಎರಡೂ ಸೇರಿ "ಲೋಕಕಾರಣ" ಎನ್ನುತ್ತಾರೆ. ಕೃಷ್ಣಜೀವನ ಆದರ್ಶ ಮನುಷ್ಯನ ಜೀವನ. ಮನುಷ್ಯನಾಗಿಯೇ ದೈವತ್ವವನ್ನು ಸಂಪಾದಿಸಿದವನ ಜೀವನ. ಅದೊಂದು ಸಾಧನೆ. ಮಾನವನ ಮನಸ್ಸಿನ ಪ್ರವೃತ್ತಿ ಕೇವಲ ಇಂದ್ರಿಯಸುಖಗಳ ಕಡೆಗೆ ಓಡುತ್ತಾ ಇರುತ್ತದೆ. ಸ್ವಾರ್ಥವೇ ಅದರ ಗುರಿ. ಕಾಮ್ಯ ಕರ್ಮವೇ ಅದರ ಕರ್ಮ. ಉತ್ತಮವಾದ ಮನುಷ್ಯನು ಆ ಮನಸ್ಸನ್ನು ತಿದ್ದಿ ಹತೋಟಿಯಲ್ಲಿಟ್ಟುಕೊಂಡು ಜಿತೇಂದ್ರಿಯನಾಗಿ ಒಂದು ಚೈತನ್ಯವನ್ನು ಹುಟ್ಟಿಸಿ ಆ ಶಕ್ತಿಯನ್ನು ಎಚ್ಚರಿಸಿ ಮುಂದಕ್ಕೆ ತಂದುಕೊಳ್ಳಬೇಕು. ಹೀಗೆ ದುಷ್ಟ ಗುಣಗಳನ್ನು ಜಯಿಸಿದ ಮನುಷ್ಯನೇ ಶ್ರೇಷ್ಠನೂ ಆದರ್ಶನೂ ಆಗುತ್ತಾನೆ.

ಕೃಷ್ಣ ಹುಟ್ಟಿದ್ದು ಸೆರೆಮನೆಯಲ್ಲಿ. ಹುಟ್ಟಿದ ಕೂಡಲೇ ತಾಯಿಯಿಂದ ಅಗಲಿಸಿ ನಂಗೋಕುಲಕ್ಕೆ ಸಾಗಿಸಲಾಯಿತು. ಎಂತಹ ದರಿದ್ರರಿಗೇ ಹುಟ್ಟಿದ ಮಕ್ಕಳಾಗಲೀ ಅವರಿಗೆ ತಾಯಿಯ ಹಾಲನ್ನು ಕುಡಿಯುವ ಭಾಗ್ಯ ಸಿಗದೇ ಇರುವುದಿಲ್ಲ. ಕೃಷ್ಣನಿಗೆ ಅದೂ ಸಿಗಲಿಲ್ಲ. ಅವನು ಹುಟ್ಟಿದ್ದು ಜಗತ್ಪ್ರಸಿದ್ಧವಾದ ಯದುರಾಜರ ವಂಶದಲ್ಲಿ. ಹುಟ್ಟುತ್ತಲೇ ಅವನನ್ನು ಗೊಲ್ಲರ ಮನೆಗೆ ಸಾಗಿಸಿದರು. ರಾಜಕುಮಾರನಾಗಿ ಹುಟ್ಟಿದರೂ ಬೆಳೆದುದು ದನ ಕಾಯುವವರ ಮಧ್ಯೆ. ಆದರೆ ದನ ಕಾಯುವವರ ನೆಮ್ಮದಿಯೂ ಅವನಿಗಿರಲಿಲ್ಲ. ರಾಜಕುಮಾರನ ಸೌಖ್ಯ ಸೌಭಾಗ್ಯಗಳು ದೊರಕಲಿಲ್ಲ. ರಾಜತ್ವದ ಕಷ್ಟ ಪರಂಪರೆಗಳು ತಪ್ಪಲಿಲ್ಲ. ಸೋದರಮಾವ ಕಂಸನು ತಾನು ಅನ್ಯಾಯದಿಂದ ಸಂಪಾದಿಸಿರುವ ರಾಜತ್ವಕ್ಕೆ ಎಲ್ಲಿ ಊನ ಬರುವುದೋ ಎಂದು ಇವನನ್ನು ಕೊಲ್ಲಲು ಆಗಾಗ ಪ್ರಯತ್ನಿಸುತ್ತಲೇ ಇದ್ದನು. ಪೂತನಿ, ಶಕಟಾಸುರ, ಧೇನುಕಾಸುರ ಮುಂತಾದವರಿಂದ ಗಂಡಾಂತರಗಳನ್ನೊಡ್ಡುತ್ತಿದ್ದನು. ಹೀಗೆ ದಿನಗಂಡ, ಕ್ಷಣಗಂಡಗಳನ್ನು ಎಣಿಸಿ ಕೃಷ್ಣ ಬೆಳೆಯಬೇಕಾಯಿತು.

ಕಂಸನ ತಾಯಿ ಒಳ್ಳೆಯ ಚೆಲುವೆ. ಆಕೆಯಲ್ಲಿ ಕಾಮಗೊಂಡ ದ್ರುವಿಲನೆಂಬ ದುಷ್ಟನು ಅವಳ ಗಂಡ ಉಗ್ರಸೇನ ರಾಜನ ವೇಷದಲ್ಲಿ ಅವಳನ್ನು ರಮಿಸಿದ ಫಲವಾಗಿ






**ಕೊಳಲಿಲ್ಲದ ಶ್ರೀ ಕೃಷ್ಣ**

ಹುಟ್ಟಿದವ ಕಂಸ. ಕಂಸ ಅಧರ್ಮಿ ಕ್ರೂರಿ. ತಂದೆಯನ್ನೇ ಸಿಂಹಾಸನದಿಂದ ತಳ್ಳಿ ದೇಶಕಂಟಕನಾಗಿ ರಾಜ್ಯವಾಳುತ್ತಿದ್ದ. ಕೃಷ್ಣ ಮಲ್ಲಯುದ್ಧದಿಂದ ಕಂಸನನ್ನು ಕೊಂದು ಉಗ್ರಸೇನನಿಗೇ ಪುನಃ ಪಟ್ಟಕಟ್ಟಿ ಸಾಮಾನ್ಯ ಪ್ರಜೆಯಾಗಿಯೇ ವಾಸಿಸಿದ. ಧರ್ಮ ಸಂಸ್ಥಾಪನೆಯೇ ಕೃಷ್ಣನ ಧ್ಯೇಯ.

ಕೃಷ್ಣ ಸಾಂದೀಪನೀ ಋಷಿಯ ಬಳಿ ವಿದ್ಯಾಭ್ಯಾಸಕ್ಕೆ ಸೇರಿ ವೇದ ವೇದಾಂಗಗಳಲ್ಲಿ, ಶಸ್ತ್ರವಿದ್ಯೆಯಲ್ಲಿ, ಶಾಸ್ತ್ರವಿದ್ಯೆಯಲ್ಲಿ ಪಾರಂಗತನಾದನು. ಹತ್ತು ವರ್ಷ ಹಿಮಾಲಯದಲ್ಲಿ ತಪಸ್ಸು ಮಾಡಿ ತೇಜೋಬಲ, ತಪೋಬಲಗಳನ್ನು ಸಂಪಾದಿಸಿದನು. ಮದುವೆಯ ಕಾಲ ಸಮೀಪಿಸಿತು. ರುಕ್ಮಿಣಿಯನ್ನು ಕೃಷ್ಣನಿಗೆ ಕೊಡಲು, ಅವಳ ತಂದೆಗೆ ಮನಸ್ಸಿತ್ತು. ಆದರೆ ಅವಳ ಅಣ್ಣ ರುಕ್ಮಿ ಶಿಶುಪಾಲನಿಗೇ ಕೊಡಲು ಹಠ ಮಾಡಿದ. ಶಿಶುಪಾಲನನ್ನು ಸೋಲಿಸಿ ರುಕ್ಮಿಣಿಯನ್ನು ಕೃಷ್ಣ ಮದುವೆಯಾದ. ಶಿಶುಪಾಲ ಶತ್ರುವಾದ.

ಮನುಷ್ಯನ ಮಾತಿಗೆ ಬೆಲೆ ಬರುವುದು ಅವನಲ್ಲಿರುವ ತೇಜೋಬಲದಿಂದ. ಅವನ ಬಾಯಲ್ಲಿ ಒಂದು ಮಾತು ಬಂದರೆ ಅದಕ್ಕೆ ತೂಕ ಬರುವುದು ಅವನ ನಡತೆಯಿಂದ. ಉಪದೇಶ ಮಾಡುವವರಿಗೆ ತ್ರಿಕರಣ ಶುದ್ಧಿ ಇರಬೇಕು. ಕೃಷ್ಣ ಅಂತಹ ಆದರ್ಶ ಮನುಷ್ಯ.

ಅವನ ಜೀವನದ ಆದರ್ಶವನ್ನು ಚಿತ್ರಿಸಿರುವುದು ಗೀತಾಬೋಧೆ. "ಕಷ್ಟ ಬಂದಾಗ ಮನಸ್ಸಿನ ಸ್ಥೈರ್ಯ ಕಳೆದುಕೊಳ್ಳಬೇಡ, ಮನಸ್ಸು ಯಾವಾಗಲೂ ಪ್ರಶಾಂತವಾಗಿರಲಿ" ಎಂಬುದೇ ಗೀತೆಯ ಸಾರ.

❍

# ೪. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ

ಶ್ರೀ ಕೈವಾರ ರಾಜಾರಾಯರು, ಪದವಿ ಪಡೆದ ದಿನವೇ ೧೯೩೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಉದ್ಯೋಗಕ್ಕೆ ಸೇರಿದ್ದನ್ನು ಹಾಗೂ ವಿದ್ಯುತ್ ಇಲಾಖೆಯ ಕೆಲಸದಿಂದ ನಿವೃತ್ತಿ ಆದ ದಿನದಿಂದಲೇ ೧೯೬೭ರಲ್ಲಿ ಪುನಃ ಪರಿಷತ್ತಿನಲ್ಲಿ ಕೆಲಸಕ್ಕೆ ಸೇರಿದ್ದನ್ನು ಈ ಹಿಂದೆಯೇ ಪ್ರಸ್ತಾಪಿಸಲಾಗಿದೆ. ಇದೊಂದು ಬಹು ಅಪರೂಪದ ಯೋಗಾಯೋಗ.

ಕನ್ನಡ ಸಾಹಿತ್ಯ ಪರಿಷತ್ತಿನ ಕಚೇರಿಯು ಅಂದಿನ ದಿನಗಳಲ್ಲಿ ಬೆಳಗ್ಗೆ ೯ರಿಂದ ೧ ಗಂಟೆ ಮತ್ತೆ ಸಂಜೆ ೪ರಿಂದ ೭.೩೦ರ ವರೆಗೆ ತೆರೆದಿರುತ್ತಿತ್ತು. ಎನ್.ಆರ್. ಕಾಲೋನಿಯ ತಮ್ಮ ಮನೆಯಿಂದ ರಾಜಾರಾಯರು ಪರಿಷತ್ತಿಗೆ ಸೈಕಲ್‌ನಲ್ಲಿ ಬಂದು ಹೋಗುತ್ತಿದ್ದರು. ಬೆಳಗ್ಗೆ ಒಮ್ಮೆ, ಸಂಜೆ ಒಮ್ಮೆ ಹೀಗೆ ನಿತ್ಯ ಎರಡೆರಡು ಬಾರಿ ಕಛೇರಿಗೆ ಸೈಕಲ್ ತುಳಿಯುತ್ತಿದ್ದರು. ಕಛೇರಿಗೆ ಬರುವ ಸಮಯದ ಪರಿಪಾಲನೆಯಂತೂ ಅತ್ಯಂತ ಕರಾರುವಾಕ್ಕಾಗಿರುತ್ತಿತ್ತು. ಒಂದು ದಿನವೂ ಸಮಯ ಮೀರಿ ಬಂದ ಉದಾಹರಣೆಯಿಲ್ಲ. ಸಭಾ ನಡವಳಿಕೆ, ಪತ್ರಗಳ ಕರಡನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸುವುದರಲ್ಲಿ ನಿಷ್ಣಾತರಾಗಿದ್ದರು. ಅನೇಕ ಗಣ್ಯ ಸಾಹಿತಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು ಇವರ ಬರವಣಿಗೆಯ ಶೈಲಿಯನ್ನು ಮಸಾರೆ ಪ್ರಶಂಸಿಸಿದ್ದಾರೆ.

ಲೆಕ್ಕಪತ್ರಗಳ ವಿಚಾರದಲ್ಲಂತೂ ನುರಿತವರಾಗಿದ್ದರು. ವಿದ್ಯುತ್ ಇಲಾಖೆಯಲ್ಲಿನ ತಮ್ಮ ಅನುಭವವನ್ನು ಪರಿಷತ್ತಿನಲ್ಲಿ ಸಮರ್ಥವಾಗಿ ಬಳಸಿಕೊಂಡರು. ವಾರ್ಷಿಕ ಲೆಕ್ಕಪರಿಶೋಧನೆಯಲ್ಲಿ ಯಾವುದೇ ಆಕ್ಷೇಪಣೆಗಳು ಇಲ್ಲದಂತೆ ಕಾಳಜಿ ವಹಿಸುತ್ತಿದ್ದರು. ಸಹೋದ್ಯೋಗಿಗಳೊಡನೆ ಸೌಹಾರ್ದ ಸಂಬಂಧವನ್ನಿರಿಸಿಕೊಂಡಿದ್ದರು. ಪರಿಷತ್ತಿನ ಅಂಗರಚನೆಯ ನಿಯಮಗಳೆಲ್ಲವೂ ಇವರ ನಾಲಿಗೆಯ ತುದಿಯಲ್ಲಿಯೇ ಇದ್ದುವು. ಅಧ್ಯಕ್ಷ ಪೀಠದ ಬಗ್ಗೆ ಅಪಾರ ಗೌರವವನ್ನಿರಿಸಿಕೊಂಡಿದ್ದರು.

೧೯೭೩ರಲ್ಲಿ ನಿರ್ಮಾಣಗೊಂಡ ಪರಿಷತ್ತಿನ ಸುವರ್ಣ ಮಹೋತ್ಸವ ಕಟ್ಟಡದ ವಿನ್ಯಾಸ ಮಾಡಿಕೊಟ್ಟ ರಾಜಾರಾಯರ ಬೀಗರಾದ ಹಾಗೂ ದಕ್ಷ ಎಂಜಿನಿಯರ್ ಆದ ಶ್ರೀ ಬಿ.ವಿ. ರಾಘವೇಂದ್ರರಾಯರ ಶ್ರೇಷ್ಠ ಕಾರ್ಯಶೈಲಿಯ ಬಗ್ಗೆ ಕಟ್ಟಡದ ಒಂದೊಂದು ವಿಶೇಷ ಅಂಶಗಳನ್ನೂ ತೋರಿಸುತ್ತ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದರು.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾಗಿದ್ದ ಶ್ರೀ ಎಸ್.ವಿ. ಶ್ರೀನಿವಾಸರಾಯರು ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣ ಅವರನ್ನು



ಸಂದರ್ಶಿಸಿದಾಗ ರಾಜಾರಾಯರ ಬಗ್ಗೆ ನಾರಾಯಣ ಅವರು ನುಡಿದ ಮಾತುಗಳನ್ನು ದಾಖಲಿಸಿದ್ದಾರೆ. ಅವು ಹೀಗಿವೆ : "ಕೈವಾರ ರಾಜಾರಾಯರು ನಾನು ಮೆಚ್ಚಿದ್ದ ವ್ಯವಸ್ಥಾಪಕರು, ಆಫೀಸಿನ ಕೆಲಸದ ವೇಳೆಯ ಪರಿಪಾಲನೆಯಲ್ಲಿ ಅವರ ಶಿಸ್ತು ಅನುಕರಣೀಯ. ನನ್ನ ಅಧಿಕಾರಾವಧಿಯ ಒಂಬತ್ತು ವರ್ಷಗಳಲ್ಲಿ ಒಂದು ದಿನವೂ ಅವರು ಒಂದು ನಿಮಿಷವೂ ತಡವಾಗಿ ಆಫೀಸಿಗೆ ಬಂದುದಿಲ್ಲ. ಕಛೇರಿ ಶುರುವಾಗುವ ವೇಳೆ ಬೆಳಗ್ಗೆ ೯ ಗಂಟೆಗೆ ಸರಿಯಾಗಿ ಬಂದು ತಮ್ಮ ಸ್ಥಾನದಲ್ಲಿ ಕೂತಿರುತ್ತಿದ್ದರು. ಕೆಲಸ ಮುಗಿಯುವವರೆಗೂ ಆಫೀಸು ಬಿಡುವ ಆಲೋಚನೆ ಮಾಡುತ್ತಿರಲಿಲ್ಲ. ಅವರ ಪಾಲಿಗೆ ಕಾಯಕವೇ ದೇವರಾಗಿತ್ತು. ಕೆಲಸದಲ್ಲಿ ಅವರಿಗೆ ಅಷ್ಟೊಂದು ತನ್ಮಯತೆ, ಕಾಳಜಿ, ಯಾವ ಕೆಲಸವಾಗಬೇಕಾದರೂ ಅದು ಪರಿಪೂರ್ಣವಾಗಿರಬೇಕು. ತಪ್ಪಿರಲೇಕೂಡದು. ಯಾವುದೇ ಟಿಪ್ಪಣಿ, ವರದಿ ಕಳುಹಿಸಬೇಕಾದರೂ ಬಹಳ ಮುತುವರ್ಜಿ ವಹಿಸಿ ಖುದ್ದಾಗಿ ತಪಾಸಣೆ ನಡೆಸಿಯೇ ನನ್ನ ಬಳಿ ಸಹಿಗಾಗಿ ತರುತ್ತಿದ್ದರು. ಅವರು ತಂದ ವರದಿಯನ್ನು ನಾನು ಎಂದೂ ಪರಿಶೀಲಿಸುತ್ತಿರಲಿಲ್ಲ. ಅವರಲ್ಲಿ ನನಗೆ ಅಷ್ಟು ನಂಬಿಕೆ ಇತ್ತ. ಅದೇ ಪ್ರವೃತ್ತಿ ಅದೇ ನಿಷ್ಠೆಯನ್ನು ಅವರು ಪರಿಷತ್ತಿನಲ್ಲಿ ಇದ್ದಷ್ಟು ಕಾಲವೂ ಪಾಲಿಸಿಕೊಂಡು ಬಂದಿದ್ದರು."


ಇದು ರಾಜಾರಾಯರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕೈವಾರ ರಾಜಾರಾಯರ ಹೆಸರಿನಲ್ಲಿ ಅವರ ಮಗ ಶ್ರೀ ಕೆ. ಅಂಬಾಜಿರಾವ್ ಹಾಗೂ ಅಂಬಾಜಿರಾವ್ ಅವರ ಪತ್ನಿಯ ತಂದೆ (ಮಾವನವರು) ಶ್ರೀ ಬಿ.ವಿ. ರಾಘವೇಂದ್ರರಾವ್ ಸೇರಿ ಇಪ್ಪತ್ತು ಸಾವಿರ ರೂ.ಗಳ ದತ್ತಿ ನಿಧಿಯೊಂದನ್ನು ೧೯೯೯ರಲ್ಲಿ ಸ್ಥಾಪಿಸಿದ್ದಾರೆ. ಪ್ರತಿ ವರ್ಷ ಕೈವಾರ ರಾಜಾರಾಯರ ಸಾಹಿತ್ಯ, ಜೀವನ ಸಾಧನೆ ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲು ಸೂಚಿಸಲಾಗಿತ್ತು. ಅದರಂತೆ ಸುಮಾರು ೮ ವರ್ಷಗಳ ಕಾಲ ಕಾರ್ಯಕ್ರಮ ನಡೆಯಿತು. ಶ್ರೀ ಎಸ್.ವಿ. ಶ್ರೀನಿವಾಸರಾವ್ ಹಾಗೂ ರಾಜಾರಾಯರ ಎರಡನೇ ಮಗ ಕೈವಾರ ಗೋಪಿನಾಥ್ ಅವರು ಕೂಡ ಉಪನ್ಯಾಸ ನೀಡಿದ್ದಾರೆ. ೨೦೦೭ರಲ್ಲಿ ಪರಿಷತ್ತಿನ ಕೋರಿಕೆಯ ಮೇರೆಗೆ ದಾನಿಗಳು ಈ ಉದ್ದೇಶವನ್ನು ಬದಲಿಸಿದ್ದಾರೆ. ಪ್ರತಿ ವರ್ಷ ಕಾವ, ಜಾಣ, ರತ್ನ ಹಾಗೂ ಶಾಸನ ಪರೀಕ್ಷೆಗಳಲ್ಲಿ ರ್‍ಯಾಂಕ್ ವಿಜೇತರಿಗೆ ಬಹುಮಾನ ನೀಡಲು ಈ ದತ್ತಿನಿಧಿಯ ಬಡ್ಡಿ ಹಣವನ್ನು ಈಗ ಬಳಸಿಕೊಳ್ಳಲಾಗುತ್ತಿದೆ. ಪರೀಕ್ಷೆಗಳ ನಿಯಮಾವಳಿಗಳಲ್ಲಿ ಈ ಅಂಶವನ್ನು ಕಾಣಿಸಲಾಗಿದೆ.

ರಾಜಾರಾಯರ "ಅಪವಾದ ಮತ್ತು ಇತರ ನಾಟಕಗಳು" ಎಂಬ ೫ ನಾಟಕಗಳ ಸಂಕಲನವು ಕನ್ನಡ ಸಾಹಿತ್ಯ ಪರಿಷತ್ತಿನ "ರತ್ನ" ಪರೀಕ್ಷೆಗೆ ಪಠ್ಯಪುಸ್ತಕವಾಗಿತ್ತು.

# ೫. ಸಂಕೀರ್ಣ

**ಜನ್ಮಶತಮಾನೋತ್ಸವ :** ಕರ್ನಾಟಕ ನಾಟಕ ಅಕಾಡೆಮಿಯು ೨೦೧೨ನೆಯ ಇಸವಿ ಫೆಬ್ರವರಿ ೨೯ನೆಯ ತಾರೀಖಿನಂದು, ಇವರ ಜನ್ಮ ದಿನದಂದೇ ಕನ್ನಡ ಭವನದ ನಯನ ಸಭಾಂಗಣದಲ್ಲಿ "ಕೈವಾರ ರಾಜಾರಾಯರ ಜನ್ಮ ಶತಮಾನೋತ್ಸವ"ವನ್ನು ಅದ್ದೂರಿಯಿಂದ ಆಚರಿಸಿದೆ. ಪ್ರೊ. ಜಿ. ಅಶ್ವತ್ಥನಾರಾಯಣ, ಶ್ರೀ ಜಿ.ಕೆ. ಗುಂಡೂರಾವ್, ಶ್ರೀ ಟಿ.ಜಿ. ನರಸಿಂಹಮೂರ್ತಿ ಮೊದಲಾದ ಗಣ್ಯರು ಪ್ರಬಂಧ ಮಂಡಿಸಿ ರಾಜಾರಾಯರ ಜೀವನ, ಸಾಹಿತ್ಯ ಸಾಧನೆಗಳನ್ನು ಸಾರ್ವಜನಿಕರಿಗೆ ಸಮರ್ಥವಾಗಿ ತಿಳಿಸಿದ್ದಾರೆ.

**ಶತಮಾನೋತ್ಸವ ಸಂಪುಟ :** 'ಕೈವಾರ ರಾಜಾರಾಯರ ಬುಡುಬುಡಿಕೆ ಮತ್ತು ಇತರ ನಾಟಕಗಳು' ಎಂಬ ಶೀರ್ಷಿಕೆಯಲ್ಲಿ ಕೈವಾರ ಗೋಪಿನಾಥ್ ಅವರು ಸಂಪಾದಿಸಿರುವ ೬೮೪ ಪುಟಗಳ ಬೃಹತ್ "ಶತಮಾನೋತ್ಸವ ಸಂಪುಟ"ವನ್ನು ೨೦೧೨ನೆಯ ಇಸವಿಯಲ್ಲಿ ಬೆಂಗಳೂರಿನ ಭಾಗ್ಯಲಕ್ಷ್ಮೀ ಪ್ರಕಾಶದಿಂದ ಪ್ರಕಟಿಸಲಾಗಿದೆ. ಕೈವಾರ ಗೋಪಿನಾಥ್ ಅವರ ಸುದೀರ್ಘ 'ಸಂಪಾದಕರ ಮಾತು' ರಾಜಾರಾಯರ ಕೃತಿಗಳ ವೈಶಿಷ್ಟ್ಯಗಳನ್ನು, ಜೀವನ ವಿವರಗಳನ್ನು ತಿಳಿಸಿಕೊಡುತ್ತದೆ. ರಾಜಾರಾಯರ ಅನೇಕ ಅಪ್ರಕಟಿತ  ನಾಟಕಗಳು ಈ ಸಂಪುಟದಲ್ಲಿ ಬೆಳಕು ಕಂಡಿವೆ.






**ಪ್ರಕಾಶನ ಸಂಸ್ಥೆಗಳು :** ಶ್ರೀ ಕೈವಾರ ರಾಜಾರಾಯರು ಬರೆದ ಪುಸ್ತಕಗಳನ್ನು ಮೈಸೂರಿನ ಕಾವ್ಯಾಲಯ ಪ್ರಕಾಶನ, ಬೆಂಗಳೂರಿನ ಸತ್ಯಶೋಧನ ಪ್ರಕಟಣಾಲಯ, ಎಚ್.ಎನ್. ರಾವ್ ಪ್ರಕಾಶನ, ಸಾಹಿತ್ಯ ಮಂದಿರ, ಬೆಂಗಳೂರು ಪ್ರೆಸ್, ಕೈವಾರ ಪ್ರಕಾಶನ, ಭಾಗ್ಯಲಕ್ಷ್ಮೀ ಪ್ರಕಾಶನ, ಐ.ಬಿ.ಹೆಚ್. ಮೊದಲಾದ ಸಂಸ್ಥೆಗಳು ಪ್ರಕಟಿಸಿವೆ.

**ಅಭಿನಯ :** ಕೈವಾರ ರಾಜಾರಾಯರು ಸ್ವತಃ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಶ್ರೀಮತಿ ಯಮುನಾಮೂರ್ತಿ, ಶ್ರೀ ಬಿ.ಎಸ್. ಕೇಶವರಾವ್ ಮೊದಲಾದವರು ಇವರ ಜೊತೆ ಅಭಿನಯಿಸಿರುವ ಪ್ರಮುಖರು. ರಾಜಾರಾಯರಿಗೆ ಸಿನೇಮಾ ಹಾಗೂ ನಾಟಕಗಳನ್ನು ನೋಡುವ ಹವ್ಯಾಸ ಬಹಳ ಇತ್ತು. ಆಗ ಕನ್ನಡ ಚಲನಚಿತ್ರಗಳು ಬರುತ್ತಿದ್ದುದೇ ಕಡಿಮೆ. ಹೊಸ ಸಿನೇಮಾ ಬಂದರೆ ತಪ್ಪದೇ ಹೋಗಿ ನೋಡುತ್ತಿದ್ದರು.

**ಪಾಕ ಪ್ರವೀಣರು :** ಶ್ರೀ ರಾಜಾರಾಯರು ರುಚಿರುಚಿಯಾದ ತಿಂಡಿ ತಿನಿಸುಗಳನ್ನು ಸ್ವತಃ ತಯಾರಿಸಬಲ್ಲವರಾಗಿದ್ದರು. ಹಾಗೇ ಉತ್ತಮವಾದ ತಿಂಡಿ ಊಟಗಳನ್ನು ಸವಿಯುವ ಹವ್ಯಾಸವೂ ಇತ್ತು.

ಅವರ ನಾಟಕಗಳ ಸಂಭಾಷಣೆಗಳಲ್ಲೂ ಪ್ರಾಸಂಗಿಕವಾಗಿ ಇಂತಹ ಉದಾಹರಣೆಗಳು ಅಲ್ಲಲ್ಲಿ ನಮಗೆ ನೋಡಸಿಗುತ್ತವೆ. 'ಅಪ್-ಟು-ಡೇಟ್ ಅಮ್ಮಯ್ಯ' ನಾಟಕದ ಪಾತ್ರವೊಂದರ ಮೂಲಕ ನುಡಿಸಿದ "ಉಪೇರಿ" ಎಂಬ ತಿನಿಸನ್ನು ತಯಾರಿಸುವ ವಿಧಾನವನ್ನು ನೋಡಿ : "ಆಲೂಗಡ್ಡೆ ಇತ್ಯಾದಿ ತರಕಾರಿಗಳನ್ನು ಬಳಸಿ ಮಾಡುವ ಉಪೇರಿ ಸಾಮಾನ್ಯವಾಗಿ ಬಹುಮಂದಿಗೆ ಗೊತ್ತಿದೆ. ಆದರೆ ಬಾಳೆಹಣ್ಣಿನ ಉಪೇರಿ ಇನ್ನೂ ರುಚಿ. ರಸಬಾಳೆಯ ಹಣ್ಣನ್ನು ತೆಳುವಾಗಿ ಕೊಯ್ದು ಒಣಗಿಸಬೇಕು. ಅದನ್ನು ಆಗ ತಾನೇ ತಯಾರಾದ ಬೆಣ್ಣೆ ಕಾಯಿಸಿದ ತುಪ್ಪದಲ್ಲಿ ಕರಿಯಬೇಕು. ಸಕ್ಕರೆ ಪುಡಿ ಅಥವಾ ಉಪ್ಪು ಬೆರೆಸಿದ ಮೆಣಸಿನ ಪುಡಿ ಹಾಕಿ ತಿನ್ನಬೇಕು.

ಗೋಡಂಬಿ, ಬಾದಾಮಿ, ಪಿಸ್ತ, ಒಣ ಖರ್ಜೂರ ಇವುಗಳ ಚೂರುಗಳನ್ನು ಸದಾ ತಮ್ಮ ಜುಬ್ಬಾದ ಜೇಬಿನಲ್ಲಿ ಇರಿಸಿಕೊಳ್ಳುತ್ತಿದ್ದರು. ಆಗಾಗ ಸ್ವಲ್ಪ ಸ್ವಲ್ಪವೇ ಮೆಲ್ಲುತ್ತಿದ್ದರು. ಅಕ್ಕಪಕ್ಕದಲ್ಲಿ ಯಾರಾದರೂ ಇದ್ದರೆ ಅವರಿಗೂ ತುಸು ಕೊಡುತ್ತಿದ್ದರು.

**ಸಂಪ್ರದಾಯ ಪಾಲನೆ :** ಕೈವಾರ ರಾಜಾರಾಯರು ಹಾಗೂ ಅವರ ಧರ್ಮಪತ್ನಿ ಕಮಲಾಬಾಯಿಯವರು ಎರಡು ತಲೆಮಾರಿನ ಹಿಂದಿನವರು. ಆಚಾರ, ವಿಚಾರ, ಬಟ್ಟೆ, ಬರೆ, ಆಹಾರ, ವಿಹಾರಗಳಲ್ಲಿ ಹಿಂದಿನ ಸಂಪ್ರದಾಯದಂತೆಯೇ ನಡೆದುಕೊಂಡು ಬಂದಿದ್ದಾರೆ. ನಿತ್ಯ ಸ್ನಾನ, ಸಂಧ್ಯಾವಂದನೆ, ಹಬ್ಬ ಹರಿದಿನಗಳಲ್ಲಿ ಮಂತ್ರ ಪೂರ್ವಕವಾಗಿ ಶಾಸ್ತ್ರೋಕ್ತ ಪೂಜೆ, ಪುನಸ್ಕಾರಗಳನ್ನು ಅನೂಚಾನವಾಗಿ ನಡೆಸಿಕೊಂಡು ಬಂದವರು. ಕಮಲಾಬಾಯಿಯವರಾದರೋ ನಿತ್ಯ ಸ್ನಾನ ಗೌರೀಪೂಜೆಗಳನ್ನು ಮುಗಿಸಿ ತಿಂಡಿ ಊಟದ ಏರ್ಪಾಟು ಮಾಡುತ್ತಿದ್ದರು. ಸೇವಿಸುತ್ತಿದ್ದುದು ಆರೋಗ್ಯಪೂರ್ಣ ಸಾತ್ವಿಕ ಆಹಾರ.

ರಾಜಾರಾಯರದು ಕ್ಲೋಸ್ ಕಾಲರ್ ಕೋಟು, ಟೋಪಿ, ಕಚ್ಚೆ ಪಂಚೆ. ಇದು ಅವರ ಮೊದಲಿನ ಉಡುಪು. ಸರಕಾರೀ ಸೇವೆಯಿಂದ ನಿವೃತ್ತರಾದ ಮೇಲೆ ಕಚ್ಚೆಪಂಚೆ, ಜುಬ್ಬದ ಸಾಮಾನ್ಯ ಉಡುಪಿಗೆ ಬದಲಿಸಿಕೊಂಡರು. ಅವರ ಪತ್ನಿ ಕಮಲಾಬಾಯಿಯವರು ಒಂಬತ್ತು ಗಜದ ಸೀರೆಯನ್ನು ಕಚ್ಚೆ ಹಾಕಿ ಉಡುತ್ತಿದ್ದರು.

ರಾಜಾರಾಯರು ತಮ್ಮ ತಂದೆ ತಾಯಿಗಳಿಗೆ ಅವರ ಅಂತ್ಯ ಕಾಲದವರೆಗೂ ಸೇವೆ ಮಾಡಿ ತೃಪ್ತಿಪಡಿಸಿದ್ದಾರೆ. ತಂದೆ ತಾಯಿಗಳು ಕಾಲವಾದ ಮೇಲೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ದ್ವಾರಕಾದಿಂದ ಪುರಿಯವರೆಗೆ ದಂಪತಿ ಸಮೇತರಾಗಿ ಎಲ್ಲಾ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲೆಲ್ಲಾ ಪಿತೃಕಾರ್ಯಗಳನ್ನು ಮಾಡಿದ್ದಾರೆ.

ಜೀವನದ ಕೊನೆಯ ವರ್ಷಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತ, ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರ ಮುಂತಾದ ಅಧ್ಯಾತ್ಮಿಕ ಗ್ರಂಥಗಳ ವ್ಯಾಸಂಗದಲ್ಲಿ ತೊಡಗಿದ್ದರು.

ಇವರ ಸಾಹಿತ್ಯ ಸಾಧನೆಗಳನ್ನು ಮೆಚ್ಚಿ, ಶಶಿಕಲಾವಿದರು, ಕೆ.ಇ.ಬಿ. ಕನ್ನಡ ಸಂಘ, ಸಾಹಿತ್ಯ ಮಂದಿರ ಮೊದಲಾದ ಸಂಸ್ಥೆಗಳು ಸನ್ಮಾನ ಮಾಡಿ ಗೌರವಿಸಿವೆ. ಸರ್ಕಾರವಾಗಲೀ, ಅಕಾಡೆಮಿಗಳಾಗಲೀ, ಕನ್ನಡ ಸಾಹಿತ್ಯ ಪರಿಷತ್ತಾಗಲೀ ಯಾವ ಸನ್ಮಾನಗಳನ್ನು ಮಾಡದಿರುವುದು ಪ್ರತಿಭಾಶಾಲೀ ಬರಹಗಾರರೊಬ್ಬರಿಗೆ ಎಸಗಿದ ಅನ್ಯಾಯ ಎಂದೇ ಪರಿಭಾವಿಸಲಾಗುತ್ತಿದೆ.

**ಕೌಟುಂಬಿಕ ವಿವರ :** ಕೈವಾರ ರಾಜಾರಾಯರಿಗೆ ಇಬ್ಬರು ಗಂಡು ಮಕ್ಕಳು; ಇಬ್ಬರು ಹೆಣ್ಣು ಮಕ್ಕಳು.

೧. ಶ್ರೀ ಕೆ. ಅಂಬಾಜಿರಾವ್, ೨. ಶ್ರೀ ಕೈವಾರ ಗೋಪೀನಾಥ್, ೩. ಶ್ರೀಮತಿ ಪದ್ಮಾಮೂರ್ತಿ, ೪. ಶ್ರೀಮತಿ ಮಾಲತಿ ದ್ವಾರಕಾನಾಥ್.



# ೬. ಗಣ್ಯರ ಅನಿಸಿಕೆಗಳು

ರಾಜಾರಾಯರ ಬದುಕು ಬರಹಗಳ ಬಗೆಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ ಸಾರಸ್ವತ ಲೋಕದ ಗಣ್ಯರ ಒಂದು ದೊಡ್ಡ ಸಮೂಹವೇ ಇದೆ.

**ಡಾ. ಎ.ಆರ್. ಕೃಷ್ಣಶಾಸ್ತ್ರಿಗಳು :** "ಕೈವಾರ ರಾಜಾರಾಯರು ಬರೆದ 'ಗಂಡನ ಜುಲ್ಮಾನೆ', 'ವಧುಪರೀಕ್ಷೆ', 'ಬೇಸ್ತು', 'ಪತ್ರ ಪ್ರಮಾದ', 'ಬುಡುಬುಡಿಕೆ', 'ಅಮ್ಮಯ್ಯನ ಆಟಂಬಾಬ್', 'ಅಮ್ಮಾವ್ರಾಡಳಿತ' ಮೊದಲಾದ ಐವತ್ತು ಏಕಾಂಕ ನಾಟಕಗಳು ಪ್ರಸಿದ್ಧ ಫ್ರೆಂಚ್ ನಾಟಕಕಾರನಾದ ಮೋಲಿಯರ್‌ನ ಕೃತಿಗಳನ್ನು ನೆನಪಿಗೆ ತರುತ್ತವೆ. ಅವು ಪುಟ್ಟದಾಗಿದ್ದರೂ ಒಂದಕ್ಕಿಂತ ಒಂದು ಚೆನ್ನಾಗಿವೆ. ಇಂದು ನಮ್ಮ ಸಂಸಾರದಲ್ಲಿ ಕಂಡುಬರುವ ಅನೇಕ ಸಮಸ್ಯೆಗಳನ್ನು ರಸವತ್ತಾಗಿ ಚಿತ್ರಿಸುತ್ತವೆ. ಈ ಚಿತ್ರಗಳಲ್ಲಿ ನಮ್ಮ ದೋಷ, ದೌರ್ಬಲ್ಯಗಳನ್ನು ನೋಡಿ ಮನಸ್ಸು ಕಹಿಯಾಗುವುದಕ್ಕೆ ಬದಲು ನಾವು ವಿನೋದಗೊಂಡು ನಕ್ಕು ನಲಿಯುತ್ತೇವೆ. ಅವುಗಳಿಂದ ಪರಿಹಾಸ್ಯ ಪರಿಹಾರ ಎರಡೂ ದೊರೆಯುವುದು ಒಂದು ವೈಶಿಷ್ಟ್ಯ. ಇಲ್ಲಿಯ ಪಾತ್ರಗಳನ್ನು ನೀವೂ ನಾವು ಸುತ್ತಮುತ್ತ ಕಾಣುವೆವು. ಸಂಭಾಷಣೆಗಳು ಆಡುವ ರೂಢಿಮಾತುಗಳಿಂದಲೂ ಸಣ್ಣ ಸಣ್ಣ ವಾಕ್ಯಗಳಿಂದಲೂ ರಚಿತವಾಗಿವೆ. ಆದ್ದರಿಂದ ಜೀವಂತವಾಗಿ ಸ್ವಾಭಾವಿಕವಾಗಿವೆ. ಅಶ್ಲೀಲವಿಲ್ಲ. ಕೃತಕತೆ ಇಲ್ಲ. ಇವುಗಳನ್ನು ಓದಿದರೆ ಜನರ ಮೂರ್ಖತೆ ಮೌಢ್ಯಗಳೂ ಓರೆಕೋರೆಗಳೂ ಸ್ವಲ್ಪವಾದರೂ ಕಡಿಮೆಯಾಗುತ್ತವೆಂದು ನಾನು ತಿಳಿಯುತ್ತೇನೆ."

ರಾಜಾರಾಯರು ಪರಿಷತ್ತಿನಲ್ಲಿ ಶೀಘ್ರಲಿಪಿಕಾರರಾಗಿದ್ದಾಗ ಪರಿಷತ್ತಿನ ಕೋಶಾಧ್ಯಕ್ಷರಾಗಿದ್ದ ಹಾಗೂ ಅವರನ್ನು ನಿಕಟವಾಗಿ ಬಲ್ಲ ಪ್ರೊ॥ ವಿ. ಸೀತಾರಾಮಯ್ಯ ಅವರು ಸಲುಗೆಯಿಂದ ಹೇಳಿರುವ ಈ ಮಾತು ವಾಸ್ತವಾಂಶಗಳಿಂದ ಕೂಡಿದ ಆತ್ಮಾವಲೋಕನದ ಆತ್ಮೀಯ ನುಡಿಗಳಾಗಿವೆ. 'ನಾನು ಇಷ್ಟು ಕವನಗಳನ್ನು ರಚಿಸಿದ್ದರೂ ನನ್ನನ್ನು ಯಾರೂ ಕವಿ ಎಂದು ಗುರುತಿಸಲಿಲ್ಲ. ನೀವು ಇಂತಹ ಒಳ್ಳೆಯ ನಾಟಕಗಳನ್ನು ಬರೆದಿದ್ದರೂ ನಿಮ್ಮನ್ನು ನಾಟಕಕಾರ ಎಂದು ಗುರುತಿಸಲಿಲ್ಲ."

**ಡಾ. ಡಿ.ವಿ. ಗುಂಡಪ್ಪ :** "ನಿಮ್ಮ ನಾಟಕಗಳು ಗಾತ್ರದಲ್ಲಿ ಸಣ್ಣವಾಗಿ, ಶೈಲಿಯಲ್ಲಿ ಲಲಿತವಾಗಿ, ಕಥಾವಸ್ತುವಿನಲ್ಲಿ ಸರಸವಾಗಿರುವುದರಿಂದ ಎಲ್ಲರೂ ಇವುಗಳನ್ನು ಆದರಿಸುವರೆಂಬುದಕ್ಕೆ ಸಂಶಯವಿಲ್ಲ. ನಮ್ಮ ಜನಕ್ಕೆ ಈ ಬಗೆಯ ಸಾಹಿತ್ಯ ಅವಶ್ಯವಾಗಿ ಬೇಕಾದದ್ದು. ಇದು ಅವರಿಗೆ ಸುಲಭವೂ ಕುತೂಹಲಕರವೂ ಆಗಿರುತ್ತದೆ. ಅವರಿಗೆ ತಮ್ಮ ನಿತ್ಯ ಜೀವನದ "ವಿನೋದ ಪ್ರಸಂಗಗಳನ್ನು ಇಲ್ಲಿ ಕಂಡುಕೊಂಡು ಯುಕ್ತಾಯುಕ್ತ

ವಿವೇಚನೆಯನ್ನು ಮಾಡಿಯಾರೆಂದು ನನಗನ್ನಿಸುತ್ತದೆ. ಇದು ನಮ್ಮ ಸಮಾಜಕ್ಕೆ ಒಳ್ಳೆಯ ಉಪಕಾರ."

**ಡಾ. ಹಾ.ಮಾ. ನಾಯಕ :** "ಶ್ರೀ ಕೈವಾರ ರಾಜಾರಾಯರು ಕನ್ನಡದ ಹಿರಿಯ ಲೇಖಕರಲ್ಲಿ ಒಬ್ಬರು. ಅವರು ಎಂಟು ಪೂರ್ಣ ಪ್ರಮಾಣದ ನಾಟಕಗಳನ್ನೂ ೫೦ ಏಕಾಂಕ ನಾಟಕಗಳನ್ನೂ ಬರೆದು ಆಧುನಿಕ ನಾಟಕಕಾರರಲ್ಲಿ ಹೆಸರಾಗಿದ್ದಾರೆ. ಸಾಹಿತ್ಯ ಕೃಷಿಗೆ ಅನುಕೂಲವಿಲ್ಲದ ವಾತಾವರಣದಲ್ಲಿ ತಮ್ಮ ವೃತ್ತಿಯನ್ನು ಒತ್ತಾಯವಾಗಿ ನಡೆಸಿಕೊಂಡು ಬರಬೇಕಾಗಿ ಬಂದ ಶ್ರೀ ರಾಜಾರಾಯರು ತಮ್ಮ ಪ್ರವೃತ್ತಿಯನ್ನು ಬಿಟ್ಟುಕೊಡದೇ ಇಷ್ಟೊಂದು ಕೆಲಸ ಮಾಡಿರುವುದು ಅಭಿಮಾನದ ವಿಷಯ."

**ಪ್ರೊ. ತ.ಸು. ಶ್ಯಾಮರಾವ್ :** "ಕೈವಾರ ರಾಜಾರಾಯರು ಹಲವು ಸಾಮಾಜಿಕ ನಾಟಕಗಳನ್ನು ಸೃಷ್ಟಿಸಿ ಕನ್ನಡ ಕಾವ್ಯ ಪ್ರಪಂಚಕ್ಕೆ ಕೊಟ್ಟಿದ್ದಾರೆ. ಇವರ ದೃಷ್ಟಿ ಬರೀ ಹಾಸ್ಯವಾಗಿರದೆ ಜನಜೀವನದಲ್ಲಿ ಸ್ವಲ್ಪ ಆಳಕ್ಕೆ ಇಳಿದು ಕೆಲವು ಲಘು ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನವನ್ನು ಮಾಡುವುದಾಗಿದೆ. ಕೈವಾರ ರಾಜಾರಾಯರ ಬರಹದಲ್ಲಿ ಜೀವವಿದೆ. ಅವರು ಸೃಷ್ಟಿಸಿರುವ ಸಂಭಾಷಣೆಯಲ್ಲಿ ಕುಶಲತೆ ಇದೆ. ನೈಜತೆ ಇದೆ. ಅವರು ಸಮಾಜದಲ್ಲಿ ಕಾಣುವ ಸಮಸ್ಯೆಗಳೂ ಅವುಗಳಿಗೆ ಸೂಚಿಸುವ ನಿವಾರಣೋಪಾಯಗಳೂ ಜನರಿಗೆ ಒಪ್ಪಿಗೆ ಆಗಲಿ ಬಿಡಲಿ, ಅವರ ಸನ್ನಿವೇಶ ರಚನೆ, ಪಾತ್ರ ಸೃಷ್ಟಿ, ಸಂಭಾಷಣಾ ಚಾತುರ್ಯಗಳು ಎಲ್ಲರಿಗೂ ಮೆಚ್ಚುಗೆಯಾಗುವುದರಲ್ಲಿ ಸಂದೇಹವಿಲ್ಲ."

**ಪ್ರೊ. ಜಿ. ವೆಂಕಟಸುಬ್ಬಯ್ಯ :** "ಶ್ರೀ ಕೈವಾರ ರಾಜಾರಾಯರು ಸರ್ಕಾರಿ ವೃತ್ತಿಯಿಂದ ನಿವೃತ್ತಿ ಹೊಂದುವ ವೇಳೆ ಕನ್ನಡದ ಬಹುಪ್ರಸಿದ್ಧ ನಾಟಕಕಾರರಾಗಿದ್ದರು. ಅವರು ಬರೆದ ಎಲ್ಲ ನಾಟಕಗಳೂ ನಾಡಿನಾದ್ಯಂತ ಪ್ರದರ್ಶನಗೊಂಡಿವೆ. ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಮೆಚ್ಚಿ ತಾವು ಪ್ರದರ್ಶಿಸಬೇಕಾದಾಗ ಕೈವಾರ ರಾಜಾರಾಯರ ನಾಟಕಗಳನ್ನೇ ಆರಿಸುತ್ತಿದ್ದುದನ್ನು ಸ್ವತಃ ಪ್ರಾಧ್ಯಾಪಕನಾದ ನಾನು ಬಲ್ಲೆ. ಕನ್ನಡ ಸಾಹಿತ್ಯ ಪರಿಷತ್ತಿನ ಕರ್ತವ್ಯಗಳನ್ನು ದಕ್ಷವಾಗಿ ಸಮರ್ಥವಾಗಿ ನೆರವೇರಿಸಿದ್ದಾರೆ."

ಧೀಮಂತ ವ್ಯಕ್ತಿ ಕೈವಾರ ರಾಜಾರಾಯರು ಎಂದು ಶ್ರೀ ಜಿ.ಕೆ. ಗುಂಡೂರಾವ್, (ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಕಾರ್ಯದರ್ಶಿಗಳು) ನುಡಿದಿದ್ದಾರೆ.

ಅತ್ಯಂತ ಪ್ರತಿಭಾವಂತರಾಗಿದ್ದ ರಾಜಾರಾಯರು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪ್ರವೀಣರಾಗಿದ್ದರು. ಸಮಾಜದ ಓರೆ ಕೋರೆಗಳನ್ನು ತಿಳಿಸಿ, ಹಿತ, ಅಹಿತಗಳನ್ನು ಮನದಟ್ಟು ಮಾಡಿಕೊಳ್ಳಲು ಶ್ರೀಯುತರು ಆಯ್ದುಕೊಂಡಿದ್ದ ಮಾರ್ಗ ನಾಟಕ ರಚನೆ.

ಪದವಿ ಪಡೆದ ನಂತರ ಸೇರಿದ್ದು ಕನ್ನಡ ಸಾಹಿತ್ಯ ಪರಿಷತ್ತಿನ ಕೈಂಕರ್ಯಕ್ಕೆ. ಸರ್ಕಾರಿ ಹುದ್ದೆಯಿಂದ ನಿವೃತ್ತಿ ಪಡೆದ ನಂತರವೂ ಸೇರಿದ್ದು ಅದೇ ಪರಿಷತ್ತಿನ



ಪರಿಚಾರಿಕೆಗೆ. ಸರ್ಕಾರದ ವಿದ್ಯುತ್ ಇಲಾಖೆಯ ಎಲ್ಲ ವಿಭಾಗಗಳ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿದರು. ವೃತ್ತಿ ಜೀವನದ ಜೊತೆಗೆ ಅನೇಕ ಸಂಘ ಸಂಸ್ಥೆಗಳ, ಸಾಹಿತಿಗಳ, ಕಲಾವಿದರ ಸಂಪರ್ಕ ಗಳಿಸಿಕೊಂಡರು. ಅನೇಕ ಉಪನ್ಯಾಸಗಳನ್ನು ನೀಡಿದ್ದಾರೆ. ಲೇಖನಗಳನ್ನು ಬರೆದಿದ್ದಾರೆ. ಕಾಲೇಜು ದಿನಗಳಿಂದಲೇ ನಾಟಕಗಳಲ್ಲಿ ಅಭಿನಯ ಹಾಗೂ ನಾಟಕ ರಚನೆಯ ಹವ್ಯಾಸ ಇತ್ತು. ಮುಂದೆ ಹವ್ಯಾಸಿ ರಂಗಭೂಮಿಗೆ ಅಗತ್ಯವಾದ ಅನೇಕ ನಾಟಕಗಳನ್ನು ರಚಿಸಿದರು. ಇವರ 'ಅಮ್ಮಯ್ಯನ ಆಟಂಬಾಂಬ್,' 'ಬುಡುಬುಡಿಕೆ' ಮುಂತಾದ ನಾಟಕಗಳು ಶಾಲಾ ಕಾಲೇಜುಗಳಲ್ಲಿ ಪ್ರದರ್ಶಿತವಾಗುತ್ತಿದ್ದ ಪ್ರಸಿದ್ಧ ನಾಟಕಗಳು.

ನಾಟಕಗಳಲ್ಲಿ ಅಭಿನಯ, ನಾಟಕ ಸ್ಪರ್ಧೆಗಳ ತೀರ್ಪುಗಾರರ ಕಾರ್ಯ, ನಾಟಕಗಳ ವಿಮರ್ಶೆ ಇತ್ಯಾದಿ ಕ್ಷೇತ್ರಗಳಲ್ಲೂ 'ಸೈ' ಎನ್ನಿಸಿಕೊಂಡವರು.

ತಮ್ಮ ಕುಟುಂಬದ ಗಂಡು ಮಕ್ಕಳಿಗೂ ಹೆಣ್ಣು ಮಕ್ಕಳಿಗೂ ಕಲಾಪ್ರತಿಭೆ ಪ್ರದರ್ಶನಕ್ಕೆ ಕೊಡುತ್ತಿದ್ದ ಪ್ರೋತ್ಸಾಹ ಅಂದಿನ ದಿನಗಳಲ್ಲಿ ಅಚ್ಚರಿಯ ವಿಷಯವಾಗಿತ್ತು. ಸಂಗೀತ, ದೇವರನಾಮ, ಕನ್ನಡಗೀತೆ, ಪ್ರಬಂಧ, ಆಶುಭಾಷಣ ಇತ್ಯಾದಿ ಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ಉತ್ತೇಜನ ನೀಡುತ್ತಿದ್ದರು. ಧಾರ್ಮಿಕ ಆಚರಣೆ, ಆಚಾರ ವಿಚಾರಗಳಲ್ಲಿ ಶ್ರದ್ಧೆ, ಅಚ್ಚುಕಟ್ಟಾದ ಶಿಸ್ತು ಸಂಸಾರ. ಸದಾ ಸೈಕಲ್‌ನಲ್ಲಿಯೇ ಪಯಣ, ಅವಕಾಶವಿದ್ದರೂ ಆಡಂಬರದ, ದುಂದುವೆಚ್ಚದ ಜೀವನಕ್ಕೆ ಮಾರು ಹೋದವರಲ್ಲ. ಎಷ್ಟು ಬೇಕೋ ಅಷ್ಟನ್ನು ಮಾತ್ರ ಅಳವಡಿಸಿಕೊಂಡ ಸರಳ ಬಾಳು ಇವರದು. ಕೀರ್ತಿ, ಪ್ರಶಸ್ತಿ, ಪದವಿ, ಸ್ಥಾನಮಾನಗಳಿಗೆ ಆಕಾಂಕ್ಷೆ ಪಟ್ಟವರಲ್ಲ.

ನಿವೃತ್ತಿಯ ನಂತರ ಪರಿಷತ್ತಿನ ಕೆಲಸಕ್ಕೆ ಸೇರಿ ನಿಸ್ಪೃಹರಾಗಿ ದುಡಿದರು. ೧೯೭೩ನೆಯ ಇಸ್ವಿಯಲ್ಲಿ ದೇಶದ ರಾಜಧಾನಿ ನವದೆಹಲಿಯಲ್ಲಿ ನಡೆದ ೫೦ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ಪ್ರತಿನಿಧಿಗಳನ್ನು ಬೆಂಗಳೂರಿನಿಂದ ದೆಹಲಿಗೆ ಕರೆದುಕೊಂಡು ಹೋಗಲು ವಿಶೇಷ ರೈಲಿನ ವ್ಯವಸ್ಥೆ ಮಾಡಲು ಕಾರ್ಯದರ್ಶಿಗಳೊಡನೆ ಮದ್ರಾಸಿಗೆ ತೆರಳಿ, ಅಲ್ಲಿ ರೈಲಿನ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿ ಅತ್ಯಂತ ಕಡಿಮೆ ದರದಲ್ಲಿ, ೧೫ ಬೋಗಿಗಳ ವಿಶೇಷ ರೈಲಿನ ವ್ಯವಸ್ಥೆ ಮಾಡುವಲ್ಲಿ ಶ್ರೀ ರಾಜಾರಾಯರ ಜಾಣ್ಮೆ, ಪರಿಶ್ರಮ ಬಹಳವಾಗಿ ಸಹಾಯ ಮಾಡಿತ್ತು. ಪರಿಷತ್ತಿನ ತ್ರೈಮಾಸಿಕ ಯೋಜನೆ, ಪಂಚವಾರ್ಷಿಕ ಯೋಜನೆ, ಅನೇಕ ಅಭಿವೃದ್ಧಿಪರ ಯೋಜನೆಗಳಿಗೆ ರೂಪುರೇಷೆ, ಟಿಪ್ಪಣಿ ಸಿದ್ಧಪಡಿಸಿಕೊಡುತ್ತಿದ್ದುದು ಶ್ರೀ ರಾಜಾರಾಯರು. ಹೊರನಾಡಿಗೆ, ಇಂಗ್ಲಿಷ್ ಭಾಷೆಯಲ್ಲಿ ಹೋಗಬೇಕಾದ ಪತ್ರಗಳ ಕರಡು ಸಿದ್ಧಪಡಿಸುತ್ತಿದ್ದುದು ಶ್ರೀ ರಾಜಾರಾಯರು. ಹೀಗೆ ಬಹುಮುಖ ಪ್ರತಿಭೆಯ ಶ್ರೀ ರಾಜಾರಾಯರು ಪ್ರಧಾನವಾಗಿ ನಾಟಕಕಾರರೆಂದೇ ಪ್ರಸಿದ್ಧರಾದವರು."

ಹೀಗೆ ನಾಟಕಕಾರರಾಗಿ, ಆಡಳಿತಗಾರರಾಗಿ, ಸ್ನೇಹಜೀವಿಯಾಗಿ ಬಾಳಿದ ಕೈವಾರ ರಾಜಾರಾಯರ ಬದುಕು ಅನುಕರಣೀಯ.



ರಾಜಾರಾಯರ ಕುಟುಂಬ



ರಾಜಾರಾಯರು ಸಾಂಪ್ರದಾಯಿಕ ಉಡುಪಿನಲ್ಲಿ





ದತ್ತಿ ಸ್ಪರ್ಧೆಯ ಬಹುಮಾನ ಬೆಳ್ಳಿಯ ಕರಂಡಕ



ರಾಜಾರಾಯರ ಮಕ್ಕಳು ಹಾಗೂ ಅವರ ಕುಟುಂಬ ವರ್ಗ

# ಬೆನ್ನುಡಿ

ಶ್ರೀ ಜಗನ್ನಾಥ ಹೇಮಾದ್ರಿಯವರು ರಚಿಸಿರುವ ಶ್ರೀ ಕೈವಾರ ರಾಜಾರಾವ್ ಒಂದು ಅಪರೂಪದ ಕೃತಿಯಾಗಿದೆ. ಶ್ರೀ ಕೈವಾರ ರಾಜಾರಾವ್ ಅವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವ್ಯವಸ್ಥಾಪಕರಾಗಿದ್ದಾಗ ಶ್ರೀ ಹೇಮಾದ್ರಿಯವರು ಅವರ ಮಾರ್ಗದರ್ಶನದಲ್ಲಿ ಕಛೇರಿ ಕೆಲಸಗಳನ್ನು ನಿರ್ವಹಿಸಿದವರು ; ಅವರನ್ನು ಚೆನ್ನಾಗಿ ಬಲ್ಲವರು. ಅವರ ವ್ಯಕ್ತಿತ್ವ, ಕನ್ನಡಪರ ಕಾಳಜಿ, ಕಾರ್ಯವೈಖರಿ, ಸಾಹಿತ್ಯ ಸೇವೆ ಮುಂತಾದ ಹಲವು ಹತ್ತು ವಿಚಾರಗಳನ್ನು ಶ್ರೀ ಹೇಮಾದ್ರಿಯವರು ಪ್ರಸ್ತುತ ಕೃತಿಯಲ್ಲಿ ತುಂಬ ಚೆನ್ನಾಗಿ ನಿರೂಪಿಸಿದ್ದಾರೆ. ಶ್ರೀ ರಾಜಾರಾವ್ ಅವರ ಕೃತಿಗಳಲ್ಲಿ ಬಹುಪಾಲು ನಾಟಕಗಳೇ ಆಗಿರುವುದು ಸ್ವಾರಸ್ಯವಾದ ಸಂಗತಿಯಾಗಿದೆ.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸಾಹಿತಿಗಳ ಜನ್ಮಶತಮಾನೋತ್ಸವ ಆಚರಣೆಯ ಅಂಗವಾಗಿ ಈ ಕಿರು ಹೊತ್ತಗೆಯನ್ನು ಹೊರತರುತ್ತಿದೆ.

**ಡಾ. ಪಿ.ವಿ. ನಾರಾಯಣ**
ಅಧ್ಯಕ್ಷರು
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ